# ನಿಷೇಧಿತ ಔಷಧಗಳು
## ಹಾಗೂ ಹಾನಿಕಾರಕ ಔಷಧಿಗಳು

ಶಾರದಾ ಗೋಪಾಲ
ಡಾ ॥ ಗೋಪಾಲ ದಾಬಡೆ



ಡ್ರಗ್ ಆ್ಯಕ್ಷನ್ ಫೋರಂ – ಕರ್ನಾಟಕ

Nishedhita Aushadhagalu Hagu Hanikarak Aushadhagalu by Dr. Gopal Dabade and Sharada Gopal, Kannada (Banned and Bannable drugs). Aspects of banning of drugs, drugs banned and to be banned in India. Published by Drug Action Forum, Karnataka 57, Soni, Tejaswinagar, Dharwad-580 002.

Price : Rs. 10/- for Organisations and
Rs. 3/- for individuals

© Drug Action Forum - Karnataka


ಪ್ರಥಮ ಮುದ್ರಣ ಮೇ 1991

ಪ್ರಕಟಣೆ :
ಡ್ರಗ್ ಆಕ್ಷನ್ ಫೋರಂ - ಕರ್ನಾಟಕ
57, 'ಸೋನಿ' ತೇಜಸ್ವಿ ನಗರ,
ಧಾರವಾಡ - 580 002.

ಮುದ್ರಣ :
**ಓಮೆಗಾ ಪ್ರಿಂಟರ್ಸ್**
316, ಶಾ. ಪ್ರ. ಮುಖರ್ಜಿ ಮಾರ್ಗ,
ಬೆಳಗಾಂವಿ - 590 001.
ಫೋನ : 24124

# ಸಮರ್ಪಣೆ

## ಡಾ॥ ಓಲಿ ಹ್ಯಾನ್ಸನ್



ಮರಣ : ಮೇ 24, 1985

ಕ್ಲಿಯೋಕ್ವಿನಾಲ್ ಎಂಬ ಔಷಧದಿಂದ ಜಪಾನ್‌ದಲ್ಲಿ 11,000ಕ್ಕೂ ಹೆಚ್ಚು ಜನ ಅಂಗವಿಕಲರಾದುದನ್ನು ಕೋರ್ಟಿನಲ್ಲಿ ಸಾಧಿಸಿ ಜಯಗಳಿಸಿ ಆ ಔಷಧವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದಲೇ ನಿರ್ಗಮಿಸುವಂತೆ ಮಾಡಿದ ಮಹಾನ್ ಸಾಧಕ ಡಾ। ಓಲಿ ಹ್ಯಾನ್ಸನ್ ಅವರಿಗೆ ಗೌರವಪೂರ್ವ ಸಮರ್ಪಣೆ

ಕಾರಣ ಗ್ರಾಹಕ ಜಾಗೃತಿಗಾಗಿ ಬರೆದ ಪುಸ್ತಕವಿದು. ನಿಷೇಧ ಆಗಬೇಕಾದ ಔಷಧಗಳು, ನಿಷೇಧ ಆಗಿಯೂ ಪೇಟೆಯಲ್ಲಿ ಸಿಗುತ್ತಿರುವ ಔಷಧಗಳ ಬಗ್ಗೆ ಜನರೇ ಅರಿತುಕೊಂಡು ಅವುಗಳನ್ನು ದೂರ ಇಡಬೇಕೆಂಬುದು ನಮ್ಮ ಆಶೆ. ಓದುಗರ ಅನುಕೂಲಕ್ಕಾಗಿ ಕೊನೆಯಲ್ಲಿ ನಿಷೇಧವಾಗಿರುವ, ಆಗಬೇಕಾದ ಔಷಧಗಳ ಪಟ್ಟಿ ಕೊಟ್ಟಿದ್ದೇವೆ. ಆದರೆ 70,000 ಕ್ಕೂ ಹೆಚ್ಚು ಔಷಧಗಳು ನಮ್ಮ ದೇಶದಲ್ಲಿರುವಾಗ ಈ ಪಟ್ಟಿ ಪರಿಪೂರ್ಣವಾಗುವದು ಅಸಾಧ್ಯ. ಡಾಕ್ಟರು ಬರೆದುಕೊಟ್ಟಿದ್ದನ್ನೆಲ್ಲ ಪ್ರಶ್ನೆ ಕೇಳದೇ ತಂದು, ಕಣ್ಣು ಮುಚ್ಚಿ ನುಂಗುವ ಬದಲಿಗೆ, ಅದು ಯಾವ ಔಷಧ ? ಅದರಿಂದ ಅಪಾಯ ಇದೆಯೇ ? ಅದು ಅನವಶ್ಯಕವೇ ? ಎಂದು ಪ್ರಶ್ನೆ ಮಾಡುವ ಪ್ರವೃತ್ತಿಯನ್ನು, ಓದುಗರು ರೂಢಿಸಿಕೊಂಡರೆಂದರೆ ನಮ್ಮ ಈ ಚಿಕ್ಕ ಪ್ರಯತ್ನ ಸಾರ್ಥಕ.

ಡಾ। ಗೋಪಾಲ ದಾಬಡೆ
ಶಾರದಾ ಗೋಪಾಲ
'ಡ್ರಗ್ ಆಕ್ಷನ್ ಫೋರಂ' – ಕರ್ನಾಟಕ
57, 'ಸೋನಿ' ತೇಜಸ್ವಿನಗರ
ಧಾರವಾಡ - 580 002

ಮೇ 24, 1991
ಡಾ। ಓಲಿ ಹ್ಯಾನ್ಸನ್ ಡೇ

# 1. ಥಲಿಡೋಮೈಡ್ ದುರಂತ

1961 ನೇ ಇಸ್ವಿ. ಪಶ್ಚಿಮ ಜರ್ಮನಿಯಲ್ಲಿ ಅಲ್ಲಲ್ಲಿ ವಿಕೃತ ಶಿಶುಗಳು ಜನಿಸಿದ್ದು ವರದಿಯಾಗುತ್ತಿದ್ದುದು ವೈದ್ಯ ಗುಂಪಿನಲ್ಲಿ ಭಾರೀ ಕೋಲಾಹಲವನ್ನುಂಟು ಮಾಡಿತ್ತು. ದಿನದಿಂದ ದಿನಕ್ಕೆ, ಇಂಥ ಮಾನವ ಶಿಶುಗಳನ್ನು ನೋಡಿರಲಿಲ್ಲ. ಕೆಲವು ಶಿಶುಗಳಿಗೆ ಕಾಲುಗಳೇ ಇಲ್ಲವಾದರೆ (Amelia–ಎಮಿಲಿಯ) ಇನ್ನುಳಿದವುಗಳಿಗೆ ಕಾಲುಗಳ ಬದಲಿಗೆ ಸೀಲ್ ಮೀನುಗಳಿಗಿರುವಂತೆ ಜಲಪಾದಗಳಿದ್ದವು. (Phoco-melia–ಫೋಕೋಮಿಲಿಯ) ಶಿಶುಗಳನ್ನು ನೋಡಿದವರಿಗೆ ಗಾಬರಿಯಾಗುತ್ತಿತ್ತು.

ಹೆತ್ತ, ತಾಯಂದಿರಿಗೆ ಅವರ ಶಿಶುಗಳನ್ನು ತೋರಿಸಿದಾಗ ಅವರು ದುಃಖ ಅವಮಾನಗಳಿಂದ ಚೀತ್ಕರಿಸಿದರು. "ಅಯ್ಯೋ ಈ ನನ್ನ ಮಗು ಎಂದಿಗೂ ತನ್ನ ಕೈಯಾರ ಉಣ್ಣಲಾರ. ಬೇರೆಯವರ ಸಹಾಯವಿಲ್ಲದೇ ನಡೆಯಲಾರ. ತಾನೇ ಸ್ನಾನ ಮಾಡಲಾರ. ಜೀವನದ ಅತ್ಯವಶ್ಯಕ ಕೆಲಸಗಳಿಗೂ ಇವನಿಗೆ ಬೇರೆಯವರ ಸಹಾಯ ಬೇಕೇಬೇಕು " ಎಂದು ಅತ್ತರು. ಎಷ್ಟೋ ತಾಯಂದಿರು ಬೇಗೆ ತಾಳಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡರು.

ತಾಯಂದಿರ ಜೀವ ದುಃಖಕ್ಕೆ ಸೋತಿತು. ತಂದೆಯರು ಮಾತ್ರ, ಅವಮಾನದಿಂದ ಕೆಂಡವಾದರು. ದೇವರಿಗೆ ಹೀನಾಮಾನ ಬೈದರು. ಕೊನೆಗೆ, 'ದೇವರೆಲ್ಲಿದ್ದಾನೆ ? ಅವನಿದ್ದರೆ ಇಂಥ ಅನ್ಯಾಯವಾಗಲು ಬಿಡುತ್ತಿದ್ದನೆ ? ಅವನಿಲ್ಲವೇ ಇಲ್ಲ' ಎಂದು ಹತಾಶೆಯಿಂದ ಕೈಚೆಲ್ಲಿದರು.

ಅತ್ತ ವೈದ್ಯವಿಜ್ಞಾನಿಗಳು ದಿಘ್ಮೂಢರಾಗಿದ್ದರು. ಹಿಂದೆಂದೂ ಸಂಭವಿಸದಂಥ ಈ ವಿಕೃತ ಶಿಶುಗಳ ಹುಟ್ಟು ಹೇಗಾಯಿತು ? ಏಕಾಯಿತು ? ಇದಕ್ಕೆ ಕಾರಣವೇನು ? ಕೆಲವರು ಸಂಶೋಧನೆಗೆ ಇಳಿದರೆ ಇನ್ನು ಹಲವರು ಊಹೆಗಳಿಗೆ ಚಾಲನೆ ಕೊಟ್ಟರು. ಅಣುಬಾಂಬುಗಳಿಂದ ಹೊರಸೂಸಿದ ವಿಕಿರಣಗಳಿಂದ ಇದಾಗಿರಬಹುದೆ ? ಅಥವಾ ಯಾವುದೋ ಸೂಕ್ಷ್ಮ ಜೀವಿ–ವೈರಸ್ (Virus) ಇದಕ್ಕೆ ಕಾರಣವೇ ? ಎಂಬ ಅಭಿಪ್ರಾಯಗಳು ಚರ್ಚೆಯಲ್ಲಿ ವ್ಯಕ್ತವಾದವು.

ಕೈ ಕಾಲುಗಳು ಊನವಾಗಿರುವುದಷ್ಟೇ ಅಲ್ಲದೇ ಇನ್ನೂ ಅನೇಕ ರೀತಿಯ ಅಂಗವೈಕಲ್ಯಗಳುಳ್ಳ ಶಿಶುಗಳು ಜನಿಸಿದವು. ಕಿವಿಯಿಲ್ಲದವುಗಳು, ಹೃದಯಹೀನವಾದವುಗಳು, ಎಲುಬೇ ಇಲ್ಲದ ಮಕ್ಕಳು, ಕೆಲವು ಅಂಗಗಳಿದ್ದೂ ಅಪೂರ್ಣವಾಗಿರುವವು. ಇನ್ನೆಷ್ಟೋ ಶಿಶುಗಳು ಹುಟ್ಟುತ್ತಲೇ ಸಾವನ್ನಪ್ಪಿ ಅದೃಷ್ಟವಂತ ಎನಿಸಿಕೊಂಡವು.

ಈ ದುರ್ಘಟನೆ ಕಾಣಿಸಿಕೊಂಡ ನಾಲ್ಕು ತಿಂಗಳಲ್ಲಿ ಪ್ರಪಂಚದ ಎರಡು ಬೇರೆ ಬೇರೆ ಮೂಲಗಳಿಂದ ಒಂದೇ ಸಂಶೋಧನೆ ಹೊರಬಿದ್ದಿತು. ಜರ್ಮನಿಯ ಮಕ್ಕಳ ತಜ್ಞನೊಬ್ಬ ಮತ್ತು ಆಸ್ಟ್ರೇಲಿಯಾದ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞ

ಒಬ್ಬ ಇಬ್ಬರೂ ಫೋಕೋಮಿಲಿಯಕ್ಕೆ ಥಲಿಡೋಮ್ಮೆಡ್ ಎಂಬ ಔಷಧವೊಂದು ಕಾರಣವೆಂದು ಪತ್ತೆ ಹಚ್ಚಿದರು.

ಆ ಕೂಡಲೇ ಆಸ್ಟ್ರೇಲಿಯ ಸರಕಾರ ಥಲಿಡೋಮ್ಮೆಡ್‌ನ್ನು ತನ್ನ ಮಾರುಕಟ್ಟೆಯಿಂದ ತೆಗೆದೇಬಿಟ್ಟಿತು. ಬ್ರಿಟನ್- ಜರ್ಮನಿಗಳಲ್ಲಿ ಇನ್ನೊಂದು ತಿಂಗಳ ನಂತರ ಅಲ್ಲದು ನಿಷೇಧಿತವಾದರೆ ಅಮೇರಿಕಾ ಕೂಡ ಇನ್ನೂ ಎರಡು ತಿಂಗಳೊಳಗೆ ಥಲಿಡೋಮ್ಮೆಡ್‌ನ್ನು ಬಹಿಷ್ಕರಿಸಿತು.

## ಥಲಿಡೋಮ್ಮೆಡ್

1956 ರಲ್ಲಿ ಈ ಔಷಧದ ಸಂಶೋಧನೆಯಾಯಿತು. ಜರ್ಮನಿಯ ಕೆ. ಮಿಗ್ರೆಂನೆಂಥಾಲ್ ಎಂಬ ಕಂಪನಿ ಈ ಔಷಧವನ್ನು ಉತ್ಪಾದಿಸಿ ಇದು ಶ್ವಾಸಕೋಶದ ಸೋಂಕು ರೋಗುಗಳಿಗೆ ಔಷಧವೆಂದು ಮಾರುಕಟ್ಟೆಗೆ ತಂದಿತು. ಮರುವರ್ಷ ಇದನ್ನೇ ಮತ್ತು ಬರಿಸಬಲ್ಲ ಔಷಧವೆಂದು ಪ್ರಚಾರ ಮಾಡಿತು. ಅದರ ನಂತರದ ವರ್ಷಗಳಲ್ಲಿ ಥಲಿಡೋಮ್ಮೆಡ್ ಬಗ್ಗೆ ತೀವ್ರವಾದ ಪ್ರಚಾರ ನಡೆಯಿತು. ನೆಗಡಿ, ಕೆಮ್ಮು, ಫ್ಲೂ, ನರರೋಗಗಳು, ತಲೆನೋವು, ಅರೆತಲೆಶೂಲೆ, ಅಸ್ತಮಾ, ಬೇಧಿ ಮಂತಾದ ಎಲ್ಲ ರೋಗಗಳಿಗೂ ಇದೇ ರಾಮಬಾಣವೆಂದು ಜಾಹೀರಾತುಗಳು ಸಾರಿದವು. ಒಟ್ಟಾರೆ ಯಾವುದೇ ರೋಗದ ಹೆಸರು ಹೇಳಿ, ಥಲಿಡೋಮ್ಮೆಡ್ ಅದಕ್ಕೆ ಔಷಧಿ ಎಂದು ಪ್ರಚಾರ ಗಳಿಸಿತು.

ಮಕ್ಕಳು ತೀರ ಹಟಮಾರಿಗಳಾದಾಗ ತಾಯಿಗೆ ತಲೆನೋವಾಗುತ್ತವೆ. ಅಂಥವೇಳೆ ಮಕ್ಕಳಿಗೆ ಸ್ವಲ್ಪ ಥಲಿಡೋಮ್ಮೆಡ್ ಹಾಕಿ ಮಲಗಿಸಿ ಬಿಡುವುದು ಜರ್ಮನಿಯಲ್ಲಿ ಫ್ಯಾಶನ್ ಆಗಿಬಿಟ್ಟಿತು. ಹೀಗೆ ಥಲಿಡೋಮ್ಮೆಡ್‌ಗೆ 'ಪಶ್ಚಿಮ ಜರ್ಮನಿಯ ಬೇಬಿಸಿಟ್ಟರ್' ಎಂಬ ಹೆಸರೂ ಬಂತು.

ಪ್ರಚಾರ, ಜನಪ್ರಿಯತೆ ಏರಿದಂತೆ ಥಲಿಡೋಮ್ಮೆಡ್ ದೇಶಗಳ ಗಡಿದಾಟಿ ಆಫ್ರಿಕಾ, ಏಷಿಯಾ, ಆಸ್ಟ್ರೇಲಿಯಾ, ಕೆನಡಾಗಳನ್ನೂ ಪ್ರವೇಶಿಸಿತು. ಇನ್ನೂ ನೂರಾರು ಕಂಪನಿಗಳು ನೂರಾರು ರೋಗಗಳಿಗೆಂದು ಇದೇ ಔಷಧದ ಉತ್ಪಾದನೆಯಲ್ಲಿ ತೊಡಗಿದವು. 'ಯಾವುದೇ ಅಡ್ಡಪರಿಣಾಮ ಇಲ್ಲದ ಔಷಧ' ಎಂದು ಹೆಸರುಗಳಿಸಿದ ಇದನ್ನು ವೈದ್ಯರ ಚೀಟಿ ಇಲ್ಲದೆಯೂ ಪೇಟೆಯಲ್ಲಿ ಖರೀದಿಸಲು ಸಾಧ್ಯವಾಗುತ್ತಿತ್ತು.

'ಮಕ್ಕಳ ಮೇಲೂ ಯಾವುದೇ ದುಷ್ಪರಿಣಾಮವಿಲ್ಲ. ಇದೀಗ ಜನಿಸಿದ ಮಗುವಿಗೆ ಬೇಕಾದರೂ ಕೊಡಿ' ಎಂದು ಜಾಹೀರಾತುಗಳು ಹೇಳಹತ್ತಿದ್ದವು. ಗರ್ಭಿಣಿ ಸ್ತ್ರೀಯರಿಗೆ ಬೆಳಗಿನ ವಾಂತಿ, ಸುಸ್ತು ತಡೆಯಲಿಕ್ಕೆ ಅತಿಯಾಗಿ ಉಪಯೋಗವಾಗತೊಡಗಿತು.

ಅತೀ ಉಪಯೋಗ ನಡೆಯುತ್ತಿದ್ದಂತೆ ಔಷಧ ತನ್ನ ಕೆಟ್ಟ ಗುಣವನ್ನು ತೋರಲಾರಂಭಿಸಿತು. ತಲೆಗೆ ಚಕ್ರ ಬರುವುದು. ಸಮತೋಲನ ತಪ್ಪುವುದು, ಇವು

ಮೊದಲು ಕಂಡ ಅಡ್ಡ ಪರಿಣಾಮಗಳು. 'ನೀವು ಬಹಳಕಾಲದವರೆಗೆ ಇದೇ ಔಷಧವನ್ನು ಬಹಳಷ್ಟು ನುಂಗಿರಬೇಕು' ಎಂದು ಔಷಧ ಕಂಪನಿ ಉತ್ತರಿಸಿತು. ಔಷಧದ ಸ್ಟ್ರಿಪ್‌ನ ಮೇಲೆ ಚಿಕ್ಕದಾಗಿ 'ಅಪರೂಪಕ್ಕೊಮ್ಮೆ ಮಲಬದ್ಧತೆ ಆಗಬಹುದು' ಎಂಬ ಅಕ್ಷರಗಳು ಕಾಣಿಸಿಕೊಂಡವು.

'ಈ ಔಷಧದಿಂದ ಮಿದುಳಿಗೆ, ನರಕಾಂಡಕ್ಕೆ ಅಪಾಯ ಇರಬಹುದೇ?' ಎಂದು ಕೆಲ ವಿಜ್ಞಾನಿಗಳ ಪ್ರಶ್ನೆಗೆ, 'ಏನೇನೂ ಅಪಾಯ ಇಲ್ಲ' ಎಂದು ಉತ್ತರಿಸಿ, ಔಷಧ ದುಃಷ್ಪರಿಣಾಮಗಳನ್ನು ಬಯಲಿಗೆಳೆದ ವೈದ್ಯರನ್ನು, ವಿಜ್ಞಾನಿಗಳನ್ನು ಸುಮ್ಮನಿರಿಸಲು ಕಂಪನಿಗಳು ಪ್ರಯತ್ನಿಸಿದವು. ಕಾನೂನು ಮಾಡುವ ಮಂತ್ರಿ-ಅಧಿಕಾರಿಗಳನ್ನು ಪ್ರಸನ್ನಗೊಳಿಸುವ ಪ್ರಯತ್ನಗಳು ನಡೆದವೇ ಹೊರತು, ಜನರು ಅಪಾರವಾಗಿ ಉಪಯೋಗಿಸುತ್ತಿರುವ ಔಷಧದಿಂದ ಕೆಟ್ಟ ಪರಿಣಾಮಗಳಿರಬಹುದೆಂದು ಕಂಪನಿಗಳು ಒಪ್ಪಲಿಲ್ಲ.

ಇದೇ ವೇಳೆಗೆ ವಿಕಲಾಂಗ ಶಿಶುಗಳು, ಫೋಕೋಮಿಲಿಯ ಜಾತಿಯ ಮಕ್ಕಳು ಹುಟ್ಟಲಾರಂಭಿಸಿದವು. ಗರ್ಭಿಣಿಯ ಮೊದಲ ಮೂರು ತಿಂಗಳ ಅವಧಿ ಅತ್ಯಂತ ನಾಜೂಕಿನದು. ಭ್ರೂಣದ ಅಂಗಗಳು ಟಿಸಿಲೊಡೆಯುವ ಹಂತವಿದು. ಈ ವೇಳೆಯಲ್ಲಿ ಔಷಧ ಸೇವನೆ ಆಯಿತೆಂದರೆ ಅದು ಹುಟ್ಟಲಿರುವ ಶಿಶುವಿನ ಮೇಲೆ ತೀವ್ರ ದುಃಷ್ಪರಿಣಾಮವುಂಟುಮಾಡುತ್ತದೆ. ಥಲಿಡೋಮೈಡ್ ಗರ್ಭಿಣಿಯರಿಗೆ 'ಮುಂಜಾವಿನ ತೊಂದರೆಗಳಿಗೆ ಅತ್ಯುತ್ತಮ ಔಷಧ'ವೆಂದು ಮಾರಾಟವಾಗುತ್ತಿತ್ತು. ಅದನ್ನು ಸೇವಿಸಿದ್ದ ಪರಿಣಾಮವೇ ಈ 'ಫೋಕೋ-ಮಿಲಿಯ' ಶಿಶುಗಳು.

ಔಷಧವೊಂದರಿಂದ ದುಃಷ್ಪರಿಣಾಮವೂ ಸಾಧ್ಯ ಎಂದು ಸಾಬೀತಾದಂತಾಯಿತು. ಅಲ್ಲಿಯವರೆಗೂ ಔಷಧವೆಂದರೆ ರೋಗವನ್ನು ಗುಣಮಾಡುವಂಥದ್ದು ಮಾತ್ರ ಎಂಬ ನಂಬಿಕೆ ಜನರಲ್ಲಿತ್ತು. ಥಲಿಡೋಮೈಡ್ ಅಪಾಯಕಾರಿ ಔಷಧ ಎಂದು ಸಾಬೀತುಗೊಳಿಸಲು ಸ್ವತಃ ವೈದ್ಯರೇ ಹೋರಾಡಿದರು. ಅನೇಕ ವೈದ್ಯಪತ್ನಿಯರೇ ವಿಕಲಾಂಗ ಮಕ್ಕಳಿಗೆ ಜನ್ಮವಿತ್ತದ್ದೂ ಇದಕ್ಕೆ ಕಾರಣವಿರಬಹುದು.

ಆ ವರ್ಷದ ಕೊನೆಯವೇಳೆಗೆ ಥಲಿಡೋಮೈಡ್ ಸಂಬಂಧ ಸಾಕಷ್ಟು ವಾದವಿವಾದಗಳೆದ್ದವು. ಆದರೆ ಔಷಧ ಕಂಪನಿಗಳು ಇದೊಂದನ್ನೂ ತಲೆಯೊಳಗೆ ಹಾಕಿಕೊಳ್ಳಲಿಲ್ಲ. ತಮ್ಮ ಔಷಧ ಅತ್ಯಂತ ಕ್ಷೇಮಕರವಾದದ್ದು ಇದನ್ನು ಮೂಲೆಗೆ ತಳ್ಳಬೇಕೆಂದು ತಮಗಾಗದವರು ಮಾಡುತ್ತಿರುವ ಕಿತಾಪತಿ ಇದೆಲ್ಲ ಎಂದು ಅವು ವಾದಿಸಿದವು. ಕೊನೆಗೂ ದಿನಪತ್ರಿಕೆಗಳಲ್ಲಿ ಥಲಿಡೋಮೈಡ್ ಬಗ್ಗೆ ಲೇಖನಗಳು ಪ್ರಕಟ ಆಗತೊಡಗಿದಾಗ ಔಷಧವನ್ನು ಹಿಂತೆಗೆದುಕೊಳ್ಳದೇ ಗತ್ಯಂತರವಿರಲಿಲ್ಲ. ಔಷಧ ಮಾರುಕಟ್ಟೆಯಿಂದ ಮರೆಯಾಗುತ್ತಲೇ ಫೋಕೋಮಿಲಿಯ ಮಕ್ಕಳು ಹುಟ್ಟುವುದು ಕಡಿಮೆ ಆಗುತ್ತ ಬಂದು ಕೊನೆಗೆ ನಿಂತೇ ಬಿಟ್ಟಿತು.

ಒಂದು ಲೆಕ್ಕದ ಪ್ರಕಾರ ೨೦ ದೇಶಗಳಲ್ಲಿ ಒಟ್ಟು ೨೦,೦೦೦ ಮಕ್ಕಳು ಅಂಗವಿಕಲರಾಗಿ ಹುಟ್ಟಿದ್ದರು. ಆದರೆ ಅಮೇರಿಕಾದಲ್ಲಿ ಮಾತ್ರ, ಇಂಥ ಮಕ್ಕಳ ಸಂಖ್ಯೆ ಸಾಕಷ್ಟು ಕಡಿಮೆ ಇತ್ತು. ಅದಕ್ಕೆ ಕಾರಣ ಆ ದೇಶದಲ್ಲಿ ಥಲಿಡೋಮೈಡ್‌ನ್ನು 'ಎಲ್ಲ ರೋಗಕ್ಕೂ ಬರುವ ಔಷಧ ' ಎಂದು ಮಾರಗೊಟ್ಟಿರಲಿಲ್ಲ. ಅಲ್ಲಿ ಆಹಾರ ಮತ್ತು ಔಷಧ ಇಲಾಖೆಯ ತಜ್ಞೆ ಡಾ। ಫ್ರಾನ್ಸಿಸ್ ಕೆಲ್ಸಿ ಎಂಬಾಕೆ ಆ ಔಷಧದ ಅತಿಬಳಕೆಯನ್ನು ತಡೆಹಿಡಿದ್ದಳು. ಕಂಪನಿಗಳು ಎಷ್ಟೇ ಒತ್ತಡ ತಂದಿದ್ದರೂ ವೈಜ್ಞಾನಿಕ ಕಾರಣಗಳಿಗಾಗಿ ನಿಯಂತ್ರಣದಲ್ಲಿಟ್ಟಿದ್ದಳು. ಈಕೆಯ ಈ ಸೇವೆಯನ್ನು ಮೆಚ್ಚಿ ಅಂದಿನ ರಾಷ್ಟ್ರಾಧ್ಯಕ್ಷ ಕೆನಡಿಯವರು ಈಕೆಗೆ ರಾಷ್ಟ್ರದ ಅತ್ಯುನ್ನತ ಗೌರವವಾದ ಅಧ್ಯಕ್ಷರ ಪದಕವನ್ನಿತ್ತು ಗೌರವಿಸಿದರು.

ಔಷಧ ಪ್ರಪಂಚದಿಂದ ಮೊತ್ತ ಮೊದಲು ನಿರ್ಗಮಿಸಿದ ಔಷಧವಿದು. ಅಲ್ಲಿಯವರೆಗೂ ಜನರು ಔಷಧದಿಂದ ಒಳ್ಳೆಯ ಪರಿಣಾಮಗಳಷ್ಟೇ ಸಾಧ್ಯವೆಂದು ನಂಬಿದ್ದರು. ಔಷಧಗಳು ಅಪಾಯಕಾರಿ ಆಗಬಹುದು. ಅವನ್ನು ನಿಷೇಧಿಸಬೇಕಾಗಬಹುದು ಎಂಬ ಕಲ್ಪನೆ ಬಂದಿದ್ದೇ ಆಗ. ಅಂತೆಯೇ ಹಣಗಳಿಸುವುದಕ್ಕಾಗಿ ಔಷಧ ಕಂಪನಿಗಳು ಎಷ್ಟು ಸುಳ್ಳು ಹೇಳಬಹುದು, ಎಂಥ ವಾಮಮಾರ್ಗಗಳನ್ನು ಹಿಡಿಯಬಹುದು, ಆರೋಗ್ಯದ ಹೆಸರಿನಲ್ಲಿ ಅನಾರೋಗ್ಯವನ್ನು ಜನಕ್ಕೆ ಕೊಡಬಹುದು ಎಂಬ ಕಲ್ಪನೆ ಬಂದಿದ್ದು ಆಗಲೇ.

## 2. ಔಷಧ ನಿಷೇಧ ಏಕೆ ?

ಪ್ರತಿಯೊಂದು ವಸ್ತುವಿಗೂ – ಅದು ಔಷಧವಿರಲಿ ಅಥವಾ ಇನ್ನಾವುದೇ ವಸ್ತುವಿರಲಿ – ಒಳ್ಳೆಯ ಮತ್ತು ಕೆಟ್ಟ ಗುಣಗಳೆರಡೂ ಇದ್ದೇ ಇರುತ್ತವೆ. ಚೂರಿಯನ್ನು ನಾವು ಹಣ್ಣು, ಕತ್ತರಿಸಲಿಕ್ಕೂ ಉಪಯೋಗಿಸಬಹುದು, ವೈದ್ಯ ಸರ್ಜರಿಗೆಂದೂ ಉಪಯೋಗಿಸಬಹುದು, ಹಾಗೆಯೇ ಕೊಲೆಗಾರನೊಬ್ಬ ಇನ್ನೊಬ್ಬರ ಜೀವತೆಗೆಯಲಿಕ್ಕೂ ಉಪಯೋಗಿಸಬಹುದು.

ಇದೇ ರೀತಿ ಯಾವುದೇ ಔಷಧ ಕೂಡ. ಅದರ ಅತಿಯಾದ ಉಪಯೋಗವಂತೂ ಹಾನಿ ಮಾಡೇ ಮಾಡುತ್ತದೆ. ಕೆಲವೊಂದು ಔಷಧಗಳನ್ನು ತೀರ ಕಡಿಮೆ ಸೇವಿಸಿದರೂ ಅಡ್ಡ ಪರಿಣಾಮದಿಂದ ಅನಾಹುತ ಆಗಬಹುದು ಉದಾಹರಣೆ ಅನಾಲ್ಜಿನ್ (Analgin). ಹಾಗಿರುವಾಗ ಆ ಔಷಧದ ಉಪಯುಕ್ತತೆ ಹೆಚ್ಚೇ, ಅನಾಹುತ ಹೆಚ್ಚೇ ಎಂದು ತುಲನೆ ಮಾಡಬೇಕಾಗುತ್ತದೆ. ಅಪಾಯವೇ ಜಾಸ್ತಿ ಎಂದಾದರೆ ಖಂಡಿತ ಆ ಔಷಧವನ್ನು ಪೇಟೆಯಿಂದ ಹೊರತೆಗೆಯ-ಬೇಕಾಗುತ್ತದೆ.

ಇನ್ನು ಕೆಲವು ಔಷಧಗಳು ಅಪಾಯ ಮಾಡಬಹುದಾದರೂ ಕೂಡ ಕೆಲವೊಂದು ಜಡ್ಡಿಗೆ ರಾಮಬಾಣವೂ ಆಗಿರಬಹುದು. ಉದಾಹರಣೆ ಪನಿಸಿಲಿನ್ (Pencillin). ಹಾಗಿದ್ದಾಗ ಅಂಥ ಔಷಧಗಳ ಅತಿಯಾದ ಬಳಕೆಯನ್ನು ನಿಷೇಧಿಸಿ ಉಪಯೋಗ ಬರುವ ಆ ಜಡ್ಡಿಗೆ ಮಾತ್ರ ಅದನ್ನು ಬಳಸುವಂತ ಕಾನೂನು ಮಾಡಬೇಕಾಗುತ್ತದೆ.

ಔಷಧ ನಿಷೇಧವೆಂದಕೂಡಲೇ ನಮ್ಮ ಕಲ್ಪನೆಗೆ ಬರುವುದು ಆ ಔಷಧಗಳು ಅಪಾಯಕಾರಿ ಎಂದು ಮಾತ್ರ. ಆದರೆ ಹಾಗಿಲ್ಲ. ಕೆಲವು ನಿರಪಾಯ ಕಾರಿ ಔಷಧಗಳನ್ನೂ ನಿಷೇಧಮಾಡಬೇಕಾಗುತ್ತದೆ. ಅವಶ್ಯಕ ಔಷಧದ ಜೊತೆಗೆ ವಿಟಮಿನ್‌ಗಳನ್ನು ಸೇರಿಸಿ ಕಂಪನಿಗಳು ಮಾರುತ್ತವೆ. ಅದ್ದರಿಂದ ಅವು ಜನಸಾಮಾನ್ಯರಿಗೆ ಅಕಾರಣವಾಗಿ ಕೈಗೆಟುಕದಂತಾಗುತ್ತವೆ. ಹೀಗಾದಾಗ ಅಂಥ ಔಷಧಗಳನ್ನು ನಿಷೇಧ ಮಾಡಬೇಕಾಗುತ್ತದೆ. ಉದಾ : ಟೆಟ್ರಾಸೈಕ್ಲಿನ ಜೊತೆ ವಿಟಮಿನ್ ಸಿ ಮಿಶ್ರಣ (Tetracycline with Vit. C.)

ಎರಡು ಬೇರೆಬೇರೆ ಉಪಯುಕ್ತ ಔಷಧಗಳನ್ನು ಮಿಶ್ರಮಾಡಿ ಮಾರುವುದುಂಟು. ಎರಡೂ ಪ್ರತ್ಯೇಕವಾಗಿದ್ದಾಗ ಅತಿ ಉಪಯುಕ್ತ ಎನಿಸುವ ಇವುಗಳು ಮಿಶ್ರ ಸಂಯುಕ್ತವಾದಾಗ ಅದರ ದುರುಪಯೋಗ ಆಗಲಾರಂಭಿಸುತ್ತದೆ. ಅತಿಯಾದ ಬಳಕೆಯಾದಾಗ ಆ ಉಪಯುಕ್ತ ಔಷಧಕ್ಕೆ ರೋಗಾಣುಗಳು ಪ್ರತಿರೋಧ ಬಳಸಿಕೊಂಡು ಮುಂದೆ ಅದನ್ನು ಬಳಸಬೇಕಾದಲ್ಲಿ ಬಳಸಿದಾಗ ನಿರುಪಯೋಗಿ ಆಗಿ ಬಿಡುತ್ತದೆ ಉದಾ : ಪನಿಸಿಲಿನ್ + ಸ್ಟ್ರೆಪ್ಟೋಮೈಸಿನ್ (Pencillin + Streptomycin) ಇಂಥ ಮಿಶ್ರ ಸಂಯುಕ್ತಗಳನ್ನು ಪೇಟೆಯಲ್ಲಿರದಂತೆ ತಡೆಯುವುದು ಅತ್ಯವಶ್ಯಕ.

ಅಮೇರಿಕಾದಲ್ಲಿನ ಕಾನೂನು ಒಂದು ತಮ್ಮ ದೇಶದಲ್ಲಿ ಕೇವಲ ಪ್ರಾಣಿಗಳ ಮೇಲೆ ಪ್ರಯೋಗ ಮಾಡಿದ ಸಂಯುಕ್ತಗಳನ್ನೂ ತೃತೀಯ ರಾಷ್ಟ್ರಗಳಲ್ಲ ಔಷಧವೆಂದು ಮಾರಲು ಅವಕಾಶ ಕೊಡುತ್ತದೆ. ತಮ್ಮಲ್ಲಿ ನಿಷೇಧವಾದ ಔಷಧಗಳನ್ನು ಇಲ್ಲಿ ತಂದು ಸುರಿಯಲು ಅವರ ಕಾನೂನು ವ್ಯವಸ್ಥೆ ಸಾಧ್ಯಮಾಡಿಕೊಡುತ್ತದೆ.

ಇದೊಂದು ತೀರ ಅಪಾಯಕಾರಿ ಬೆಳವಣಿಗೆ. ಮುಂದುವರಿದ ರಾಷ್ಟ್ರಗಳ ವ್ಯಾಪಾರಿಗಳಿಗಿರಲಿ, ಅಲ್ಲಿನ ಸರಕಾರಗಳಿಗೂ ಬಡದೇಶಗಳ ಹಿತಚಿಂತನೆ ಇಲ್ಲವೆಂಬುದು ಸ್ಪಷ್ಟ. ಬದಲಿಗೆ ಅವು ತೃತೀಯ ಜಗತ್ತಿನ ದೇಶಗಳನ್ನು ತಮಗೆ ಬೇಡವಾದುದನ್ನು ಚೆಲ್ಲುವ ಕಸದ ಬುಟ್ಟಿಯಂತೆ ಬಳಸುತ್ತಿದ್ದಾರೆಂಬುದೂ ಸುಸ್ಪಷ್ಟ. ಆ ಕಸಕ್ಕೂ ಕೂಡ ಬೆಲೆ ಬಹಳ ! ಹೀಗಿರುವಾಗ ಇಲ್ಲಿ ಬರುವ ಅಪಾಯ ಕಾರಿ, ಅನವಶ್ಯಕ ಸಂಯುಕ್ತಗಳನ್ನು ತಡೆಯುವುದು ನಮಗೆ ಬಿಟ್ಟಿದೆ. ಅದು ನಮ್ಮ ಕರ್ತವ್ಯ ಕೂಡಾ.

ಆದರೆ ಈ ಮಾತನ್ನು ಅನೇಕರು ಒಪ್ಪುವುದಿಲ್ಲ. ಅಲ್ಲಿ ಅಪಾಯ ಎನಿಸಿದ್ದು ನಮಗೂ ಅಪಾಯಕಾರಿ ಎಂದೆನ್ನುವುದು ತಪ್ಪು. ನಾವು ಅನುವಂಶೀಯವಾಗಿ ಬೇರೆ ರಕ್ತಗುಣದವರು. ನಮ್ಮಲ್ಲಿನ ಪರಿಸರ, ವಾತಾವರಣವೂ ಬೇರೆ ಹೀಗಿರುವಾಗ ಅವರಿಗೆ ಅಪಾಯಕಾರಿ ಆಗಿದ್ದು ನಮಗೆ ಉಪಯೋಗಕಾರಿ ಆಗಬಹುದು. ಎಂದು ! ಹೀಗೆ ವಾದಿಸುವವರು ಅಲ್ಲಿಂದ ಔಷಧಗಳನ್ನು ಮೊಟ್ಟ ಮೊದಲು ತಂದು ಸುರಿಯುವಾಗ ಈ ಅಭಿಪ್ರಾಯ ಮುಂದಿಡಲಿಲ್ಲವೇಕೆ ? ಅವರಿಗೆ ಅಪಾಯವಾಗಿದ್ದು ನಮಗೆ ಆಗದಿರಬಹುದು. ಹಾಗೆಯೇ ಅವರಿಗೆ ಉತ್ತಮವೆನಿಸಿದ್ದು ನಮಗ ಆಗದಿರಬಹುದು ಅಲ್ಲವೇ? ಅವು ನಮಗೆ ಅಪಾಯ ಕಾರಿ ಆಗಬಹುದಾದ ಸಾಧ್ಯತೆ ಇದೆ ಎಂದಿವರು ಎಂದಾದರೂ ಯೋಚಿಸಿ-ದ್ದಿದೆಯ ೀ ? ಔಷಧ ಸ್ವೀಕರಿಸುವಾಗ ಇಲ್ಲದ ಅಭಿಪ್ರಾಯ, ಔಷಧ ನಿಷೇಧವೆಂದ-ಕೂಡಲೇ ಏಕೆ ?

ನಿಷೇಧಿತ ಔಷಧಗಳೆಂದಕೂಡಲೇ ಓದುಗರಿಗೆ ಕೀಳುಮಟ್ಟದ ಔಷಧಗಳ (Sub standard) ಕಲ್ಪನೆ ಬರಬಹುದು. ಆದರೆ ನಾವಿಲ್ಲಿ ಹೇಳಹೊರಟಿರುವುದು ಅವನ್ನಲ್ಲ. ಇವು ಉನ್ನತ ಮಟ್ಟದ ಔಷಧಗಳೇ ಇರಬಹುದು. ಇವುಗಳಲ್ಲಿ ಕಲ-ಬೆರಕೆ ಆಗಿಲ್ಲದಿರಬಹುದು. ಆದರೂ ನಿಷೇಧಯೋಗ್ಯ ಔಷಧಗಳಿವು.

## 3. ಇ. ಓ. ಸಂಯುಕ್ತಗಳು

ಐರೋಪ್ಯ ದೇಶಗಳಲ್ಲಿ ಥಲಿಡೋಮೈಡ್ ಕ್ರಾಂತಿ ಎಬ್ಬಿಸಿದಂತೆ ಭಾರತದಲ್ಲಿ ಇ. ಓ. ಸಂಯುಕ್ತಗಳು ಕ್ರಾಂತಿಗೆ ಕಾರಣವಾದವು. 1961–62 ರಲ್ಲಿ ಅಲ್ಲಿ ಥಲಿಡೋಮೈಡ್ ವಿರುದ್ಧ ಹೋರಾಟ ನಡೆದಂತೆಯೇ 1982 ರಿಂದ 88 ರ ವರೆಗೆ ಭಾರತದಲ್ಲಿ ಇ. ಓ. ಸಂಯುಕ್ತಗಳ ವಿರುದ್ಧ ಹೋರಾಟ ನಡೆಯಿತು. ಇ. ಓ. ಸಂಯುಕ್ತಗಳನ್ನು 'ಭಾರತದ ಥಲಿಡೋಮೈಡ್ ' ಎಂದು ಕರೆಯಬಹುದು.

ಇಸ್ಟ್ರೋಜನ್ ಪ್ರೊಜೆಸ್ಟರಾನ್‌ಗಳ ಮಿಶ್ರ ಸಂಯುಕ್ತಗಳು ಗರ್ಭಧಾರಣೆ ತಡೆಯಬಲ್ಲ ಮಾತ್ರೆಗಳಾಗಿ 1955 ರಲ್ಲಿ ಮಾರುಕಟ್ಟೆಗೆ ಬಂದವು. ಇಸ್ಟ್ರೋಜನ್ ಮತ್ತು ಪ್ರೊಜೆಸ್ಟರಾನ್‌ಗಳು ಹೆಣ್ಣುಮಕ್ಕಳ ದೇಹದಲ್ಲಿ ಉತ್ಪಾದನೆ ಆಗುವ ಎರಡು ಬೆದೆಜನಕ ಹಾರ್ಮೋನುಗಳು. ಈ ಹಾರ್ಮೋನುಗಳ ಸ್ರಾವ ಹೆಚ್ಚಾಗುತ್ತಲೇ ಹುಡುಗಿ ಹೆಂಗಸಾಗುತ್ತಾಳೆ. ಅವಳು ತಿಂಗಳು ತಿಂಗಳು ಮುಟ್ಟಾಗುವದು ಪ್ರಾರಂಭವಾಗುತ್ತದೆ.

ಇಸ್ಟ್ರೋಜನ್ ಮತ್ತು ಪ್ರೊಜೆಸ್ಟರಾನ್‌ಗಳ ಮುಖ್ಯ ಕೆಲಸವೆಂದರೆ ತಿಂಗಳು ತಿಂಗಳೂ ಅಂಡಾಣು ಗರ್ಭಕೋಶದಲ್ಲಿ ಬೆಳೆಯುತ್ತಿದ್ದಂತೆ ಗರ್ಭಾಶಯ-ದಲ್ಲಿ ಮಗುವನ್ನು ಬೆಳಸಲಿಕ್ಕಾಗಿ ತೊಟ್ಟಿಲು-ಹಾಸಿಗೆಗಳನ್ನು ಸಿದ್ಧಪಡಿಸುವುದು. ತಿಂಗಳ ಕೊನೆಯವರಗೂ ಅಂಡಾಣು ವೀರ್ಯಾಣು ಸೇರಿ ಫಲಿತ ಆಗಲಿಲ್ಲವೆಂದರೆ ಎಲ್ಲವನ್ನೂ ಮತ್ತೆ ಹೊರಚೆಲ್ಲುವುದು. ಪ್ರತಿ ತಿಂಗಳೂ ತಪ್ಪದೆ ಹುಡುಗಿ ಹ್ನನೆರೆದಂದಿನಿಂದ 45 ವರ್ಷಗಳವರೆಗೂ ಈ ಕೆಲಸ ಸತತವಾಗಿ ನಡೆಯು ತ್ತಿರುತ್ತದೆ.

ಇವೆರಡೂ ಹಾರ್ಮೋನುಗಳನ್ನು ಕೃತಕವಾಗಿ ತಯಾರಿಸಿ 1955 ರಲ್ಲಿ ಗರ್ಭಧಾರಣೆ ತಡೆಯಲೆಂದು ಉಪಯೋಗಿಸಲಾಯಿತು. 1960 ರ ಹೊತ್ತಿಗೆ ಇದೇ ಹಾರ್ಮೋನುಗಳನ್ನು ಜಾಸ್ತಿ ಪ್ರಮಾಣದಲ್ಲಿ ಬೆರೆಸಿದ ಹೊಸ ಸಂಯುಕ್ತ-ವೊಂದು ಪೇಟೆಗೆ ಬಂತು. ಈ ಸಂಯುಕ್ತವನ್ನು ಮಾತ್ರೆ, ಅಥವಾ ಇಂಜೆಕ್ಷನ್ ರೂಪದಲ್ಲಿ ಮಹಿಳೆ ಸೇವಿಸಿದರೆ ಗರ್ಭಧಾರಣೆ ಪರೀಕ್ಷೆ ಮಾಡಬಹುದು ಎಂದು ವೈದ್ಯ ವಿಜ್ಞಾನಿಗಳು ಕಂಡುಹಿಡಿದರು. ಅದು ಹೇಗೆಂದರೆ ;

ಮಹಿಳೆ ಗರ್ಭಧರಿಸಿದಾಗ ಅವಳಲ್ಲಿನ ಇಸ್ಟ್ರೋಜನ್ ಮತ್ತು ಪ್ರೊಜೆಸ್ಟರಾನ್‌ಗಳ ಉತ್ಪಾದನೆ ಗಣನೀಯವಾಗಿ ಏರುತ್ತದೆ. ಕೃತಕವಾಗಿ ತಯಾ-ರಿಸಿದ ಇ. ಓ. ಸಂಯುಕ್ತವನ್ನು ಕೊಟ್ಟು ಹಟಾತ್ ನಿಲ್ಲಿಸಿದರೆ ಗರ್ಭಿಣಿಗೆ ರಕ್ತಸ್ರಾವ ಆಗುವುದಿಲ್ಲ. ಗರ್ಭಧರಿಸಲ್ಲವೆಂದರೆ ರಕ್ತಸ್ರಾವ ಆಗುತ್ತದೆ ಹೀಗೆ ರಕ್ತಸ್ರಾವ ಆಯಿತೆಂದರೆ ಗರ್ಭಿಣಿ ಅಲ್ಲವೆಂದರ್ಥ. ಆಗಲಿಲ್ಲವೆಂದರೆ ಗರ್ಭಿಣಿಯಾ ಗಿದ್ದಾಳೆಂದರ್ಥ.

ಈ ಶೋಧನೆ ಆಗುತ್ತಲೇ ಔಷಧ ಕಂಪನಿಗಳು ಇ. ಓ. ಸಂಯುಕ್ತಗಳ ತೀವ್ರ ಪ್ರಚಾರ ನಡೆಸಿದವು. ಕೇವಲ ಗರ್ಭಪರೀಕ್ಷೆಗಷ್ಟೇ ಅಲ್ಲ, ಗರ್ಭಕೋಶದ ಯಾವುದೇ ಕಾಯಿಲೆಗೂ ಇದು ದಿವ್ಯೌಷಧ ಎಂದು ಸಾರಿದವು. ತೀರಾ ಇತ್ತೀಚಿನವರೆಗೂ ಗರ್ಭಪರೀಕ್ಷೆಗೆ ಇದೊಂದೇ ಔಷಧವಾಗಿತ್ತು.

ಕ್ರಮೇಣ ಇ. ಓ. ಸಂಯುಕ್ತಗಳ ಕರಾಳ ಮುಖ ಗೋಚರ ಆಗತೊಡಗಿತು. ವೈದ್ಯಕೀಯ ಪತ್ರಿಕೆಗಳಲ್ಲಿ ಸಂಶೋಧನ ಲೇಖನಗಳು ಪ್ರಕಟಗೊಂಡವು. ಗರ್ಭ ಪರೀಕ್ಷೆಗೆ ಇದು ಯೋಗ್ಯವಲ್ಲವೆಂದು ಪತ್ತೆಯಾಯಿತು. ಇ. ಓ. ಸಂಯುಕ್ತಗಳನ್ನು ಗರ್ಭಿಣಿಯರು ಸೇವಿಸಿದ್ದರ ಫಲವಾಗಿ ವಿಕಲಾಂಗ ಮಕ್ಕಳು ಜನಿಸುತ್ತವೆಂದೂ ತಿಳಿದುಬಂದಿತು. 1975 ರಲ್ಲೇ ಆಸ್ಟ್ರೇಲಿಯಾ ಸರಕಾರ ಇ. ಓ. ಸಂಯುಕ್ತಗಳನ್ನೆಲ್ಲ ನಿಷೇಧ ಮಾಡಿತು.

ಗರ್ಭ ಪರೀಕ್ಷೆಗೆ ಯೋಗ್ಯವಲ್ಲದಿದ್ದರೆ ಗರ್ಭಪಾತಕ್ಕೆ ಬಳಸಬಹುದಲ್ಲ ಎಂದು ವೈದ್ಯರು ತಪ್ಪಾಗಿ ತೀರ್ಮಾನಿಸಿಬಿಟ್ಟರು. ಕೂಡಲೇ ಅದೇ ಔಷಧ ಬೇರೆ ಕೆಲಸಕ್ಕೆಂದು ಪೇಟೆಯಲ್ಲಿ ಸಿಗತೊಡಗಿತು. ಅಷ್ಟೇ ಅಲ್ಲ. ಅತಿಯಾಗಿ ದುರ್ಬಳಕೆ ಯಾಗತೊಡಗಿತು.

ನಮ್ಮಲ್ಲಿ ಮದುವೆಗೆ ಮೊದಲು ಹೆಣ್ಣು ಗರ್ಭಧರಿಸುವುದು ನಿಷೇಧ. ಹಾಗೇನಾದರೂ ಆಯಿತೆಂದರೆ ಬೇರೆಯವರಿಗದು ತಿಳಿಯುವ ಮೊದಲೇ ಹೆಣ್ಣು ಗರ್ಭ ತೆಗೆಸಬೇಕಾಗುತ್ತದೆ. ಹೀಗೆ ಕದ್ದು ಮುಚ್ಚಿ ಗರ್ಭ ತೆಗೆಸಲು ಮುಂದಾಗುವವರಿಗೆ ಇ. ಓ. ಸಂಯುಕ್ತಗಳು ವರವಾಗಿ ಕಂಡವು. ಆದರೆ. . . . ವರವಾಗಬೇಕಾದ್ದು ಶಾಪವಾದುವಷ್ಟೇ. ಇ. ಓ. ಸಂಯುಕ್ತಗಳು ಗರ್ಭಪಾತವನ್ನು ಮಾಡುವಲ್ಲಿ ಸಹಾಯ ಮಾಡುವುದೇ ಇಲ್ಲ.

ಬದಲಿಗೆ ಅದೇ ಚಿಗುರುತ್ತಿರುವ ಭ್ರೂಣದ ಅಂಗಗಳನ್ನು ಊನ ಮಾಡುತ್ತದೆ. ಇನ್ನೂ ಜನಿಸದ ಶಿಶುವಿನಲ್ಲಿ ಹೃದಯರೋಗದಂಥ ಭಯಂಕರ ರೋಗಗಳ ಪ್ರವೇಶವಾಗುತ್ತದೆ. ಶಿಶು ನಪುಂಸಕನೂ ಆಗಬಹುದು. ಗರ್ಭಧಾರಣೆ ಆಗುವುದಕ್ಕೂ ಸ್ವಲ್ಪ ಮೊದಲು ತಾಯಿ ಈ ಔಷಧ ಸೇವಿಸಿದ್ದರೂ ಕೂಡ ಅದರ ಪರಿಣಾಮ ಶಿಶುವಿನ ಮೇಲಾದ ಉದಾಹರಣೆಗಳು ವೈದ್ಯಕೀಯ ಚರಿತ್ರೆಯಲ್ಲಿ ಉಲ್ಲೇಖವಾಗಿವೆ. ಮಗು ಹುಟ್ಟಿದ ಎಷ್ಟೋ ವರ್ಷಗಳ ನಂತರವೂ ರೋಗದ ಪತ್ತೆಯಾಗಬಹುದು.

ಪಾಶ್ಚಾತ್ಯ ದೇಶಗಳಲ್ಲಿ ಸಂಶೋಧನೆಯಾಗಿ ಅಲ್ಲೇ ಮೊದಲು ಬಳಕೆಗೆ ಬಂದ ಇ. ಓ. ಸಂಯುಕ್ತಗಳ ಕತೆ ಆ ದೇಶಗಳಲ್ಲಿ ಮುಗಿದಿದೆ. ಬ್ರಿಟನ್, ಪಶ್ಚಿಮ ಜರ್ಮನಿ, ಅಮೇರಿಕ, ಆಸ್ಟ್ರೇಲಿಯಾಗಳಲ್ಲೆಲ್ಲ ಇವುಗಳನ್ನು ಸಂಪೂರ್ಣ ನಿಷೇಧಿಸಿದ್ದಾರೆ. ವೈದ್ಯವಿಜ್ಞಾನದಲ್ಲಿ ಈ ಔಷಧಗಳಿಂದ ಯಾವ ಪ್ರಯೋಜನವೂ ಇಲ್ಲ ಎಂದು ಪಾಶ್ಚಾತ್ಯ ವೈದ್ಯತಜ್ಞರು ಖಡಾಖಂಡಿತವಾಗಿ ಘೋಷಿಸಿದ್ದಾರೆ.

ಇಂಥ ನಿಷ್ಪ್ರಯೋಜಕ, ಅಪಾಯಕಾರೀ ಔಷಧಗಳಿಗೆ ಭಾರತ ಅತ್ಯುತ್ತಮ ಮಾರುಕಟ್ಟೆಯಾಯಿತು. ಹಳ್ಳಿಹಳ್ಳಿಗಳನ್ನೂ ತಲುಪಿ ಇಂಜೆಕ್ಷನ್ ವೈದ್ಯರ ಪೆಟ್ಟಿಗೆ ಸೇರಿದವು ಅವು. ಸರಕಾರಿ ದವಾಖಾನೆಗಳಲ್ಲಿ, ಖಾಸಗಿ ವೈದ್ಯರಲ್ಲಿ ನಿತ್ಯ ಉಪ ಯೋಗಿಸುವ ವಸ್ತುಗಳಾದವು. ವೈದ್ಯರ ಚೀಟಿ ಇಲ್ಲದೆಯೂ ಎಲ್ಲಕಡೆ ದೊರೆಯು ವಂತಾದವು.

ವರ್ಷವರ್ಷವೂ ನಮ್ಮಲ್ಲಿ ಜನಿಸುವ ಲಕ್ಷಾಂತರ ಅಂಗವಿಕಲ ಮಕ್ಕಳಲ್ಲಿ ಎಷ್ಟಕ್ಕೆ ಇ. ಓ. ಸಂಯುಕ್ತ ಕಾರಣವೋ. ಅಪ್ಪ ಅಮ್ಮಂದಿರ, ವೈದ್ಯರ ತಪ್ಪಿನಿಂದ ಅಂಗಹೀನರಾದವರೆಷ್ಟೋ. ಲೆಕ್ಕ ಇಟ್ಟವರಾರು ? ಸಾಬೀತು ಪಡಿಸುವದಾದರೂ ಎಂತು ? ಇದು ಇಂಥದೇ ಔಷಧದ ದುಷ್ಪರಿಣಾಮದಿಂದ ಆದದ್ದೆಂದು ಸಾಬೀತು ಮಾಡುವಂಥ ಸಮೀಕ್ಷೆಗಳು ನಮ್ಮಲ್ಲಿ ನಡೆದೇ ಇಲ್ಲ. ಅಂಥ ಸುಸಜ್ಜಿತ ಆಸ್ಪತ್ರೆಗಳೂ ವಿರಳ. ಅಂಥಲ್ಲಿಗೆ ಮಗುವನ್ನೊಯ್ಯು ಹಿಂದಿನ ದಾಖಲೆಗಳನ್ನೆಲ್ಲ ನೋಡಿ ಶೋಧಿಸುವುದು ಇನ್ನೂ ವಿರಳ. ಆ ಕಲ್ಪನೆಯೇ ಜನಕ್ಕೆ ಬಾರದು.

1979 ರಲ್ಲಿ ಪ್ರಕಟವಾದ ಮದರಾಸಿನ ಕಿಲ್ಪಾಕಂ ಮೆಡಿಕಲ್ ಕಾಲೇಜಿನ ಡಾ। ಪಳನಿಯಪ್ಪನ್ ಅವರ ಸಂಶೋಧನಾ ವರದಿ ವೈದ್ಯಕೀಯ ಸಮಾಜದ ಜಡ್ಡುಗಟ್ಟಿದ ಪ್ರಜ್ಞೆಯನ್ನು ಅಲುಗಾಡಿಸಿತು. ಅನೇಕ ವೈದ್ಯರು ಮೈ ಕೊಡವಿ-ಕೊಂಡು ಎದ್ದರು. 1982 ರಲ್ಲಿ ಈ ಔಷಧದ ದುಷ್ಪರಿಣಾಮಗಳ ಬಗ್ಗೆ ಚಿಂತನೆ –ಚರ್ಚೆ–ಶೋಧನೆಗಳು ಆರಂಭವಾದವು. 'ಅಖಿಲಭಾರತ ಔಷಧ ಕ್ರಿಯಾಕೂಟ (ಏಡನ್–AIDAN) ಮತ್ತು ವೈದ್ಯ ಮಿತ್ರರ ಕೂಟ (ಎಂ. ಎಫ್. ಸಿ.–M.F.C.) ಸೇರಿ ಒಂದು ಹೋರಾಟಕ್ಕೆ ಹುಟ್ಟು ಹಾಕಿದವು. ಅನೇಕ ಮಹಿಳಾ ಸಂಘಟ-ನೆಗಳೂ ಕೈ ಸೇರಿಸಿದವು. ಔಷಧ ನಿಯಂತ್ರಣಾಧಿಕಾರಿಗಳಿಗೆ ಪತ್ರಗಳ ಮೇಲೆ ಪತ್ರ–ಮನವಿಯ ಮೇಲೆ ಮನವಿ ಹೋದವು.

ದೇಶದ ಔಷಧ ನಿಯಂತ್ರಣಾಧಿಕಾರಿಯವರು ಇ. ಓ. ಸಂಯುಕ್ತಗಳ ಬಗ್ಗೆ 'ಭಾರತೀಯ ವೈದ್ಯ ವಿಜ್ಞಾನ ಸಂಸ್ಥೆ' (ICMR)ಯ ಸಲಹೆ ಕೇಳಿದರು. 'ಈ ಔಷಧಗಳನ್ನೆಲ್ಲ ನಿಷೇಧಿಸಿ' ಎಂದು ಆ ಸಂಸ್ಥೆ ಶಿಫಾರಸು ಮಾಡಿತು.

ಅದರಂತೇ 1982 ರಲ್ಲಿ ಇ. ಓ. ಸಂಯುಕ್ತಗಳನ್ನು ನಮ್ಮ ದೇಶದಲ್ಲಿ ನಿಷೇಧ ( 12—48/79 D. O. June 21/22 1982 ) ಮಾಡಲಾಯಿತು.

ಕತೆ ಇಲ್ಲಿಗೆ ಮುಗಿಯುವುದಿಲ್ಲ. ಇದೀಗ ಆರಂಭವಾಗುತ್ತಿದೆ. ನಿಷೇಧಾಜ್ಞೆ-ಯಲ್ಲಿ ಸರಕಾರ ಔಷಧ ಕಂಪನಿಗಳಿಗೆ ಆರು ತಿಂಗಳ ಕಾಲಾವಕಾಶವನ್ನು ಕೊಟ್ಟಿತು. ಆರು ತಿಂಗಳಲ್ಲಿ ಇ. ಓ. ಯ ಉತ್ಪಾದನೆ ನಿಲ್ಲಬೇಕು. ಇನ್ನೂ ಒಂದು ವರ್ಷದಲ್ಲಿ ಆ ಉತ್ಪಾದನೆಯಲ್ಲ ಖರ್ಚಾಗಿ ಮಾರುಕಟ್ಟೆಯಲ್ಲಿ ಇರಬಾರದು ಎಂದು ! ಇದೆಂಥ ನಿಷೇಧಾಜ್ಞೆ ? ಇದರ ಅರ್ಥವೇನು ? ಆ ಒಂದೂವರೆ ವರ್ಷದಲ್ಲಿ ಇನ್ನೂ ಒಂದಿಷ್ಟು ಅಂಗವಿಕಲ ಮಕ್ಕಳು ಹುಟ್ಟಿದರೆ ಹುಟ್ಟಲಿ ಎಂದೆ ?

ಇಂಥ ಒಂದು ಅವಕಾಶ ಕೂಡ ಕಂಪನಿಗಳಿಗೆ ಸಾಲದಾಯಿತು. ಅತಿಯಾಗಿ ಲಾಭ ತರುತ್ತಿದ್ದ ಔಷಧವಿದು. ಕೂಡಲೇ ಯುನೈಟೆಡ್ ನಿಕೊಲಾಸ್, ಆರ್ಗನಾನ್ ಮುಂತಾದ ಇ. ಓ. ಉತ್ಪಾದಕ ಕಂಪನಿಗಳು ಕೋರ್ಟಿಗೆ ಹೋಗಿ ತಡೆಯಾಜ್ಞೆ ತರಿಸಿಬಿಟ್ಟವು. ಮಾರುಕಟ್ಟೆಯಲ್ಲಿ ಯಾವುದೇ ಏರುಪೇರು ಆಗಲೇ ಇಲ್ಲ.

ಅದೇ ವರ್ಷ ಕೇರಳ ಹೈಕೋರ್ಟಿನ ವಿನ್ಸೆಂಟ್ ಪಾನಿಕುಲಂಗರ ಎಂಬೊಬ್ಬ ವಕೀಲರು ನಮ್ಮ ದೇಶದಲ್ಲಿ ನಿಷೇಧವಾಗಿಯೂ ಪೇಟೆಗೆ ಬರುತ್ತಿರುವ ಔಷಧಗಳ ಪಟ್ಟಿ ಮಾಡಿ ಸಾಮಾಜಿಕ ಹಿತದೃಷ್ಟಿಯಿಂದ ಕೋರ್ಟಿನಲ್ಲಿ ದಾವೆ ಹಾಕಿದರು. ಆ ಪಟ್ಟಿಯಲ್ಲಿ ಇ. ಓ. ಯ ಹೆಸರೂ ಇತ್ತು. ಕೂಡಲೇ ಸುಪ್ರೀಂ ಕೋರ್ಟ್ ದೇಶದ ನಾಲ್ಕು ಪ್ರಮುಖ ನಗರಗಳಲ್ಲಿ ಇ. ಓ. ಬಗ್ಗೆ ಸಾಮಾಜಿಕ ವಿಚಾರಣೆ ನಡೆಸಬೇಕೆಂದು ಔಷಧ ನಿಯಂತ್ರಣಾಧಿಕಾರಿಗೆ ಆಜ್ಞೆ ಇತ್ತರು.

ಮದ್ರಾಸ್, ದಿಲ್ಲಿ, ಕಲ್ಕತ್ತಾ ಪುಣೆಗಳಲ್ಲಿ ಬಿರುಸಿನಿಂದ ವಿಚಾರಣೆ ನಡೆಯಿತು. ಕಂಪನಿಗಳ ಪರವಾಗಿ ದೇಶದ ಪ್ರತಿಷ್ಠಿತ 'ಪ್ರಸೂತಿ ತಜ್ಞರ ಸಂಘ' ವಾದಿಸಿತು. ಆದರೂ ಮಹಿಳಾ ಸಂಘ ಸಂಸ್ಥೆಗಳು, ವೈದ್ಯವಿಜ್ಞಾನ ಕೂಟಗಳು ಕೊನೆಯಲ್ಲಿ ಗೆದ್ದವು. ಇ. ಓ. ಔಷಧಗಳನ್ನೆಲ್ಲ ನಿಷೇಧಿಸಬೇಕೆಂದು ಸುಪ್ರೀಂ ಕೋರ್ಟ್ ತೀರ್ಪಿತ್ತಿತು.

ಅಷ್ಟರ ನಂತರವೂ ಸಾಕಷ್ಟು ಕಾಲ (ನವೆಂಬರ 1987–ಜೂನ್ 1988) ಅಳೆದೂ ಸುರಿದೂ ಮಾಡಿ, ಇನ್ನೊಮ್ಮೆ ICMR ನ ಸಲಹೆ ಕೇಳಿ ಭಾರತ ಸರಕಾರ ಇ. ಓ. ಸಂಯುಕ್ತಗಳನ್ನು ನಿಷೇಧಿಸುವ ಆಜ್ಞೆಯನ್ನು(ಜಿ. ಎಸ್. ಆರ್. 700 (ಇ) ಜೂನ್ 15, 1988) ಹೊರಡಿಸಿತು.

ಆದರೆ ಮತ್ತೆ ಸರಕಾರ ಚಾಪೆಯ ಅಡಿಯಲ್ಲಿ ನುಸುಳಿತ್ತು. ನಿಷೇಧಾಜ್ಞೆ-ಯಲ್ಲಿ ಇ. ಓ. ಇಂಜೆಕ್ಷನ್‌ಗಳ ಹೆಸರೇ ಇಲ್ಲ. ಇ. ಓ. ಮಿಶ್ರಿತ ಮಾತ್ರೆಗಳು ಎಂದಿದೆ ! ದೇಶದಲ್ಲಿ ಅತಿ ಹೆಚ್ಚು ದುರುಪಯೋಗ ಆಗುತ್ತಿರುವುದು ಇಂಜೆಕ್ಷನ್‌ಗಳು. ಅವೇ ನಿಷೇಧಿತ ಆಗಿದ್ದರೆ ಏನು ಆದಂತಾಯಿತು? ಅಲ್ಲದೆ ಸುಪ್ರೀಂ ಕೋರ್ಟ್ ಈ ಎಲ್ಲ ರೂಪದ ಇ. ಓ. ಸಂಯುಕ್ತಗಳ ನಿಷೇಧ ಆಗಬೇಕೆಂದು ಆಜ್ಞೆಮಾಡಿತ್ತು. ಸರಕಾರ ಕೋರ್ಟಿನ ಆಜ್ಞೆಯನ್ನು ಉಲ್ಲಂಘಿಸಿ ನಮ್ಮ ಅತ್ಯುಚ್ಚ ನ್ಯಾಯ ಪೀಠಕ್ಕೆ ಅವಮಾನವೆಸಗಿತ್ತು.

ಕೂಡಲೇ ಮುಂಬೈನ ACASH ಎಂಬ ಸಂಸ್ಥೆ ಕೋರ್ಟಿನ ಮೊರೆ ಹೊಕ್ಕಿತು. ಆ ನಂತರವೇ ಸರಕಾರ ತನ್ನ ಆಜ್ಞೆಯಲ್ಲಿ ತಿದ್ದುಪಡಿ ಮಾಡಿ ಎಲ್ಲ ರೂಪದ ಇ. ಓ. ಸಂಯುಕ್ತಗಳನ್ನೂ ನಿಷೇಧ ಮಾಡಿತು. (ಅದೂ ತಾತ್ಕಾಲಿಕ ನಿಷೇಧಾಜ್ಞೆ Interim stay )

ಕತೆ ಇಲ್ಲಿಗೆ ಮುಗಿಯಿತೆ ? ಊಹೂಂ, ಇನ್ನೂ ಇಲ್ಲ. ನಿಷೇಧಾಜ್ಞೆ ಬಂದು ಒಂದು ತಿಂಗಳಾದರೂ ರಾಜ್ಯದ ಎಲ್ಲ ನಗರ, ಹಳ್ಳಿಗಳಲ್ಲಿ ಇ. ಓ. ಔಷಧ ಸಿಗುತ್ತಿತ್ತು.

01901 3B

ಈ ಬಗ್ಗೆ ಕರ್ನಾಟಕ ರಾಜ್ಯದ ಔಷಧ ಕ್ರಿಯಾವೇದಿಕೆ (Drug Action Forum - Karnataka) ರಾಜ್ಯ ಔಷಧ ನಿಯಂತ್ರಣಾಧಿಕಾರಿಯವರನ್ನು ಸಂಪರ್ಕಿಸಿದಾಗ 'ಅರೇ ! ನಿಷೇಧಾಜ್ಞೆ ಬಂದಿದೆಯೇ ? ಗಜೆಟ್ ನೋಟಿಫಿಕೇಶನ್ ಪ್ರತಿ ಇದೆಯಾ? ' ಎಂದು ತಿರುಗಿ ಕೇಳಿದರು. ಹೀಗಿದೆ ನಮ್ಮ ಔಷಧ ನಿಯಂತ್ರಣ ಪರಿಸ್ಥಿತಿ.

ಪದೇ ಪದೇ ಅಂಗಡಿಗಳಲ್ಲಿ ಈ ಔಷಧ ಸಿಗುತ್ತದೆಯೇ ನೋಡಿ, ಸಿಕ್ಕಾಗೆಲ್ಲ ನಿಯಂತ್ರಣಾಧಿಕಾರಿಯವರಿಗೂ ಬರೆದು, ಪತ್ರಿಕೆಗಳಿಗೆ ಬರೆದು DAF-K ಸತತ ಕೆಲಸ ಮಾಡಿತು. ಸುಮಾರು ಎರಡು ತಿಂಗಳ ಕೆಲಸದ ನಂತರ ಈಗ ಪೇಟೆಯಲ್ಲಿ ಇ. ಓ. ಸಂಯುಕ್ತಗಳು ಸಿಗದಾಗಿವೆ.

ಐರೋಪ್ಯ ದೇಶಗಳಲ್ಲಿ ಥಲಿಡೋಮೈಡ್ ನಿಷೇಧಿಸುವ ಹೋರಾಟದಲ್ಲಿ ಅಲ್ಲಿನ ವೈದ್ಯರು ತೀವ್ರ ಕೆಲಸ ಮಾಡಿದ್ದರು. ಆದರೆ ಅಷ್ಟೇ ಅಪಾಯಕಾರಿಯಾದ ಇ. ಓ. ಔಷಧಗಳ ವಿರುದ್ಧ ಹೋರಾಟದಲ್ಲಿ ಭಾರತೀಯ ವೈದ್ಯರು ಆಸಕ್ತಿ ತೋರಿಸಲಿಲ್ಲ. ಪ್ರಸೂತಿ ತಜ್ಞರ ಸಂಘಟನೆ ಇ. ಓ. ಅತ್ಯುಪಯುಕ್ತ ಔಷಧವೆಂದೇ ವಾದಿಸಿತು. ಅನೇಕ ಸ್ತ್ರೀರೋಗ ತಜ್ಞೆಯರು ಇದು ಪೇಟೆಯಲ್ಲಿರಲೇಬೇಕು ಎಂದರು. ಇನ್ನುಳಿದವರು ನಿರಾಸಕ್ತಿ ತಳೆದರು.

ಜನಜಾಗೃತಿ ಸಂಘಟನೆಗಳು, ಮಹಿಳಾ ಸಂಘಗಳು ಮತ್ತು ಪತ್ರಿಕೆಗಳೇ ಈ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಮುಂದಾಳುಗಳು. ಪತ್ರಿಕೆಗಳ ಪ್ರಾತಿನಿಧ್ಯದಿಂದ ಅತಿಕ್ಲಿಷ್ಟವಾದ ಒಂದು ಹೋರಾಟದಲ್ಲಿ ಜಯ ಸಿಕ್ಕಿತೇ ಹೊರತು ವೈದ್ಯರು ಇದರಲ್ಲಿ ಯಾವುದೇ ಕೆಲಸ ಮಾಡಿಲ್ಲ ಎಂಬುದು ವಿಷಾದಕರ ವಿಚಾರ.

ಇಷ್ಟೆಲ್ಲ ಆದಮೇಲೂ ಈ ಔಷಧ ಬೇರೆ ಬೇರೆ ರೂಪಗಳಲ್ಲಿ ; ಉದಾ. ಇ ಮತ್ತು ಓ ಬೇರೆ ಬೇರೆಯಾಗಿ, ಇನ್ನೂ ಕೆಲವು ಕಂಪನಿಗಳು ಇ. ಓ. ಎಂಬ ಹೆಸರಿನಲ್ಲಿ ಎರ್ಗಟ್ ಎಂಬ ಬೇರೆ ಔಷಧವನ್ನು ಹಾಕಿ ಮಾರಾಟವಾಗುತ್ತದೆ.

## 4. ಗರ್ಭಿಣಿಯರು ನಿಷೇಧಿಸಬೇಕಾದ ಔಷಧಗಳು

ಗರ್ಭಿಣಿಯಾಗಿದ್ದಾಗ ಮಹಿಳೆ ದೂರ ಇಡಬೇಕಾದ ಔಷಧ ಕೇವಲ ಇ. ಓ. ಸಂಯುಕ್ತ ಮಾತ್ರ, ಅಲ್ಲ. ಯಾವುದೇ ಔಷಧ ಗರ್ಭಕೋಶದೊಳಗಿರುವ ಮಗುವನ್ನೂ ತಲುಪಬಲ್ಲದು. ಗರ್ಭಧರಿಸಿದ ಮೊದಲ ಮೂರು ತಿಂಗಳಲ್ಲಿ ಇದರ ಅಪಾಯ ಹೆಚ್ಚು. ನಾಲ್ಕನೆಯ ಮತ್ತು ಒಂಬತ್ತನೆಯ ತಿಂಗಳಲ್ಲಿ ಔಷಧವು ಶಿಶುವಿನ ಅಂಗ-ಬೆಳವಣಿಗೆಯ ಮೇಲೆ ಅಡ್ಡಪರಿಣಾಮ ಮಾಡಬಹುದು. ಅಲ್ಲದೇ ಹೆರಿಗೆಗೆ ಮೊದಲು ಕೊಡುವ ಔಷಧಗಳು ಹುಟ್ಟುವ ಶಿಶುವಿನ ಮೇಲೆ ದುಷ್ಪರಿಣಾಮ ಬೀರಬಹುದು.

ಈ ಕಾರಣಗಳಿಂದ ಗರ್ಭಿಣಿಯರು ಮೊದಲ ನಾಲ್ಕು ತಿಂಗಳು ಮತ್ತು ಒಂಬತ್ತನೆಯ ತಿಂಗಳಲ್ಲಿ ಔಷಧಗಳನ್ನು ದೂರ ಇಡಬೇಕು. ಸೇವಿಸಲೇಬಾರದ ಔಷಧಗಳೆಂದರೆ :

ಎಂಡ್ರೋಜೆನ್‌ಗಳು, ಇಸ್ಟ್ರೋಜನ್‌ಗಳು ಡೈಇಥೈಲ್‌ಸ್ಟಿಲ್‌ಬೆಸ್ಟ್ರೋಲ್, ಮುಟ್ಟು ಮುಂದೂಡುವ ಮಾತ್ರೆಗಳು, ಅನಾಬೋಲಿಕ್ ಸ್ಟಿರಾಯಿಡ್‌ಗಳು, ಟೆಟ್ರಾಸೈಕ್ಲಿನ್, ನಿಕೋಟಿನ್, ಆಲ್ಕೋಹಾಲ್ ಇವುಗಳು.

ಅಪಾಯಕಾರಿ ಇದ್ದು ಆದಷ್ಟೂ ದೂರ ಇಡಬೇಕಾದ ಔಷಧಗಳೆಂದರೆ, ಅಂಫೆಟಮೀನ್, ಕ್ಯಾನ್ಸರ್ ವಿರೋಧಿ ಔಷಧ, ಓರಲ್ ಎಂಟಿಕೊಆಗ್ಯುಲಂಟ್ಸ್, ಬಾರ್ಬಿಚುರೇಟ್‌ಗಳು, ಕಾರ್ಬಮಝೆಪೀನ್, ಕ್ಲೋರಂಫೆನಿಕಾಲ್, ಕ್ಲೋರೋಕ್ವೀನ್, ಕಾರ್ಟಿಸೋನ್, ಮೆಟ್ರೋನಿಡಾಝೋಲ್, ಕ್ವಿನೈನ್ ಮತ್ತು ಸ್ಟ್ರೆಪ್ಟೋಮೈಸಿನ್.

ಹಾಲೂಡುವ ತಾಯಂದಿರು ಸೇವಿಸಬಾರದ ಔಷಧಗಳು ಎಂಡ್ರೋಜನ್‌ಗಳು, ಎಂಟಿಕೊಆಗ್ಯುಲಂಟ್ಸ್, ಕ್ಲೋರಂಫೆನಿಕಾಲ್, ಎರ್ಗೋಟಮೈನ್ ಎರಿಥ್ರೋಸಿನ್, ಐಸೋನೆಕ್ಸ್, ಮೆಟ್ರೋನಿಡಾಝೋಲ್, ತಂಬಾಕು ಮತ್ತು ಆಲ್ಕೋಹಾಲ್.


# 5. ಜನೆರಿಕ್ ಮತ್ತು ಬ್ರ್ಯಾಂಡ್ ಹೆಸರುಗಳು

ಜನೆರಿಕ್ ಮತ್ತು ಬ್ರ್ಯಾಂಡ್ ಹೆಸರುಗಳ ಬಗ್ಗೆ ನಿಷೇಧಿತ ಔಷಧಗಳ ಪುಸ್ತಕದಲ್ಲಿ ಒಂದು ಅಧ್ಯಾಯ ಬರೆಯಲು ಕಾರಣವಿದೆ. ಇಂದು ಗ್ರಾಹಕನಿಗೆ ಅತಿ ಹೆಚ್ಚು ವಂಚನ ಆಗುತ್ತಿರುವುದೇ ಈ ಬ್ರ್ಯಾಂಡ್ ಹೆಸರುಗಳಿಂದಾಗಿ. ಇಷ್ಟೊಂದು ಬೇರೆ ಬೇರೆ ಬ್ರ್ಯಾಂಡ್‌ಗಳಿರುವುದರಿಂದಲೇ ಇಂದು ಔಷಧ ಮಾರುಕಟ್ಟೆ 70,000 ಕ್ಕಿಂತಲೂ ಹೆಚ್ಚು ಔಷಧಗಳಿಂದ ತುಂಬಿ ತುಳುಕುತ್ತಿದೆ.

ಸರಕಾರದ ಗೆಜೆಟ್ ನೋಟೀಸಿನಲ್ಲಾಗಲೀ, ಔಷಧ ನಿಷೇಧವಾಗಿದೆಯೆಂದು ಪತ್ರಿಕೆಯಲ್ಲಿ ಬಂದಾಗಲಾಗಲೀ, ಜನೆರಿಕ್ ಹೆಸರುಗಳೇ ನಮೂದಿತವಾಗಿರುತ್ತವೆ. ಆದರೆ ನಮಗೆಲ್ಲ ಪರಿಚಯ ಇರುವುದು ಬ್ರ್ಯಾಂಡ್ ಹೆಸರುಗಳು. ಇಂಥ ವೇಳೆಯಲ್ಲಿ ಗ್ರಾಹಕರಿಗೆ ಗೊಂದಲ ಆಗಬಾರದೆಂದೇ ಈ ವಿವರವಾದ ಅಧ್ಯಾಯ.

ಯಾವುದೇ ಒಂದು ಔಷಧಕ್ಕೆ ಮೂರು ಹೆಸರುಗಳಿರುತ್ತವೆ. ಒಂದು ; ಪ್ರಯೋಗ ಶಾಲೆಯಲ್ಲಿ ಕರೆಸಿಕೊಳ್ಳುವ ವೈಜ್ಞಾನಿಕ ಹೆಸರು ಎರಡು ; ಕಂಪನಿಗಳಲ್ಲಿ 'ಔಷಧ' ಎಂದು ತಯಾರಾಗುವಾಗಿನ ಹೆಸರು –ಜನೆರಿಕ್ ಹೆಸರು. ಮೂರು ; ಕಂಪನಿಯಿಂದ ಹೊರಬರುವಾಗ ಆಯಾ ಕಂಪನಿಯವರು ಅಂಕಿತಮಾಡುವ – ಬ್ರ್ಯಾಂಡ್ ಹೆಸರು. ನಮಗೆಲ್ಲ ಅತಿ ಹೆಚ್ಚು ಪರಿಚಯ ಇರುವುದು ಈ ಬ್ರ್ಯಾಂಡ್ ಹೆಸರುಗಳು ಮಾತ್ರ.

ಉದಾ : ಕ್ರೋಸಿನ್ (Crocin) ಮಾತ್ರೆ ನಮಗೆಲ್ಲರಿಗೂ ಪರಿಚಿತ. ಇದು ಬ್ರ್ಯಾಂಡ್ ಹೆಸರು. ಇದರ ಜನೆರಿಕ್ ಹೆಸರು ಪ್ಯಾರಾಸಿಟಮಾಲ್ (Paracetamol) ಎಂದು. ಇದು ವೈಜ್ಞಾನಿಕವಾಗಿ ಎನ್–ಅಸಿಟೈ–ಪ್ಯಾರಾ–ಅಮಿನೋಫೀನಾಲ್ (n-acethy-Para amino - phenol). Paracetamol ನ್ನೇ ಬೇರೆ ಬೇರೆ ಕಂಪನಿಗಳು ತಯಾರಿಸಿ ನಿರಾಮೋಲ್, ಕ್ಯಾಲ್ಪಾಲ್ ಪೆನೋಡಿನ್ ಮುಂತಾದ ಹೆಸರುಗಳನ್ನಿಟ್ಟು ಮಾರುತ್ತಾರೆ.



ಔಷಧದ ಸ್ಟ್ರಿಪ್ ಮೇಲೆ ದೊಡ್ಡದಾಗಿ ಎದ್ದು ತೋರುವಂತೆ ಬರೆದಿರುವುದು ಬ್ರಾಂಡ್ ಹೆಸರು. ಈ ಹೆಸರಿನ ಕೆಳಗೇ ಕಂಡೂ ಕಾಣದಂತೆ ಚಿಕ್ಕದಾಗಿ ಜನರಿಕ್ ಹೆಸರನ್ನು ಬರೆದಿರುತ್ತಾರೆ. ಜಾಹೀರಾತು–ಪ್ರಚಾರಗಳೆಲ್ಲ ನಡೆಯುವುದು ಬ್ರಾಂಡ್ ಹೆಸರುಗಳ ಮೇಲೆಯೇ. ವೈದ್ಯರು ಬರೆದುಕೊಡುವುದು ಬ್ರಾಂಡ್ ಹೆಸರುಗಳನ್ನೇ. ಹೀಗಾಗಿ ಜನರೆಲ್ಲ ಪರಿಚಿತರಾಗಿರುವುದು ಬ್ರಾಂಡ್ ಹೆಸರು-ಗಳಿಗೇ. ಜನರಿಕ್ ಹೆಸರಿನಲ್ಲಿ ಔಷಧಗಳ ಬಗ್ಗೆ ಮಾತನಾಡಿದರೆ ಜನಕ್ಕೆ ಯಾವು-ದೆಂದು ತಿಳಿಯುವುದಿಲ್ಲ.

ಬ್ರಾಂಡ್ ಹೆಸರುಗಳು ವೈಜ್ಞಾನಿಕ ಔಷಧಗಳೆಲ್ಲ ಜನರಿಕ್ ಹೆಸರುಗಳಲ್ಲೇ ಸಿಗಬೇಕು ಎಂಬ ಬೇಡಿಕೆ ಬಹಳ ಹಿಂದಿನದು. ಮುಂದುವರೆದ ದೇಶಗಳಲೆಲ್ಲ ಈಗಾಗಲೇ ಜನರಿಕ್ ಹೆಸರುಗಳಲ್ಲಿ ಮಾತ್ರ, ಔಷಧಗಳು ಸಿಗುವಂತಾಗಿವೆ. ಜನರಿಕ್ ಹೆಸರುಗಳಿದ್ದರೆ ಔಷಧಗಳ ಬಗೆಗಿನ ಅನೇಕ ಗೊಂದಲಗಳು ನಿವಾರಣೆಯಾ ಗುತ್ತವೆ. ಉದಾ : ಡೈಜಿಪಾಮ್ (Diazepam) ನೈಟ್ರಾಜಿಪಾಮ್ (Nitrazepam) ಒಂದೇ ಗುಂಪಿನವು. ಆದರೆ ಇವೇ ಬ್ರಾಂಡ್ ಹೆಸರಿನಲ್ಲಿದ್ದಾಗ ಕಾಂಪೋಸ್ (Calmpose) ಮತ್ತು ನೈಟ್ರಾವಿಟ್ (Nitravit) ಒಂದೇ ಗುಂಪಿನವೆಂದು ಗುರುತಿಸುವುದು ಕಷ್ಟ. ಸ್ವತಃ ವೈದ್ಯರಿಗೇ ಗೊಂದಲ-ವಾಗಬಹುದು.

ವೈದ್ಯ ಸರಿಯಾಗಿ ಬರೆದುಕೊಟ್ಟರೂ ಅಂಗಡಿಯಾತನಿಗೆ ಹೆಚ್ಚು ಕಮ್ಮಿ-ಯಾಗುವ ಸಾಧ್ಯತೆಗಳೂ ಇರುತ್ತವೆ. ಬೇರೆ ಬೇರೆ ಔಷಧಗಳ ಹೆಸರುಗಳು ಒಂದೇ ರೀತಿಯಲ್ಲಿದ್ದಾಗ, ಅಂಗಡಿಯಾತ ಒಂದರ ಬದಲು ಮತ್ತೊಂದು ಕೊಟ್ಟುಬಿಟ್ಟನೆಂದರೆ ಕೆಲಸ ಕೆಟ್ಟಂತೆಯೇ. ಇದರಿಂದ ರೋಗಿಗೆ ತೀವ್ರ ಅಪಾಯ ವಾಗುವ ಸಂಭವವಿದೆ.

ಉದಾ : ಅಮಿಲೀನ್ (Amiline) - ಮನೋರೋಗದ ಔಷಧ

ಅಮಿಕ್ಲೀನ್ (Amicline) - ಹೊಟ್ಟೆ ಝಾಡಿಸುವುದಕ್ಕೆ ಔಷಧ

ಹಾಗೆಯೇ, ಸೆಲಿನ್ (Celin) – ವಿಟಮಿನ್ C

ಸಿಪ್ಲಿನ್ (Ciplin) – ಸೋಂಕು ರೋಗದ ಔಷಧ.

ಒಂದೇ ಔಷಧಕ್ಕೆ ಬೇರೆ ಬೇರೆ ಹೆಸರು ಕೊಡುವ ಉದ್ದೇಶ ಹಣ ಮಾಡುವದು ಮಾತ್ರ. ಕಂಪನಿಗಳು ತಮ್ಮ ಬ್ರಾಂಡಿನ ಅತಿಯಾದ ಪ್ರಚಾರ ಮಾಡಿ ಜನರು, ವೈದ್ಯರು ಅದಕ್ಕೇ ಅಂಟಿಕೊಳ್ಳುವಂತೆ ಮೋಡಿ ಹಾಕುತ್ತಾರೆ. ಫಲವಾಗಿ ಆ ಬ್ರಾಂಡಿನ ಬೆಲೆ ಎಷ್ಟು ಹೆಚ್ಚಾದರೂ ಗ್ರಾಹಕರು ಅದಕ್ಕೇ ಜೋತುಬೀಳುತ್ತಾರೆ. ಇದರಿಂದ ಲಾಭವಾಗುವುದು ಔಷಧಕಂಪನಿಗಳಿಗೆ ಮಾತ್ರ. ಉದಾ : ಮೆಬೆಂಡ್‌ಜೋಲ್ (Mebendozole) ನ್ನು ಒಂದೊಂದು ಕಂಪನಿ ಒಂದೊಂದು ಬೆಲೆಗೆ ಮಾರುತ್ತದೆ. 10 ಮಾತ್ರೆಗಳ ಬೆಲೆ 1.80/- ರೂ. ನಿಂದ 5.50/- ರೂ. ವರೆಗೂ ವ್ಯತ್ಯಾಸವಾಗುತ್ತದೆ.

ಟಿನಿಡಾಝೋಲ್ (Tinidazole) ನ್ನು ಒಂದು ಕಂಪನಿ ತಯಾರಿಸಿ ನಾಲ್ಕು ಬೇರೆ ಬೇರೆ ಕಂಪನಿಗಳಿಗೆ ಕೊಡುತ್ತದೆ. ಅವು ತಮ್ಮ ಬ್ರ್ಯಾಂಡ್ ಹಾಕಿಕೊಂಡು ಅದೇ ಔಷಧವನ್ನು ಬೇರೆ ಬೇರೆ ಬೆಲೆಗೆ ಮಾರುತ್ತವೆ.

ಒಂದೇ ಔಷಧವನ್ನು ಬೇರೆ ಬೇರೆ ಕಂಪನಿಗಳು ಬೇರೆ ಬೇರೆ ಬ್ರ್ಯಾಂಡ್‌ಹೆಸರು ಹಾಕಿ ಮಾರುವುದು ಒಂದು ವಿಷಯವಾದರೆ ಒಂದೇ ಕಂಪನಿ ಒಂದೇ ಔಷಧವನ್ನು ಬೇರೆ ಬೇರೆ ಹೆಸರುಗಳಲ್ಲಿ ಬೇರೆ ಬೇರೆ ಬೆಲೆಗೆ ಮಾರಿ ಹಣ ಮಾಡುವುದೂ ಉಂಟು. ಉದಾ : 'Wellcome' ಕಂಪನಿ, ಪ್ಯಾರಾಸಿಟ್‌ಮಾಲ್ (Paracetamol) ನ್ನು Redake ಮತ್ತು Calpol ಎಂಬ ಎರಡು ಹೆಸರಲ್ಲಿ ಮಾರುತ್ತದೆ. ಅದೇ ರೀತಿ ಗ್ಲಾಕ್ಸೋ ಕಂಪನಿಯವರು ಬೆಟ್ನೆಲಾಮ್ (Betnelom) ಮತ್ತು ಬೆಟ್ನೆಸೋಲ್ (Betnesol) ಎಂಬ ಎರಡು ಬ್ರ್ಯಾಂಡ್‌ಗಳಲ್ಲಿ ಒಂದೇ ಔಷಧವನ್ನು ಮಾರುತ್ತಾರೆ.

ಬ್ರಿಟನ್ನಿನಲ್ಲಿ ರಾಷ್ಟ್ರೀಯ ಆರೋಗ್ಯ ಯೋಜನೆಯ ಅಡಿಯಲ್ಲಿ ಎಲ್ಲಾ ಔಷಧಗಳನ್ನೂ ಜನೆರಿಕ್ ಹೆಸರಿನಲ್ಲಿಯೇ ಮಾರಬೇಕೆಂದು ಕಡ್ಡಾಯ ಮಾಡಿದಾಗ ಒಮ್ಮೆಗೇ ಎಲ್ಲ ಔಷಧಗಳ ಬೆಲೆಯೂ ಇಳಿದುಬಿಟ್ಟಿತು. ಜನೆರಿಕ್ ಹೆಸರಿನಲ್ಲಿ ಔಷಧ ಸಿಗುತ್ತಿದ್ದರೆ ಆಯಾ ಔಷಧ, ಅದು ಯಾವ ಕಂಪನಿಯದೇ ಆಗಲಿ ಒಂದೇ ಹೆಸರಿನಲ್ಲಿ ಇರಬೇಕಾಗುತ್ತದೆ. ಪ್ಯಾರಾಸಿಟಮಾಲ್ ನ್ನು ಯಾವ ಕಂಪನಿಯೇ ಮಾಡಲಿ ಅದು ಪ್ಯಾರಾಸಿಟಮಾಲ್ ಮಾತ್ರ. ಅದಕ್ಕೆ ಬೇರೆ ಬೇರೆ ಬೆಲೆ ಇಟ್ಟರೆ ಸಹಜವಾಗಿ ಜನರು ಕಡಿಮೆ ಬೆಲೆಯದನ್ನು ಕೊಳ್ಳುತ್ತಾರೆ. ಆಗ ಬೆಲೆ ತಾನೇ ತಾನಾಗಿ ಒಂದೇ ಮಟ್ಟಕ್ಕೆ ಬಂದು ನಿಲ್ಲುತ್ತದೆ.

ವೈದ್ಯರೇ! ಕಾಲೇಜಿನಲ್ಲಿ ಓದುವಾಗ ಔಷಧಗಳ ಬಗ್ಗೆ ಕಲಿಯುವುದು ಸಂಪೂರ್ಣ ಜನೆರಿಕ್ ಹೆಸರುಗಳಲ್ಲಿಯೇ. ಎಲ್ಲಾ ವೈದ್ಯಕೀಯ ಪುಸ್ತಕಗಳಲ್ಲಿ ಕೊಟ್ಟಿರುವುದು ಜನೆರಿಕ್ ಹೆಸರುಗಳನ್ನೇ. ವಿದ್ಯಾರ್ಥಿ ವೈದ್ಯನಾಗುತ್ತಲೇ ಒಮ್ಮೆಗೇ ಜನೆರಿಕ್ ಹೆಸರು ಬಿಟ್ಟು ಬ್ರ್ಯಾಂಡ್ ಹೆಸರುಗಳಲ್ಲಿ ಔಷಧಗಳನ್ನು ನೋಡಬೇಕಾಗುತ್ತದೆ. ಬರೆದುಕೊಡಬೇಕಾಗತ್ತದೆ. ಅದೂ ನಮ್ಮಲ್ಲಿರುವುದು ಒಂದೇ ಎರಡೇ ? 70,000 ಕ್ಕೂ ಮಿಕ್ಕ ಬ್ರ್ಯಾಂಡ್‌ಗಳು ! ಅವನ್ನೆಲ್ಲ ಕಲಿಸುವವರಾದರೂ ಯಾರು ? ಔಷಧ ಕಂಪನಿಗಳ ಜಾಹೀರಾತುದಾರರು ಮಾತ್ರ. ತಮಗೇ ಗೊತ್ತಿಲ್ಲದ ಹೆಸರುಗಳನ್ನು ತಮಗೇ ಗೊತ್ತಿಲ್ಲದ ಅಳತೆಯಲ್ಲಿ ಈ ಹೊಸ ವೈದ್ಯರು ಬರೆದುಕೊಡಬೇಕಾಗುತ್ತದೆ.

ಆದಾಗ್ಯೂ ಬ್ರ್ಯಾಂಡ್ ಹೆಸರುಗಳೇ ಇರಲಿ ಎಂದು ವಾದಮಾಡುವವರೇ ವೈದ್ಯರು ! ಬ್ರ್ಯಾಂಡ್ ಇವರಿಗೆ ಅದೆಷ್ಟು ರೂಢಿಯಾಗಿ ಹೋಗಿದೆಯೆಂದರೆ ಜನೆರಿಕ್ ಹೆಸರುಗಳು ಇವರಿಗೆ ಮರೆತೇ ಹೋಗಿರಬಹುದು. ಎಂಥ ವಿಪರ್ಯಾಸ ! ವಿಜ್ಞಾನದ ಮಂದಿ ಎಂದು ಹೇಳಿಕೊಳ್ಳುವ ವೈದ್ಯರು ಏನೂ ಗೊತ್ತಿಲ್ಲದ ಜಾಹೀರಾತುದಾರ ಹೇಳಿದ್ದನ್ನೇ ನಂಬಿ ಬರೆದು ಕೊಡುವಂಥ ಪರಿಸ್ಥಿತಿ ! ಔಷಧ ಕಂಪನಿಗಳು

ಸೃಷ್ಟಿಮಾಡಿರುವ ವಿಷ ವರ್ತುಲವಿದು.

ಬ್ರಾಂಡ್ ಹೆಸರುಗಳಲ್ಲಿ ಔಷಧಗಳಿದ್ದರೆ ಮಾತ್ರ, ಮಿಶ್ರ, ಸಂಯುಕ್ತ (Fixed dose combination) ಗಳನ್ನು ತಯಾರಿಸಲು ಸಾಧ್ಯ. ಆದ್ದರಿಂದ ಜನರಿಕ್ ಹೆಸರುಗಳು ಬೇಡ ಎಂದು ಕಂಪನಿಗಳು ವಾದಿಸುತ್ತವೆ. ಅಷ್ಟಟ ಸತ್ಯ. ಇದರಲ್ಲಿ ಸಂಶಯವೇ ಇಲ್ಲ. ಆದರೆ ಈ ಮಿಶ್ರ ಸಂಯುಕ್ತಗಳು ನಮಗೆ ಬೇಡವೇ ಬೇಡ. ಅವುಗಳಿಂದ ಯಾವುದೇ ಉಪಯೋಗವಿಲ್ಲ. ಬದಲಿಗೆ ಹಾನಿಯೇ ಹೆಚ್ಚು. ಹಾಗಾಗಿ ಜನರಿಕ್ ಹೆಸರು ಬೇಕೆನ್ನುವವರು ಹೇಳುವ ಮಾತೂ ಇದೇ ಬ್ರಾಂಡ್ ಹೆಸರುಗಳು ಹೋದರೆ ಮಿಶ್ರ ಸಂಯುಕ್ತಗಳು ಪೇಟೆಯಿಂದ ಮರೆಯಾಗುತ್ತವೆ ಎಂದು.

ಜನರಿಕ್ ಹಸರು ಬಂದರೆ ಔಷಧಗಳ ಗುಣಮಟ್ಟ ಕಡಿಮೆ ಆಗುತ್ತದೆ. ತಮ್ಮ ಬ್ರಾಂಡ್‌ಗಳು ಉತ್ತಮವಾದವುಗಳು . ಯಾವುದೋ ಸಾಧಾರಣ ಕಂಪನಿಯ ಕಡಿಮೆ ಗುಣಮಟ್ಟದ ಔಷಧದೊಂದಿಗೆ ಸರಿಯಾಗಿ ಪರಿಗಣಿತವಾಗುತ್ತವೆ. ಬ್ರಾಂಡ್ ಹೆಸರುಗಳಲ್ಲಿ ನಾವು ನಮ್ಮ ಔಷಧದ ಗುಣಮಟ್ಟದ ಬಗ್ಗೆ ಭರವಸೆ ನೀಡುತ್ತೇವೆ ಎಂದು ದೊಡ್ಡ ದೊಡ್ಡ ಕಂಪನಿಗಳು ಹೇಳುತ್ತವೆ. ವಿಪರ್ಯಾಸವೆಂದರೆ ಇತ್ತೀಚೆಗೆ ನಡೆದ ಒಂದು ಶೋಧನೆಯಲ್ಲಿ ಬೆಳಕಿಗೆ ಬಂದ ಕಡಿಮೆ ಗುಣ-ಮಟ್ಟದ ಔಷಧಗಳಲ್ಲಿ 50% ನಷ್ಟು ಇಂಥ ದೊಡ್ಡ ಪ್ರತಿಷ್ಠಿತ ಕಂಪನಿಗಳಿಂದ ತಯಾರಾದವುಗಳೇ. ಅಂದಮೇಲೆ ಇವರ ಭರವಸೆಯನ್ನು ಎಷ್ಟರ ಮಟ್ಟಿಗೆ ನಂಬಬಹುದು ?

ಈ ಮುಂದೆ ನಿಷೇಧಿತ-ನಿಷೇಧ ಆಗಬೇಕಾದ ಔಷಧಗಳ ಹೆಸರು ಕೊಡುವಾಗ ಜನರಿಗೆ ಅರ್ಥವಾಗಲೆಂದು ಕೆಲವು ಜನಪ್ರಿಯ ಬ್ರಾಂಡ್ ಹೆಸರುಗಳನ್ನೂ ಕೊಟ್ಟಿದೆ.

# 6. ನಮ್ಮ ದೇಶದಲ್ಲಿ ನಿಷೇಧಿತವಾದ ಔಷಧಗಳು

ನಮ್ಮ ದೇಶದಲ್ಲಿ 1983 ರಲ್ಲಿ ಮೊಟ್ಟ ಮೊದಲಿಗೆ ಔಷಧಗಳ ನಿಷೇಧ ಆಯಿತು. 1983 ರ ಜುಲೈ 23 GSR 578 (E) ನಿಷೇಧಾಜ್ಞೆಯಲ್ಲಿ ಈ ಕೆಳಗಿನ ಔಷಧಗಳು ನಿಷೇಧಗೊಂಡವು.

| | |
|---|---|
| 1. ಅಮಿಡೋಪೈರಿನ್. | Amidopyrine. |
| 2. ಉರಿನಿವಾರಕ ಮತ್ತು ವಿಟಮಿನ್ ಮಿಶ್ರ ಸಂಯುಕ್ತಗಳು, ಮತ್ತು ಬರಿಸುವ ಔಷಧ+ವಿಟಮಿನ್‌ಗಳ ಮಿಶ್ರ ಸಂಯುಕ್ತ. | Fixed dose combinations of Vitamins with anti-inflamatory & Tranguillisers. |
| 3. ಅಟ್ರೋಪೀನ್‌ನ್ನು ಜ್ವರನಿವಾರಕ ಮತ್ತು ನೋವು ನಿವಾರಕಗಳಲ್ಲಿ ಸೇರಿಸಿದ ಮಿಶ್ರ ಸಂಯುಕ್ತಗಳು. | Atropine in Analgesic and antipyretics. |
| 4. ಸ್ಟ್ರಿಕ್ನಿನ್ ಮತ್ತು ಕೆಫಿನ್‌ಗಳನ್ನು ಟಾನಿಕ್‌ನಲ್ಲಿ ಹಾಕಿ ಮಾಡಿದ ಸಂಯುಕ್ತಗಳು. | Strychine and Caffine in tonics. |
| 5. ಯೋಹಿಂಬಿನ್ ಮತ್ತು ಸ್ಟ್ರಿಕ್ನಿನ್‌ಗಳನ್ನು ಟೆಸ್ಟೋಸ್ಟೆರಾನ್ ಮತ್ತು ವಿಟಮಿನ್‌ಗಳ ಜೊತೆ ಸೇರಿಸಿದ ಮಿಶ್ರ ಔಷಧ. | Fixed dose combinations of Strychnine, Yohimbine with Testosterone and Vitamins. |
| 6. ಕಬ್ಬಿಣಾಂಶವನ್ನು ಸ್ಟ್ರಿಕ್ನಿನ್, ಯೊಹಿಬೀನ್, ಆರ್ಸೆನಿಕ್ ಜೊತೆ ಸೇರಿಸಿ ಮಾಡುವ ಮಿಶ್ರ ಸಂಯುಕ್ತ. | Fixed dose combination of Iron with Strychine, Yohimbine and Arsenic. |
| 7. ಸೋಡಿಯಂ ಬ್ರೋಮೈಡ್ ಅಥವಾ ಕ್ಲೋರಲ್ ಹೈಡ್ರೇಟ್‌ಗಳ ಜೊತೆ ಇನ್ನಾವುದೇ ಔಷಧ ಸೇರಿಸಿದ ಸಂಯುಕ್ತ. | Fixed dose Combination of Sodium Bromide/Chloral Hydrate with other drugs. |
| 8. ಫಿನಾಸೆಟಿನ್. | Phenacetin. |
| 9. ಎಂಟಿ ಹಿಸ್ಟಮಿನ್ ಮತ್ತು ಬೇಧಿನಿವಾರಕಗಳ ಮಿಶ್ರ ಸಂಯುಕ್ತ. | Fixed dose combinations of antihistamines and anti-diarheals. |
| 10. ಪೆನ್ಸಿಲಿನ್ ಮತ್ತು ಸಲ್ಫನಮೈಡ್‌ಗಳ ಮಿಶ್ರ ಸಂಯುಕ್ತ. | Fixed dose combination of Pencillin and Sulphonamide. |

| | | |
|---|---|---|
| 11. | ನೋವು ನಿವಾರಕಗಳೊಂದಿಗೆ ವಿಟಮಿನ್‌ಗಳು. | Fixed dose combination fo Vitamins with Analgesics. |
| 12. | ಟೆಟ್ರಾಸೈಕ್ಲಿನ್ ಮತ್ತು ವಿಟಮಿನ್ ಸಿ ಯ ಮಿಶ್ರ ಸಂಯುಕ್ತ. | Fixed dose combination of Tetracycline with Vit. C. |
| 13. | ಬೇಧಿ, ಅತಿ ಬೇಧಿಗಳಿಗೆ ಉಪಯೋಗಿಸುವ ಮತ್ತು ದೇಹದ ಹೊರಗಡೆ ಹಚ್ಚುವ ಔಷಧಗಳ ಹೊರತಾಗಿ ಇನ್ನಾವುದೇ ಔಷಧದಲ್ಲಿ ಹೈಡ್ರಾಕ್ಸೀನಲೀನ್ ಗುಂಪಿನ ಔಷಧಗಳ ಮಿಶ್ರಣ. | Fixed dose combinatins of Hydroxyquinaline group of drugs except preparations for diarhoea and dysentry and for external use only. |
| 14. | ಅಸ್ತಮಾದ ಚಿಕಿತ್ಸೆಗಾಗಿ ಮಾಡುವ ಮಿಶ್ರ ಸಂಯುಕ್ತ ಬಿಟ್ಟು ಇನ್ನೆಲ್ಲ ಔಷಧಗಳಲ್ಲೂ ಸ್ಟಿರಾಯಿಡ್‌ಗಳ ಮಿಶ್ರಣ. | Fixed dose combinations of steroids with any other drugs for internal use except for treatment of Asthma. |
| 15. | ಸ್ಟ್ರೆಪ್ಟೋಮೈಸಿನ್ ಜೊತೆ ಇರುವ ಮಿಶ್ರ ಸಂಯುಕ್ತದ ಹೊರತಾಗಿ ಇನ್ನಾವುದೇ ಔಷಧದೊಂದಿಗೆ ಕ್ಲೋರೊಂಫೆನಿಕಾಲನ್ನು ಬೆರೆಸುವದು | Chloromphenical with other drugs for internmal use except Chloramphenicol with Streptomycin. |
| 16. | ಎರ್ಗಾಟಿನ ಮಿಶ್ರ ಸಂಯುಕ್ತಗಳು. | Fixed dose combinations of Ergot. |
| 17. | ಐಸೋ ನಿಯಾಸಿಡ್ ಜೊತೆ ವಿಟಮಿನ್ $B_6$ ಹೊರತಾಗಿ ಇನ್ನಾವುದೇ ಕ್ಷಯರೋಗದ ಔಷಧದೊಂದಿಗೆ ವಿಟಮಿನ್ ಬೆರೆಸುವದು. | Fixed dose combinations of Vitamins with anti TB drugs except isoniazide with Vit $B_6$. |
| 18. | ಪೆನಿಸಿಲಿನ್ ಕಣ್ಣು/ಚರ್ಮಕ್ಕೆ ಹಚ್ಚುವ ಮಲಮು. | Pencillin Eye/skin ointment. |
| 19. | ಟೆಟ್ರಾಸೈಕ್ಲಿನ್‌ನ ದ್ರವರೂಪದ ಮಿಶ್ರಣ. | Tetracyline liquid preparations. |
| 20. | ನಿಯಲಮೈಡ್. | Nialamide. |
| 21. | ಪ್ರಾಕ್ಟೋಲ್. | Practol. |
| 22. | ಮೆಥಾಪೈರಿಲೀನ್ ಮತ್ತು ಅದರ ಕ್ಷಾರಗಳು. | Methapyriline, its salts. |

23. 1984 ರಲ್ಲಿ 31st Jan GSR 44 (E) ಯ ಆಜ್ಞೆಯ ಪ್ರಕಾರ ಮೆಥಾಕ್ವಲೋನ್ Methaqualone ಈ ಔಷಧಿ ನಿಷೇಧವಾಯಿತು.

24. ಆಕ್ಸಿಟೆಟ್ರಾಸೈಕ್ಲಿನ್‌ದ ದ್ರವರೂಪದ ಔಷಧ Oxytetracyline Oral Preparation

1984 ರ ಮೇ ತಿಂಗಳಲ್ಲಿ (GSR (E) 3rd May) ನಿಷೇಧವಾಯಿತು. ಇದೇ ಆಜ್ಞೆಯಲ್ಲಿ ನಿಷೇಧವಾದ ಇನ್ನೊಂದು ಔಷಧವೆಂದರೆ ಡಿಮೆಕ್ಲೋಸೈಕ್ಲಿನ್‌ದ ದ್ರವರೂಪದ ಔಷಧ. Demeclocyline Liquid Peparation

25. 22nd Dec. 1985 GSR 863 (E) ಆಜ್ಞೆಯಂತೆ ಅನಾಬೊಲಿಕ್ ಸ್ಟಿರಾಯಿಡ್ ಗಳನ್ನು ಬೇರೆ ಔಷಧದೊಂದಿಗೆ ಸೇರಿಸಿದ ಮಿಶ್ರ ಸಂಯುಕ್ತಗಳು ನಿಷೇಧಗೊಂಡವು. Fixed dose combination of Anabolic steroid with other drugs.

26. 15th June 1988 GSR 700 (E) ಆಜ್ಞೆಯು ಇಸ್ಟ್ರೋಜನ್ ಮತ್ತು ಪ್ರೋಜೆಸ್ಟೆ-ರಾನ್‌ಗಳನ್ನು ಹೆಚ್ಚಿನ ಪ್ರಮಾಣ-ದಲ್ಲಿ ಬೆರಸಿದ ಸಂಯುಕ್ತಗಳನ್ನು ನಿಷೇಧಿಸಿತು. High dose Eostrogen and Progesterone combinations

27. 3rd November 1988 ರ GSR 1057 (E) ಆಜ್ಞೆಯು ಇನ್ನೂ ಎರಡು ಸಂಯುಕ್ತಗಳನ್ನು ನಿಷೇಧ ಮಾಡಿತು. ಅವೆಂದರೆ ಕ್ಲೋರಂಫೆನಿಕಾಲ್‌ನ ಮಿಶ್ರ ಸಂಯುಕ್ತ Fixed dose combinations of Chloromphenicol for internal use

28. ಕಾರ್ಟಿಕೋಸ್ಟಿರಾಯಿಡ್‌ಗಳ ಮಿಶ್ರ ಸಂಯುಕ್ತ. Fixed dose combinatins of Corticosteroids for internal use.

ಡಿಸೆಂಬರ 26, 1990 ರ GSR 999(E) ಆಜ್ಞೆಯು 4 ಮಿಶ್ರ ಸಂಯುಕ್ತಗಳನ್ನು ನಿಷೇಧ ಮಾಡಿತು. ಅವೆಂದರೆ,

29. ನೋವು ನಿವಾರಕಗಳೊಂದಿಗೆ ಮತ್ತು ಬರಿಸುವ, ಸಮ್ಮೋಹನ-ಗೊಳಿಸುವ ಮತ್ತು ಉದ್ವೇಗ-ನಿವಾರಕಗಳ ಮಿಶ್ರಣ. Fixed dose combination of Sedatives/hypnotics/ anxiolytics with analgesic-antipyretics.

| | |
|---|---|
| 30. ರಿಫಾಂಪಿಸಿನ್ ಮತ್ತು ಐಎನ್ಹೆಚ್-ಗಳ ಜೊತೆ ಬಿಟ್ಟು ಇನ್ನಾವುದೇ ಕ್ಷಯನಿವಾರಕ ಔಷಧದ ಜೊತೆ ಪೈರಯಿಝಿನಮೈಡ್ ಮಿಶ್ರ ಸಂಯುಕ್ತ. ಈ ಮಿಶ್ರಣವೂ ಕೂಡ ಈ ಕೆಳಗೆ ಕೊಟ್ಟ ಪ್ರಮಾಣ-ದಲ್ಲೇ ಇರಬೇಕು. | Fixed dose combination of Pyrazinamide with other anti tubercular drugs except combination of Pyrazinamide with Rifampicin and INH recommended daily dose given below :– |

| ಔಷಧ | ಅತಿಕಡಿಮೆ | ಅತಿಹೆಚ್ಚು | Drugs | Minimum | Maximum |
|---|---|---|---|---|---|
| ರಿಫಾಂಪಿಸಿನ್ | 450mg | 600mg | Rifampicin | 450mg | 600mg |
| ಐಎನ್ಹೆಚ್ | 300mg | 400mg | INH | 300mg | 400mg |
| ಪೈರಸಿನಮೈಡ್ | 1000mg | 1500mg | Pyrazinamide | 1000mg | 1500mg |

| | |
|---|---|
| 31. ದೇಶದ ಔಷಧ ನಿಯಂತ್ರಣಾಧಿಕಾರಿಯಿಂದ ಪರವಾನಗಿ ಪಡೆದ ಮಿಶ್ರಣದ ಹೊರತಾಗಿ ಇನ್ನಾವುದೇ ಹಿಸ್ಟಮಿನ್ ಎಚ್$_2$ ರಿಸೆಪ್ಟರ್ಎಂಟಾಗನಿಸ್ ಎಂಟಾಸಿಡ್ ಜೊತೆ ಬೆರಸಿದ ಮಿಶ್ರ ಸಂಯುಕ್ತ. | Fixed dose combination of histamine $H_2$ -receptor antagonists with antacids except for combinations approved by the Drugs Controller, India. |
| 32. 0.5 w/w ಅಥವಾ v/v ಗಿಂತ ಹೆಚ್ಚು ಕ್ಲೋರೋಫಾರಂ ಬೆರಸಿದ ಎಲ್ಲಾ ಔಷಧ ಸಂಯುಕ್ತಗಳು. | All pharmaceutical preparations containing Chloroform exceeding 0.5% w/w or v/v whichever is appropriate. |

11ನೇ ಪೆಬ್ರುವರಿ 1991ರ ನಿಷೇಧಾಜ್ಞೆಯು ಈ ಕೆಳಗಿನ ಔಷಧಗಳನ್ನು ನಿಷೇಧಿಸಿದೆ :

| | |
|---|---|
| 33. ಐಎನ್ಹೆಚ್ ಜೊತೆ ಇಥಾಂಬ್ಯುಟಾಲ್‌ನ್ನು ಈ ಕೆಳಗಿನ ಪ್ರಮಾಣದ ಹೊರ-ತಾಗಿ ಇನ್ನಾವುದೇ ರೀತಿಯಲ್ಲಿ ಸೇರಿಸಿ ಮಾರುವುದು. | Fixed dose combinations of Ethambutal with INH other than the following |

| ಐಎನ್ಹೆಚ್ | ಇಂಥಾಬುಟಾಲ್ | INH | Enthambuty |
|---|---|---|---|
| 200 mg. | 600 mg. | 200 mg. | 600 mg. |
| 300 mg. | 800 mg. | 300 mg. | 800 mg. |

| | | |
|---|---|---|
| 34. | ಒಂದಕ್ಕಿಂತ ಹೆಚ್ಚು ಜಾತಿಯ ಅಲರ್ಜಿ ನಿವಾರಕಗಳನ್ನು ಮಿಶ್ರ ಮಾಡುವುದು. | Fixed doe combinations containing more than one anti histamine. |
| 35. | ಪೈಪರಝೀನ್ ಹೊರತಾಗಿ ಇನ್ನಾವುದೇ ಜಂತು-ರೋಧಕ ಓಷಧವನ್ನು ಮೃದು ರೇಚಕ-ದೊಂದಿಗೆ ಮಿಶ್ರ ಮಾಡುವುದು. | Fixed dose combinations of anti helmenthic with purgetives other than piperzine. |
| 36. | ಮಿದುಳು, ನರಗಳ ಮೇಲೆ ಪ್ರಭಾವ ಬೀರಬಲ್ಲ ಔಷಧ-ದೊಂದಿಗೆ ಸಾಲ್‌ಬ್ಯುಟಮಾಲ್-ನಂಥ ಅಸ್ತಮಾ ಔಷಧದ ಮಿಶ್ರಣ. | Fixed dose combinations of salbutamol or any other bronchodilator with Centrally acting anti-fussire and/or anti histamine. |
| 37. | ಎಂಜೈಮುಗಳ ಜೊತೆ ರೇಚಕ ಅಥವಾ/ಮತ್ತು ಹೊಟ್ಟೆ ನೋವಿನ ಔಷಧದ ಮಿಶ್ರಣ. | Fixed dose combinations of Laxatines and/or antispasmodi drugs in enzyme preparations. |
| 38. | ಮೆಟಕ್ಲೋಪ್ರಮೈಡ್ ಜೊತೆ ಆಸ್ಪಿರಿನ್/ಪ್ಯಾರಾಸಿಟಮಾಲ್ ಹೊರತಾಗಿ ಇನ್ನಾವುದೇ ಓಷಧದ ಮಿಶ್ರಣ. | Fixed dose combinations of Metaclopromide with other drugs except for preparations with Aspirin/Paracetamol. |
| 39. | ಕೆಮ್ಮಿನ ರಸಗಳಲ್ಲಿ ಮಿದುಳು, ನರಗಳ ಮೇಲೆ ಪ್ರಭಾವ ಬೀರುವ ಔಷಧದೊಂದಿಗೆ ಅಲರ್ಜಿ ನಿವಾರಕಗಳ ಮಿಶ್ರಣ. | Fixed dose combinations of Centrally acting antifissiore with antihistamine having having atropine like activity in expectorant. |
| 40. | ಅಸ್ತಮಾದ ಕೆಮ್ಮು ಗುಣ ಮಾಡುವ ಕೆಮ್ಮಿನ ಔಷಧಗಳೊಂದಿಗೆ ಮಿದುಳು, ನರಗಳ ಮೇಲೆ ಪ್ರಭಾವ ಬೀರಬಲ್ಲ ಔಷಧಗಳ ಮಿಶ್ರಣ. | Preparations claiming to combat cough associated with asthama containing centrally acting anti-fissure and or antihistamine' |
| 41. | ಮಿದುಳು ಪ್ರಚೋದಕ-ವಾಗಬಲ್ಲಂಥ ಯಾವುದೇ ಔಷಧ ಅಥವಾ 20%ಗಿಂತ ಹೆಚ್ಚಿನ ಆಲ್ಕೋಹಾಲ್- | Liquid oral tonic preparations ontaining glycerophasphates and/or other phasphates and/or central nervous system |

| | |
|---|---|
| ನೊಂದಿಗೆ ಗ್ಲಿಸರೋ ಫಾಸ್ಫೇಟ್ ಅಥವಾ ಇನ್ನಾವುದೇ ಫಾಸ್ಫೇಟ್‌ಗಳ ಮಿಶ್ರಣ. | stiulant and such preparation containing alcohol more than 20% |
| 42. ಜೀರ್ಣನಾಳದಿಂದ ನೇರವಾಗಿ ಹೀರಿಕೊಳ್ಳಬಹುದಾದ ಔಷಧಗಳೊಂದಿಗೆ ಬೇದಿ ನಿವಾರಕಗಳಾದ ಪೆಕ್ಟಿನ್/ ಕೋಲಿನ್‌ಗಳ ಮಿಶ್ರಣ. | Fixed dose combination containing pectin and/or Kaolin with any drug which is systemically absorbed from GI tract except for combinations of pectin and Kaolin with drugs not centrally acting. |

ಈ ಔಷಧಗಳೆಲ್ಲ ಭಾರತದಲ್ಲಿ ನಿಷೇಧವಾಗಿದ್ದರೂ ಕೂಡ ಇವುಗಳಲ್ಲಿ ಎಷ್ಟೋ ಇನ್ನೂ ಮಾರುಕಟ್ಟೆಯಿಂದ ಮರೆಯಾಗಿಲ್ಲ. ಆದ್ದರಿಂದ ಈ ಮುಂದ ಈ ಔಷಧಗಳನ್ನು ಏಕೆ ಉಪಯೋಸುತ್ತಾರೆ, ಅವು ಯಾಕ ನಿಷೇಧ ಆಗಿವೆ ಎಂಬುದನ್ನು ವಿವರಿಸಲಾಗಿದೆ. ಜೊತೆಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಕೆಲವು ಬ್ರ್ಯಾಂಡ್ ಹೆಸರುಗಳನ್ನೂ ಗ್ಲೂಸರಿಯಲ್ಲಿ ನೀಡಲಾಗಿದೆ.

1. **ಅಮಿಡೋಪೈರಿನ್/ಡೈಪೈರಿನ್** Amidopyoine / Dipyrine

ನೋವು, ಜ್ವರ ಮತ್ತು ಉರಿಗೆ ಈ ಔಷಧಗಳನ್ನು ಬಳಸುತ್ತಾರೆ.

ಇದೊಂದು ಅಪಾಯಕಾರಿ ಔಷಧ. ಎಗ್ರ್ಯಾನ್ಯೂಲೋಸೈತೋಸಿಸ್ ಎಂಬ ಅಪಾಯಕಾರಿ ಸ್ಥಿತಿಯನ್ನು ಉಂಟು ಮಾಡಬಹುದು. ರಕ್ತದಲ್ಲಿ ಬಿಳಿಯ ರಕ್ತಕಣಗಳ ಉತ್ಪಾದನೆ ಧಿಡೀರನೇ ನಿಂತು ರೋಗನಿರೋಧಕ ಶಕ್ತಿ ಪೂರಾ ಹೋಗಿ ಬಿಡುತ್ತದೆ. ಸಣ್ಣದೊಂದು ರೋಗ ಬಂದರೂ ಎದುರಿಸಲಾರದೇ ಆತ ಸಾಯ ಬಹುದು. ಎಗ್ರ್ಯಾನ್ಯೂಲೋಸೈಟೋಸಿಸ್ ಧಿಡೀರನೆ ಉಂಟಾಗಬಹುದು ಹಾಗೆಯೇ ಎಪ್ಲಾಸ್ಟಿಕ್ ಎನಿಮಿಯಾ ಎಂಬ ಅಪಾಯಕಾರಿ ಸ್ಥಿತಿಯನ್ನು ಕೂಡ ಈ ಔಷಧಿ ಉಂಟುಮಾಡುತ್ತದೆ.

ಸುರಕ್ಷಿತ, ಬದಲೀ ಔಷಧಗಳು – ಜ್ವರಕ್ಕೆ ಪ್ಯಾರಾಸಿಟಮಾಲ್ (Paracatamol) ಅಥವಾ ಆಸ್ಪಿರಿನ್ (Aspirin) ನೋವು ಮತ್ತು ಉರಿಗೆ ಆಸ್ಪಿರಿನ್.

2. **ಉರಿ ನಿವಾರಕ ಮತ್ತು ಮತ್ತುಬರಿಸುವ ಔಷಧಗಳೊಂದಿಗೆ ವಿಟಮಿನ್‌ಗಳು**

ಮಾರುಕಟ್ಟೆಯಲ್ಲಿ ಇರುವ ಔಷಧಗಳ ಪಟ್ಟಿಯನ್ನು ಕೊಡುವ ವೈದ್ಯಕೀಯ ಗೈಡ್‌ಗಳಿವೆ. CIMS, MIMS ಎಂದು ಇವುಗಳ ಹೆಸರು. ಈ ಗೈಡುಗಳಲ್ಲಿ ಇಂಥ ಮಿಶ್ರ ಸಂಯುಕ್ತಗಳ ಬಗ್ಗೆ ಹೇಳುವುದಿಲ್ಲ. ಉರಿನಿವಾರಕ

ಅಥವಾ ಮತ್ತುಬರಿಸುವ ಔಷಧಗಳೊಂದಿಗೆ ವಿಟಮಿನ್ ಸೇರಿಸುವುದು ಅನವಶ್ಯಕ. ಕೇವಲ ಬೆಲೆ ಮಾತ್ರ ಹೆಚ್ಚುತ್ತದಷ್ಟೇ.

ಬದಲೀ ಔಷಧಗಳು ಉರಿನಿವಾರಕ ಅಥವಾ ಮತ್ತುಬರಿಸುವ ಔಷಧ ಮಾತ್ರ.

**3. ಅಟ್ರೋಪಿನ್‌ನ್ನು ಜ್ವರನಿವಾರಕ/ನೋವುನಿವಾರಕಗಳಲ್ಲಿ ಬೆರೆಸುವುದು**

ಅಟ್ರೋಪಿನ್ (Atropine) ಬೆವರುಗ್ರಂಥಿಗಳ ಕೆಲಸವನ್ನು ತಡೆಯುತ್ತವೆ. ಬೆವರು ಬಾರದಿದ್ದರೆ ಏರಿದ ಜ್ವರ ಇಳಿಯುವುದು ಕಷ್ಟ. ಚರ್ಮದಲ್ಲಿ ಬೆವರು ಬಾರದಿದ್ದರೂ ರಕ್ತ ಸಂಚಲನ ಏರಿರುವುದರಿಂದ ಚರ್ಮ ಬಿಸಿಯಾಗಿ ಒಣಗಿಬಿಡುತ್ತದೆ.

ಸುರಕ್ಷಿತ ಬದಲೀ ಔಷಧಗಳು – ಜ್ವರಕ್ಕೆ ಕೇವಲ Paracetamol ನೋವಿಗೆ Aspirin ಮತ್ತು Atropine ನ್ನು ಬೇರೆ ಸಂಯುಕ್ತದೊಂದಿಗೆ ಬೆರೆಸದೇ ಕೆಲವು ವಿಷಗಳಿಗೆ ವಿಷನಿವಾರಕಗಳಾಗಿ ಬಳಸಬಹುದು. ಇವುಗಳ ಮಿಶ್ರಣ ತಪ್ಪು. ಅಪಾಯಕಾರಿ.

**4. ಟಾನಿಕ್‌ಗಳಲ್ಲಿ ಸ್ಟ್ರಿಕ್ನಿನ್ ಮತ್ತು ಕೇಫಿನ್‌ಗಳ ಮಿಶ್ರಣ**

1985 ರ ವರೆಗೂ ಇದು ಪೇಟೆಯಲ್ಲಿ ಲಭ್ಯವಿತ್ತು. ಕೇಫಿನ್ ಮತ್ತು ಸ್ಟ್ರಿಕ್ನಿನ್‌ಗಳೆರಡೂ ಪ್ರಚೋದಕಗಳು. ಸ್ಟ್ರಿಕ್ನಿನ್‌ಗಂತೂ ಔಷಧಯುಕ್ತ ಗುಣವೇ ಇಲ್ಲ. ಬದಲಿಗೆ ಜಾಸ್ತಿಸೇವಿಸಿದರೆ ವಾಂತಿಯಾಗಿ ಸಾವಿಗೂ ಕಾರಣವಾಗಬಹುದು. ಕೆಫೀನ್ ಟಾನಿಕ್‌ನಲ್ಲಿ ಇದ್ದರೆ ಅದು ಇರಬೇಕಾದ ಪ್ರಮಾಣದಲ್ಲಿ ಇರದೇ ಪ್ರಚೋದಕ ಕೆಲಸವನ್ನು ಮಾಡಲಾರದು. ಹೀಗೆ ಈ ಟಾನಿಕ್ ಒಂದು ಅನವಶ್ಯಕ ಮತ್ತು ಅಪಾಯಕಾರಿ ಮಿಶ್ರ ಸಂಯುಕ್ತವಷ್ಟೇ.

ಬದಲಿಗೆ ಒಳ್ಳೆಯ ಊಟ, ಪ್ರಚೋದಕವಾಗಿ ಎರಡು ಕಪ್ ಕಾಫಿ.

**5. ಯೋಹಿಂಬಿನ್, ಸ್ಟ್ರಿಕ್ನಿನ್‌ಗಳನ್ನು ಟೆಸ್ಟೋಸ್ಟೆರಾನ್ ಮತ್ತು ವಿಟಮಿನ್-ಗಳೊಂದಿಗೆ ಮಿಶ್ರ ಮಾಡುವದು.**

**6. ಯೊಹಿಂಬಿನ್, ಸ್ಟ್ರಿಕ್ನಿನ್ ಆರ್ಸನಿಕ್ ಮತ್ತು ಕಬ್ಬಿಣಾಂಶದ ಮಿಶ್ರಣ.**

ಈ ಎರಡೂ ಗುಂಪಿನ ಮಿಶ್ರ ಸಂಯುಕ್ತಗಳ ಬಗ್ಗೆ ಔಷಧಗಳ ಕುರಿತಾದ ಗೈಡ್ CIMS, MIMS ಗಳಲ್ಲಿ ಪ್ರಸ್ತಾಪ ಆಗಿಯೇ ಇಲ್ಲ.

**7. ಸೋಡಿಯಂ ಬ್ರೋಮೈಡ್/ಕ್ಲೋರಲ್ ಹೈಡ್ರೇಟ್‌ಗಳನ್ನು ಬೇರೆ ಔಷಧಗಳೊಂದಿಗೆ ಸೇರಿಸುವುದು.**

ಸೋಡಿಯಂ ಬ್ರೋಮೈಡ್‌ನಿಂದ ವಾಂತಿ, ತಲೆಗೆ ಚಕ್ರ, ದುಃಸ್ವಪ್ನಗಳು ಉಂಟಾಗುವವು. ಕ್ಲೋರಲ್ ಹೈಡ್ರೇಟ್ ಹೊಟ್ಟೆಯಲ್ಲಿ ಉರಿ, ದುಃಸ್ವಪ್ನ, ಗೊಂದಲಗಳನ್ನುಂಟುಮಾಡುವುದು. ಇವನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸಿದರೆ ಔಷಧಯುಕ್ತ ಪರಿಣಾಮ ಆಗುವುದೇ ಇಲ್ಲ. ಜಾಸ್ತಿ ಸೇವಿಸಿದರೆ ಈ ಅಡ್ಡ ಪರಿಣಾಮಗಳ. ಅಪಾಯಕಾರಿ ಮತ್ತುಬರಿಸುವ ಸಾಕಷ್ಟು ಔಷಧಗಳು

ಪೇಟೆಗೆ ಬಂದಿವೆ. ಉದಾ : ಕೋಡೀನ್ (Codeine)

**8. ಫಿನಾಸಿಟಿನ್.**

ಇದನ್ನು ನೋವು ನಿವಾರಕ, ಜ್ವರನಿವಾರಕ, ಉರಿ ನಿವಾರಕಗಳಾಗಿ ಬಳಸುತ್ತಾರೆ. ಅದರಿಂದ ಮೂತ್ರ, ಜನಕಾಂಗ, ಪಿತ್ತಕೋಶಗಳಿಗೆ ಹಾನಿಯುಂಟು ಮಾಡುತ್ತದೆ.

ಇದರ ಬದಲಿಗೆ ಸುರಕ್ಷಿತ Paracetamol, Aspirin ಗಳು ಇಂದು ಮಾರುಕಟ್ಟೆಯಲ್ಲಿ ಇವೆ. ಅವನ್ನೇ ಬಳಸಬಹುದು.

ಫಿನಾಸಿಟಿನ್‌ನ್ನು ಬೇರೆ ಔಷಧಗಳೊಂದಿಗೆ ಸೇರಿಸಿಯೂ ಮಾರುತ್ತಾರೆ. ಆದರೆ ಫಿನಾಸಿಟಿನ್ ಸ್ವತಃ ಅಪಾಯಕಾರಿ ಆಗಿರುವುದರಿಂದ, ಬೇರೆ ಔಷಧಗಳೊಂದಿಗೆ ಮಿಶ್ರ ಮಾಡಿ ಕೊಡುವುದರಿಂದ ಅನವಶ್ಯಕ, ಅಪಾಯಕಾರಿಯಾಗುತ್ತವೆ.

**9. ಬೇಧಿ ನಿವಾರಕ ಮತ್ತು ಅಲರ್ಜಿ ನಿವಾರಕಗಳ ಮಿಶ್ರ ಸಂಯುಕ್ತಗಳು.**

ಅಲರ್ಜಿನಿವಾರಕಗಳು ಸೇರಿದ ಬೇಧಿ ನಿವಾರಕಗಳನ್ನು ಭೇಧಿ ಶುರುವಾಗುತ್ತಲೇ ಹಾಕಿ ಬಿಟ್ಟರೆ ಅವು ಬೇಧಿಯ ಮೂಲಕಾರಣವೇ ತಿಳಿಯದಂತೆ ಮರೆಮಾಡಿ ಬಿಡುತ್ತವೆ. ಬೇಧಿಗೆ ಹಲವಾರು ಕಾರಣಗಳಿರುತ್ತವೆ. ಮೂಲ ಕಾರಣವನ್ನೇ ತಿಳಿಯದೇ ಔಷಧ ಕೊಟ್ಟರೆ ಅಪಾಯಕಾರಿ ಆಗಬಹುದು. ಕಾರಣ,

ಬೇಧಿ ನಿವಾರಕವನ್ನು ಬೇಧಿಗೂ ಅಲರ್ಜಿ ನಿವಾರಕವನ್ನು ಅಲರ್ಜಿಗೂ ಬೇರೆ-ಬೇರೆಯಾಗಿ ಕೊಡುವುದೊಳ್ಳೆಯದು. ಹೊರತು ಈ ಮಿಶ್ರಣ ಸರಿಯಲ್ಲ.

ಭೇದಿಗೆ ಇನ್ನೊಂದು ಅತ್ಯಂತ ಸುರಕ್ಷಿತ, ನಿರಪಾಯಕಾರಿ ಚಿಕಿತ್ಸೆ ಉಪ್ಪು ಸಕ್ಕರೆ ಮತ್ತು ನೀರು.

ಒಂದು ಗ್ಲಾಸ್ ಕುದಿಸಿದ ನೀರಿಗೆ ಒಂದು ಚಿಟುಕು ಉಪ್ಪು, ಒಂದು ಚಮಚ ಸಕ್ಕರೆ ಹಾಕಿ ಕಲಕಿ ಪ್ರತಿಬಾರಿ ಬೇಧಿ ಆದಾಗಲೂ ಕುಡಿಸುತ್ತಿರಬೇಕು.

ಚಿತ್ರ ೨



**10. ಪೆನಿಸಿಲಿನ್ ಮತ್ತು ಸಲ್ಫನೋಮೈಡ್‌ಗಳ ಮಿಶ್ರ ಸಂಯುಕ್ತಗಳು**

ಬ್ಯಾಕ್ಟೀರಿಯಾ ಸೋಂಕಿಗೆ ಇದನ್ನು ಬಳಸುತ್ತಿದ್ದರು.

ಪೆನಿಸಿಲಿನ್ ಬ್ಯಾಕ್ಟೀರಿಯಾ ನಾಶಕ, ಜೀವಿನಿರೋಧಕ (antibiotic) ಆದರೆ ಸಲ್ಫನಮೈಡ್ ಬ್ಯಾಕ್ಟಿರಿಯಾಗಳು ಹೆಚ್ಚದಂಥ ವಾತಾವರಣ ನಿರ್ಮಿಸುತ್ತದೆ. ಇವೆರಡನ್ನೂ ಸೇರಿಸಿಕೊಟ್ಟರೆ ಪೆನಿಸಿಲಿನ್ ಕೆಲಸಕ್ಕೆ ತೊಂದರೆ ಆಗುತ್ತದೆ. ಔಷಧ

ಕೊಟ್ಟೂ ಪ್ರಯೋಜನ ಆಗುವುದಿಲ್ಲ. ಅಲ್ಲದೇ ಬ್ಯಾಕ್ಟೀರಿಯಾಗಳು ಇವೆರಡೂ ಔಷಧಗಳಿಗೆ ಪ್ರತಿರೋಧ ಬೆಳೆಸಿಕೊಳ್ಳುವ ಸಾಧ್ಯತೆ ಇದೆ.

ಸುರಕ್ಷಿತ ವಿಧಾನವೆಂದರೆ ಎರಡರಲ್ಲಿ ಒಂದನ್ನು ಕೊಡುವುದು Pencillin ಅಥವಾ Sulphonamide ಕೊಡುವುದು. ಎರಡನ್ನೂ ಒಟ್ಟಿಗೇ ಅಲ್ಲ.

**11. ನೋವು ನಿವಾರಕ (Analgesic) ಗಳೊಂದಿಗೆ ವಿಟಮಿನ್‌ಗಳು.**

ನೋವಿಗೆ ನೋವು ನಿವಾರಕ ಉಪಯೋಗಿಸುತ್ತಾರೆ. ಆದರೆ ಅದರ ಜೊತೆ ವಿಟಮಿನ್‌ಗೇನು ಕೆಲಸ ? ಕೇವಲ ಬೆಲೆ ಜಾಸ್ತಿ ಮಾಡುವ ತಂತ್ರವಿದು.

ಬದಲಿಗೆ ನೋವಿಗೆ ನೋವು ನಿವಾರಕ (Analgesic) ಮತ್ತು ವಿಟಮಿನ್ ಕೊರತೆ ಉಂಟಾದರೆ ಅದಕ್ಕೆ ವಿಟಮಿನ್‌ಗಳನ್ನು ಬೇರೆ ಬೇರೆಯಾಗಿ ಕೊಡಬಹುದು.

**12. ಟೆಟ್ರಾಸೈಕ್ಲಿನ್ ಜೊತೆಗೆ ವಿಟಮಿನ್ ಸಿ**

ಬ್ಯಾಕ್ಟೀರಿಯಾ ಸೋಂಕು ತಗುಲಿದಾಗ ಜೀವಿನಿರೋಧಕವಾಗಿ(antiboitic) ಟೆಟ್ರಾಸೈಕ್ಲಿನ್ ಬಳಸುತ್ತಾರೆ.

ಇದರ ಜೊತೆ ವಿಟಮಿನ್ ಸಿ ಸೇರಿಸುವುದು ಅನವಶ್ಯಕ. ಕೇವಲ ಬೆಲೆ ಮಾತ್ರ ಏರಿರುತ್ತದೆ. ಇದರಿಂದ ಅವಶ್ಯಕ ಜೀವಿನಿರೋಧಕವೊಂದು ಸಾಮಾನ್ಯರ ಕೈಗೆಟಕದಂತಾಗುತ್ತದೆ.

ವಿಟಮಿನ್ ಸಿ ಕೊರತೆ ಆಗಿದ್ದರೆ ಮಾತ್ರ ಅದರ ಮಾತ್ರೆಗಳನ್ನು ತಿನ್ನಬೇಕು.

**13. ಹೈಡ್ರಾಕ್ಸಿಕ್ವಿನಲಿನ್‌ದ ಮಿಶ್ರ ಸಂಯುಕ್ತಗಳು, ಬೇಧಿ ಮತ್ತು ದೇಹದ ಹೊರಭಾಗಕ್ಕೆ ಹಚ್ಚುವುದರ ಹೊರತಾಗಿ ಇನ್ನುಳಿದ ಎಲ್ಲ ಸಂಯುಕ್ತಗಳು.**

ಇಂದು ಮಾರುಕಟ್ಟೆಯಲ್ಲಿ ಇರುವ ಹೈಡ್ರಾಕ್ಸಿಕ್ವಿನಾಲೀನ್ ಮಿಶ್ರ ಸಂಯುಕ್ತಗಳೆಲ್ಲ ಕೇವಲ ಬೇಧಿ ಮತ್ತು ಹೊರ ಉಪಯೋಗಕ್ಕಾಗಿ ಮಾತ್ರ ಇವೆ.

ದುರದೃಷ್ಟವಶಾತ್ ಈ ಹೈಡ್ರಾಕ್ಸಿಕ್ವಿನಲೀನ್ ಬೇಧಿಗೆಂದು ಸೇವಿಸಿದರೆ ಕೂಡ ನರ ಮಂಡಲಕ್ಕೆ ಅಪಾಯ ಉಂಟಾಗಿ ಅಂಗವಿಕಲತೆ ಆಗುವ ಸಾಧ್ಯತೆ ಇದೆ. ಆದರೆ ಸರಕಾರ ಈ ಔಷಧವನ್ನು ನಿಷೇಧಿಸಲಿಕ್ಕೆ ತಯಾರಾಗಿಲ್ಲ.

**14. ಅಸ್ತಮಾಕ್ಕಾಗಿ ಮಿಶ್ರ ಮಾಡುವ ಸ್ಟಿರಾಯಿಡ್ ಸಂಯುಕ್ತಗಳ ಹೊರತಾಗಿ ಇನ್ನಾವುದೇ ಔಷಧಗಳೊಂದಿಗೆ ಸ್ಟಿರಾಯಿಡ್ ಮಿಶ್ರ ಸಂಯುಕ್ತ.**

ಸ್ಟಿರಾಯಿಡ್‌ಗಳು ಬಹಳ ಶಕ್ತಿಶಾಲಿ ಔಷಧಗಳು ಈ ಔಷಧಗಳನ್ನು ತೆಗೆದುಕೊಳ್ಳುತ್ತಿರುವವರು ಎಂದಿಗೂ ಒಮ್ಮೆಗೇ ನಿಲ್ಲಿಸಕೂಡದು. ಹಾಗೆ ನಿಲ್ಲಿಸಿದರೆ ರಕ್ತದೊತ್ತಡ, ಮೂತ್ರಕೋಶದ ತೊಂದರೆಗಳು ಶುರುವಾಗುತ್ತವೆ. ಮೊದಲು ಜಾಸ್ತಿ ಪ್ರಮಾಣದ ಔಷಧ ಕೊಟ್ಟು ಕ್ರಮೇಣ ಸ್ವಲ್ಪ ಸ್ವಲ್ಪವೇ ಕಡಿಮೆ ಮಾಡುತ್ತಾ ಬಂದು ಔಷಧವನ್ನು ನಿಲ್ಲಿಸಬೇಕಾಗುತ್ತದೆ. ಬೇರೆ ಔಷಧಗಳೊಂದಿಗೆ

ಸ್ಟಿರಾಯಿಡ್‌ಗಳು ಸೇರಿದ್ದರೆ ರೋಗಿಗದು ಗೊತ್ತಿಲ್ಲದೇ ರೋಗ ಗುಣಕಾಣುತ್ತಲೇ ಆ ಔಷಧವನ್ನು ನಿಲ್ಲಿಸಿಬಿಡುತ್ತಾರೆ. ಬೇರೆ ಔಷಧದೊಂದಿಗಿದ್ದಾಗ ಸ್ಟೀರಾಯಿಡ್ ಸೇರಿದ್ದಾಗ ಅದರ ಪ್ರಮಾಣ ಒಂದೇ ರೀತಿಯಲ್ಲಿರುತ್ತದೆ. ಅವನ್ನು ಅರ್ಧ ಕಾಲುಭಾಗ ತೆಗದುಕೊಳ್ಳುತ್ತ ಹೋದರೆ ಮತ್ತೊಂದು ಔಷಧದ ಪರಿಣಾಮ ಸರಿಯಾಗಿ ಆಗುವುದಿಲ್ಲ. ಹೀಗೆ ಈ ಎರಡು ಔಷಧಗಳ ಮಿಶ್ರಣ ಅನವಶ್ಯಕ ಮತ್ತು ಅಪಾಯಕಾರಿ ಕೂಡ.

ಈಗ ಅಸ್ತಮಾಕ್ಕಾಗಿ ಉಪಯೋಗಿಸುವ ಸ್ಟಿರಾಯಿಡ್ ಮಿಶ್ರ ಸಂಯುಕ್ತಗಳೂ 1988 ರಲ್ಲಿ ನಿಷೇಧವಾಗಿವೆ.

**15. ಕ್ಲೋರಾಂಫೆನಿಕಾಲ್ ಮತ್ತು ಸ್ಟ್ರೆಪ್ಟೋಮೈಸಿನ್ ಮಿಶ್ರಣದ ಹೊರತಾಗಿ ಇನ್ನಾವುದೇ ಔಷಧದೊಂದಿಗೆ ಕ್ಲೋರಾಂಫೆನಿಕಾಲ್ ಬೆರೆಸುವದು.**

ಕ್ಲೋರಾಂಫೆನಿಕಾಲ್ ಟೈಫಾಯಿಡ್, ಪ್ಯಾರಾಟೈಫಾಯಿಡ್ ಬ್ಯಾಕ್ಟಿರೇಮಿಯಾಗಳಂಥ ಬಾಕ್ಟೀರಿಯಾ ಸೋಂಕುಗಳಿಗೆ ಅತ್ಯಂತ ಉಪಯುಕ್ತ ಔಷಧ. ಇದು ಬೇರೆ ಔಷಧದೊಂದಿಗೆ ಮಿಶ್ರವಾಗಿ ಪೇಟೆಗೆ ಬಂದಿತೆಂದರೆ ಚಿಕ್ಕಪುಟ್ಟ ಜ್ವರ, ತಲೆನೋವು, ಸೋಂಕುಗಳಿಗೂ ಬಳಕೆಯಾಗತೊಡಗುತ್ತದೆ. ಪರಿಣಾಮವಾಗಿ ಸೂಕ್ಷ್ಮಜೀವಿಗಳು ಇದಕ್ಕೆ ಪ್ರತಿರೋಧವನ್ನು ಬೆಳಸಿಕೊಂಡು, ಬಳಸಬೇಕಾದಾಗ ಬಳಸಿದರೆ ಪ್ರಯೋಜನ ಇಲ್ಲದಂತಾಗುತ್ತದೆ.

ಕ್ಲೋರಾಂಫೆನಿಕಾಲ್‌ನಿಂದ ಎಗ್ರಾನ್ಯುಲೋಸೈಟೋಸಿಸ್‌ನಂಥ ಅಪಾಯಕಾರಿ ಸ್ಥಿತಿ ಉಂಟಾಗುವ ಸಂಭವವಿದೆ. ಕಾರಣ ಇದನ್ನು ಅತಿ ಕಡಿಮೆ ಬಳಸಿದಷ್ಟು ಕ್ಷೇಮ. ಟೈಫಾಯಿಡ್‌ಗೆ ಇದು ರಾಮಬಾಣ. ಇಂಥ ಅತಿಕ್ಲಿಷ್ಟ ಸಂದರ್ಭದಲ್ಲಿ, ಬೇರೆ ಯಾವ ಔಷಧವೂ ಕೆಲಸ ಮಾಡದ ಸ್ಥಿತಿಯಲ್ಲಿ ಮಾತ್ರ, ಕ್ಲೋರಾಂಫೆನಿಕಾಲನ್ನು ಕೊಡಬೇಕು.

ಕ್ಲೋರಾಂಫೆನಿಕಾಲ್ ಮತ್ತು ಸ್ಟ್ರೆಪ್ಟೋಮೈಸಿನ್ ಮಿಶ್ರ ಸಂಯುಕ್ತವನ್ನೂ 1988 ರಲ್ಲಿ ನಿಷೇಧ ಮಾಡಲಾಯಿತು.

**16. (Ergot) ಎರ್ಗಾಟ್‌ನ್ ಮಿಶ್ರ ಸಂಯುಕ್ತಗಳು.**

ಎರ್ಗಟಮೈನ್ (Ergatamine) ಅರೆತಲೆನೋವಿಗೆ ಉಪಯುಕ್ತ ಎರ್ಗೊಮೆಟ್ರಿನ್‌ನ್ನು (Ergometrine) ಹೆರಿಗೆಯಾದ ಕೂಡಲೇ ಆಗಬಹುದಾದ ಅತಿ ರಕ್ತಸ್ರಾವವನ್ನು ತಡೆಯಲು ಉಪಯೋಗಿಸುತ್ತಾರೆ. ಇದನ್ನು ಅತೀ ಕಡಿಮೆ ಪ್ರಮಾಣದಲ್ಲಿ ಬಳಸಬೇಕು. ಇಲ್ಲವಾದರೆ ಅಂಗ ಕೊಳೆಯುವ (Gangrene) ಆಗುವ ಸಂಭವವಿದೆ.

Ergotamine ನ್ನು ದಿನಕ್ಕೆ 6 ಮಿ. ಗ್ರಾಂ. ಗಿಂತ ಜಾಸ್ತಿ ಉಪಯೋಗಿಸಬಾರದು. ವಾರಕ್ಕೆ 10ಮಿ. ಗ್ರಾಂ. ಗಿಂತ ಜಾಸ್ತಿ ಸೇವನೆಯಾದರೆ ಅಪಾಯಕಾರಿ Ergot ಕ್ಷಾರಗಳ ಸೇವನೆ ಹೆಚ್ಚಾಗಿ ಔಷಧವೇ ವಿಷವಾಗಬಲ್ಲದು.

**17. Isoniazide ಔಷಧದೊಂದಿಗೆ Pyridexine Hydrochloride ಅಥವಾ ವಿಟಮಿನ್ $B_6$ ಮಿಶ್ರಣದ ಹೊರತಾಗಿ ಯಾವುದೇ ಕ್ಷಯರೋಗದ ಔಷಧದೊಂದಿಗೆ ವಿಟಮಿನ್‌ಗಳನ್ನು ಬೆರೆಸುವದು.**

ಕ್ಷಯರೋಗಕ್ಕೆ ಆ ರೋಗದ ಔಷಧ ಬೇಕು. ಆದರೆ ಅದರೊಂದಿಗೆ ವಿಟಮಿನ್‌ಗಳನ್ನು ಹಾಕವುದು ಕೇವಲ ಬೆಲೆ ಹೆಚ್ಚಿಸಕ್ಕಾಗಿ. ಐಸೋನಿಯಾಸೈಡ್(Isoniazide) ಔಷಧ ಸೇವಿಸಿದಾಗ ದೇಹದಲ್ಲಿನ ವಿಟಮಿನ್ $B_6$ನ್ನು ಕಡಿಮೆ ಮಾಡುತ್ತದೆಯಾದ್ದರಿಂದ ಈ ಔಷಧದೊಂದಿಗೆ ವಿಟಮಿನ್$B_6$ ನ್ನು ಸೇರಿಸಬಹುದು.

**18. ಪೆನಿಸಿಲಿನ್ ದ ಕಣ್ಣು /ಚರ್ಮದ ಮಲಮು.**

ಈ ಮಲಮು ಈಗ ಪೇಟೆಯಲ್ಲಿ ಲಭ್ಯವಿಲ್ಲ

**19. ಟೆಟ್ರಾಸೈಕ್ಲಿನ್ ಗುಂಪಿನ ಔಷಧಗಳು ದ್ರವರೂಪದಲ್ಲಿ**

ಟೆಟ್ರಾಸೈಕ್ಲಿನ್‌ನ್ನು ಬ್ಯಾಕ್ಟೀರಿಯಾದ ಸೋಂಕು ತಗುಲಿದಾಗ ಔಷಧವಾಗಿ ಉಪಯೋಗಿಸುತ್ತಾರೆ. ಆದರೆ ಚಿಕ್ಕ ಮಕ್ಕಳು, 12 ವರ್ಷದೊಳಗಿನ ಮಕ್ಕಳು ಇದನ್ನು ಸೇವಿಸಿದರೆ ಹಲ್ಲಿನ ಬಣ್ಣ ಬದಲಾಗುತ್ತದೆ. ಅಲ್ಲದೇ ಔಷಧವು ದೇಹದ ಎಲುಬುಗಳ ಮೇಲೆ ಶೇಖರವಾಗಿ ಎಲುಬಿನ ಬೆಳವಣಿಗೆಯನ್ನೇ ತಡೆಯುತ್ತದೆ. ಸ್ವಲ್ಪ ಸೇವಿಸಿದರೂ ಈ ಅಡ್ಡ ಪರಿಣಾಮ ಇದ್ದೇ ಇದೆ. ಪ್ರಮಾಣ ಜಾಸ್ತಿ ಆದಂತೆ ಪರಿಣಾಮವೂ ಜಾಸ್ತಿ.

ಅಲ್ಲದೆ ಗರ್ಭಿಣಿಯರು, ಹಾಲೂಡುವ ತಾಯಂದಿರು ಇದನ್ನು ನುಂಗಿದರೆ ಲಿವರ್ (ಪಿತ್ತಜನಕಾಂಗ) ಹಾಳಾಗುತ್ತದೆ.

ದ್ರವರೂಪದ ಔಷಧವೆಂದರೆ ಮಕ್ಕಳಿಗಾಗಿ ಇರುತ್ತದೆಯಾದುದರಿಂದ ಇದನ್ನು ನಿಷೇಧಿಸಲಾಯಿತು.

ಟೆಟ್ರಾಸೈಕ್ಲಿನ್ ಬದಲಿಗೆ ಬೇರೆ ಜೀವಿನಿರೋಧಕವನ್ನು ಕೊಡುವುದು ಕ್ಷೇಮಕರ.

**20. ಸಿಯಾಲಮೈಡ್** – ಇದು ಭಾರತದಲ್ಲಿ ಸಿಗುವುದಿಲ್ಲ

**21. ಪ್ರಾಕ್ಟೋಲೋಲ್** –ಇದೂ ಭಾರತದಲ್ಲಿ ಸಿಗುವುದಿಲ್ಲ.

**22. ಮೆಥಾಪ್ಪೆರಿಲಿನ್ ಮತ್ತು ಅದರ ಲವಣಗಳು**

1984 ರ ವರೆಗೂ ಇವು ಪೇಟೆಯಲ್ಲಿ ಸಿಗುತ್ತಿದ್ದವು. ಇದನ್ನು ಉಪಯೋಗಿಸುತ್ತಿದ್ದರು. ಈ ಔಷಧಗಳು ಕ್ಯಾನ್ಸರನ್ನುಂಟುಮಾಡುವ ಭಯವಿದೆ.

**23. ಮೆಥಾಕ್ವಲೋನ್**

ಮನೋರೋಗಿಗಳಿಗೆ ಮತ್ತು ದುರ್ವ್ಯಸನಿಗಳಿಗೆ ಬಳಸುವ ಔಷಧವಿದು. ಆದರೆ ಇದರ ಅತಿ ಬಳಕೆಯಿಂದಾಗಿ ರೋಗಿ ಇದಕ್ಕೇ ದಾಸನಾಗುವ ಭಯವಿದೆ


**24. ಆಕ್ಸಿಟೆಟ್ರಾಸೈಕ್ಲಿನ್ ದ್ರವರೂಪದ ಔಷಧ**

**25. ಡಿಮೆಕ್ಲೋಸೈಕ್ಲಿನ್**

ಟೆಟ್ರಾಸೈಕ್ಲಿನ್‌ನ್ನು ನಿಷೇಧ ಮಾಡುತ್ತಲೇ ಔಷಧ ಕಂಪನಿಗಳು ಈ ಎರಡು ರೂಪದ ಅದೇ ಔಷಧವನ್ನು ಉತ್ಪಾದಿಸತೊಡಗಿದವು. ಇವು ಕೂಡ ಮಕ್ಕಳ ಎಲುಬಿನ ಬೆಳವಣಿಗೆಗೆ ಹಾನಿಕಾರಕವಾದುದರಿಂದ ಮತ್ತೆ ನಿಷೇಧ ಮಾಡಲಾಯಿತು.

**26. ಅನಾಬೋಲಿಕ್ ಸ್ಟಿರಾಯಿಡ್‌ನ್ನು ಬೇರೆ ಔಷಧಗಳೊಂದಿಗೆ ಬೆರೆಸಿ ಮಾರುವುದು**

ಅನಾಬೋಲಿಕ್ ಸ್ಟಿರಾಯಿಡ್‌ಗಳು ಮಕ್ಕಳಲ್ಲಿ ಎಲುಬಿನ ಬೆಳವಣಿಗೆಯನ್ನು ತಡೆಯುತ್ತವೆ. ಲೈಂಗಿಕ ಬೆಳವಣಿಗೆಯನ್ನೂ ಸಹ ಕುಂಠಿತಗೊಳಿಸುತ್ತದೆ. ಆದರೆ ಇದನ್ನು ಬೆಳವಣಿಗೆಯ ಟಾನಿಕ್ ಎಂದು ಮಾರಲಾಗುತ್ತದೆ. ಹಾಗೆಯೇ ಎಪ್ಲಾಸ್ಟಿಕ್ ಅನಿಮಿಯಾ ಮತ್ತು ಮುದಿವಯಸ್ಕರಿಗೆ Osteopcrosis ಎಲುಬಿನ ತೊಂದರೆಗಳಿಗೆ ಕೊಡುವ ಔಷಧಗಳಲ್ಲಿ ಇದನ್ನು ಹಾಕಿರುತ್ತಾರೆ.




ಒಳ್ಳೆಯ ಆಹಾರವೇ ಇದಕ್ಕೆ ಉತ್ತಮ ಬದಲೀ ಔಷಧ.

**27. ಇಸ್ಟ್ರೋಜನ್ ಮತ್ತು ಪ್ರೊಜೆಸ್ಟರಾನ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಕಿ ಮಾಡಿದ ಸಂಯುಕ್ತಗಳು**

(ವಿವರಕ್ಕಾಗಿ ಹಿಂದಿನ ಅಧ್ಯಾಯ ನೋಡಿ)

**28. ಕ್ಲೋರಾಂಫೆನಿಕಾಲ್ ಮತು ಸ್ಟ್ರೆಪ್ಟೋಮೈಸಿನ್‌ಗಳ ಮಿಶ್ರ ಸಂಯುಕ್ತ**

ಈ ಎರಡೂ ಔಷಧಗಳು ಬೇರೆ ಬೇರೆಯಾಗಿ ಉಪಯುಕ್ತ. ಅನಾವಶ್ಯಕ ಮತ್ತು ಅತಿಯಾದ ಬಳಕೆಯಿಂದ ಅಪಾಯವೂ ಇದೆ. ಆದ್ದರಿಂದ ಅತ್ಯವಶ್ಯಕ

ಇರುವಕಡೆ ಮಾತ್ರ, – ಬೇರೆ ಔಷಧ ಕೆಲಸಮಾಡದಿದ್ದಾಗ ಮಾತ್ರ, ಇವನ್ನು ಬಳಸ-ಬೇಕು. ಇಲ್ಲವೆಂದರೆ ಅವಶ್ಯಕ ಸಂದರ್ಭಗಳಲ್ಲಿ ಬಳಸಿದಾಗ ಔಷಧ ಕೆಲಸಮಾಡದೆ ಹೋದೀತು.

**29. ಕಾರ್ಟಿಕೋಸ್ಟಿರಾಯಿಡ್‌ಗಳ ಮಿಶ್ರ ಸಂಯುಕ್ತಗಳು**

ಹಿಂದೆಯೇ ಹೇಳಿರುವಂತೆ ಸ್ಟಿರಾಯಿಡ್‌ಗಳನ್ನು ಇನ್ನಾವುದೇ ಔಷಧದೊಂದಿಗೆ ಮಿಶ್ರ ಮಾಡಿದಾಗ ಅವನ್ನು ಸ್ವಲ್ಪ ಸ್ವಲ್ಪವೇ ಕಡಿಮೆ ಮಾಡುತ್ತ ಬಂದು ನಿಧಾನವಾಗಿ ನಿಲ್ಲಿಸಲಿಕ್ಕೆ ಆಗುವುದಿಲ್ಲ. ಇದರಿಂದ ರಕ್ತದ ಒತ್ತಡ, ಮೂತ್ರಕೋಶದ ತೊಂದರೆಗಳು ಉಂಟಾಗುತ್ತವೆ. ಆದ್ದರಿಂದ ಇಂಥ ಸಂಯುಕ್ತ-ಗಳು ಅಪಾಯಕಾರಿ.

**30. ಜ್ವರ ಮತ್ತು ನೋವು ನಿವಾರಕಗಳೊಂದಿಗೆ ಮತ್ತುಬರಿಸುವ, ಸಮ್ಮೋಹನಗೊಳಿಸುವ ಮತ್ತು ಉದ್ವೇಗನಿವಾರಕಗಳ ಮಿಶ್ರಣ**

ಇವೆಲ್ಲವುಗಳ ಮಿಶ್ರಮಾಡಿ ಉಪಂಯೋಗಿಸುವ ಅವಶ್ಯಕತೆಯೇ ಬರುವುದಿಲ್ಲ. ಇದೊಂದು ಅನಾವಶ್ಯಕ ಮಿಶ್ರಣವಾಗುತ್ತದಷ್ಟೆ.

**31. ಕ್ಷಯ ರೋಗ ನಿವಾರಕ ಔಷಧದ ಜೊತೆ ಪೈರಝಿನಮೈಡ್‌ನ ಮಿಶ್ರಣ (ರಿಫಾಂಪಿಸಿನ್ ಮತ್ತು ಐಎನ್ಹೆಚ್ ಹೊರತಾಗಿ)**

ಕ್ಷಯ ರೋಗ ನಿವಾರಣೆಗೆ ಈ ಮೂರು ಔಷಧಗಳ ನಿಗದಿತಪ್ರಮಾಣದ ಮಿಶ್ರಣವಿದ್ದಾಗ ಮಾತ್ರವೇ ಅದು ಉಪಯುಕ್ತ ಬೇರೆ ರೀತಿಯ ಮಿಶ್ರಣವಿದ್ದಾಗ ಆ ಔಷಧ ಪ್ರಯೋಜನವಾಗುವುದಿಲ್ಲ.

**32. ಹಿಸ್ಟಮಿನ್ ಎಚ್ ರಿಸೆಪ್ಟರ್ ಎಂಟಾಗನಿಸ್ಟ್ ಜೊತೆ ಎಂಟಾಸಿಡ್**

ಹೊಟ್ಟೆಹುಣ್ಣು ಗುಣಮಾಡಲೆಂದು ಈ ಮಿಶ್ರಣ ತಯಾರಿಸಿ ಮಾರುತ್ತಾರೆ. ಆದರೆ ಈ ಮಿಶ್ರಣ ಅನಾವಶ್ಯಕ.

**33. ಕ್ಲೋರೋಫಾರಂ ಹೆಚ್ಚು ಬೆರೆಸಿದ ಎಲ್ಲಾ ಔಷಧ ಸಂಯುಕ್ತಗಳು**

ಔಷಧದಲ್ಲಿ ಹೆಚ್ಚು ಕ್ಲೋರೊಫಾರಂ ಹಾಕಿದ್ದರೆ ಅದು ಒತ್ತಕೋಶಕ್ಕೆ ಅಪಾಯಕಾರಿ ಆಗಬಹುದು.

# 7. ನಿಷೇಧ ಆಗಬೇಕಾಗಿರುವ ಔಷಧಗಳು

ಔಷಧ ನಿಷೇಧ ಬಲು ಕಷ್ಟದ ಕೆಲಸ. ದೇಶ ವಿದೇಶಗಳಲ್ಲಿ ತಮ್ಮ ಜಾಲ ಬಿಚ್ಚಿರುವ ಬಲಾಢ್ಯ ಕಂಪನಿಗಳ ವಿರುದ್ಧ ಮಾಡಬೇಕಾದ ಕೆಲಸವಿದು. ಕಾನೂನನ್ನೇ ತಮಗೆ ಬೇಕಾದಂತೆ ತಿರುಚಬಲ್ಲ ಶಕ್ತಿಗಳಿವು. ಸರಕಾರದಲ್ಲಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲೇ ಜನಪ್ರತಿನಿಧಿಗಳು ಇವರ ಜಾಲದಲ್ಲಿ ಬೀಳಬೇಕಾಗುತ್ತದೆ. ಹೀಗಾಗಿ ಎಷ್ಟೋ ಔಷಧ ನಿಷೇಧ ಪ್ರಯತ್ನಗಳು ಮಧ್ಯದಲ್ಲೇ ಕೈಬಿಟ್ಟು ಹೋಗುತ್ತವೆ.

೧೯೮೦ ರಲ್ಲಿ ನಿಷೇಧ ಮಾಡಬೇಕಾದ ಔಷಧಗಳ ಪಟ್ಟಿ ತಯಾರಿಸಲು 'ಔಷಧ ಸಲಹಾ ಆಯೋಗದ ಉಪಸಮಿತಿಯೊಂದನ್ನು ರಚಿಸಲಾಯಿತು. ಈ ಉಪ-ಸಮಿತಿ ಅಧ್ಯಯನ ಮಾಡಿ ನಿಷೇಧಮಾಡಬೇಕಾದ ಔಷಧಗಳ ಪಟ್ಟಿ ಮಾಡಿತು. ೧೯೮೨ ರಲ್ಲಿ ಇನ್ನೂ ಒಂದು 'ಔಷಧ ತಾಂತ್ರಿಕ ಶಿಫಾರಸು ಮಂಡಳಿಯನ್ನು (Drug Technical Advisory Board) ಮಾಡಿದರು. ಈ ಮಂಡಳಿ ೧೯೮೦ ರ ಉಪಸಮಿತಿ ತಯಾರಿಸಿದ್ದ ಪಟ್ಟಿಯನ್ನು ಪರಿಶೀಲಿಸಿತು. ಅವುಗಳಲ್ಲಿ ಎಲ್ಲವೂ ಸಕಾರಣವಾಗಿ ಬೇಡದ ಔಷಧಗಳೇ ಆಗಿದ್ದರೂ ಕೂಡ ಕೆಲವನ್ನು ಬದಿಗಿಟ್ಟರು. ಹೀಗಾಗಿ ಕೆಲವು ಔಷಧಗಳು ಅನಾವಶ್ಯಕ ಅಪಾಯಕಾರಿ ಎಂದು ತಿಳಿದಿದ್ದೂ ನಿಷೇಧವಾಗದೇ ಉಳಿದಿದೆ. ಈ ಎರಡೂ ಉಪಸಮಿತಿ ಮಂಡಲಿಗಳೂ ಶಿಫಾರಸು ಮಾಡಿದ್ದ ಕೆಲವು ಔಷಧಗಳೂ ಸಹ ಇನ್ನೂ ನಿಷೇಧವಾಗದೇ ಉಳಿದಿವೆ.

**ನಿಷೇಧ ಮಾಡಬೇಕೆಂದು ಶಿಫಾರಸು ಆಗಿರುವ ಔಷಧಗಳು.**

೧. ಟೆಟ್ರಾಸೈಕ್ಲಿನ್ ಅನಾಲ್ಜಿನ್ ಮತ್ತು ವಿಟಮಿನ್ ಸಿ ಯ ಮಿಶ್ರ ಸಂಯುಕ್ತ.

ಈ ಹಿಂದೆಯೇ ಹೇಳಿದಂತೆ ಟೆಟ್ರಾಸೈಕ್ಲಿನ್‌ನ್ನು ಬ್ಯಾಕ್ಟೀರಿಯಾ ಸೋಂಕಿಗೆ ಮಾತ್ರ ಬಳಸಬೇಕು. ಇದರ ಅತಿಬಳಕೆಯಾದರೆ ಬ್ಯಾಕ್ಟೀರಿಯಾಗಳು ಇದಕ್ಕೆ ಪ್ರತಿರೋಧವನ್ನು ಬೆಳೆಸಿಕೊಂಡು ಬಿಡುತ್ತವೆ. ಅನಾಲ್ಜಿನ್ ಅತ್ಯಂತ ಅಪಾಯಕಾರಿ ಔಷಧವಾದ್ದರಿಂದ ಅದರ ಅತಿಬಳಕೆಯೂ ಕೂಡದು. ಅದರ ಹೊರತಾಗಿ ಬೇರೆ ಯಾವ ಔಷಧವೂ ಕೆಲಸ ಮಾಡದ ಸಂದರ್ಭದಲ್ಲಿ ಮಾತ್ರ ಅದನ್ನು ಬಳಸ-ಬೇಕು. ಇವೆರಡೂ ಔಷಧಗಳ ಮಿಶ್ರಣ ಅಪಾಯಕಾರಿ. ಇವುಗಳ ಜೊತೆ ವಿಟಮಿನ್ ಸಿ ಯ ಬೆರಕೆ ಅನವಶ್ಯಕ. ವಿಟಮಿನ್ ಸಿ ಯ ಕೊರತೆ ಆದಾಗ ಅದೊಂದನ್ನೇ ಸೇವಿಸಬೇಕೇ ಹೊರತು ಬೇರೆ ಔಷಧಗಳೊಂದಿಗೆ ಅದನ್ನು ಮಿಶ್ರಮಾಡಿ ಅಲ್ಲ. ಹೀಗಿರುವಾಗ ಈ ಮೂರೂ ವಸ್ತುಗಳ ಮಿಶ್ರಣ ಅಪಾಯ ಕಾರಿ, ಅನವಶ್ಯಕ ಮತ್ತು ದುಬಾರಿ. ಈ ಎಲ್ಲ ದೃಷ್ಟಿಯಿಂದಲೂ ಇದು ಅತ್ಯವಶ್ಯವಾಗಿ ನಿಷೇಧ ಆಗಲೇಕಾದ ಸಂಯುಕ್ತ.

೨. ಒಂದಕ್ಕಿಂತ ಹೆಚ್ಚು ಅಲರ್ಜಿ–ನಿರೋಧಕಗಳ ಮಿಶ್ರ ಸಂಯುಕ್ತ.

ಅಲರ್ಜಿ-ನಿರೋಧಕಗಳು ಒಂದೊಂದೂ ಒಂದೊಂದು ರೀತಿಯಲ್ಲಿ ಕೆಲಸ

ಮಾಡುತ್ತವೆ. ಎರಡು ಮೂರನ್ನು ಒಟ್ಟಿಗೆ ಸೇರಿಸುವದರಿಂದ ಒಟ್ಟಾರೆ ಅಲರ್ಜಿ - ನಿರೋಧಕ ಗುಣ ಹೆಚ್ಚಬಿಡುವುದಿಲ್ಲ. ಬದಲಿಗೆ ತಂತಮ್ಮ ಅಡ್ಡ ಪರಿಣಾಮ ಗಳನ್ನು ದೇಹದ ಮೇಲೆ ತೋರಿಸಬಹುದಷ್ಟೇ. ಆದ್ದರಿಂದ ಇದೊಂದು ಶುದ್ಧ ಅನವಶ್ಯಕ ಔಷಧ ಸಂಯುಕ್ತ.

3. ಅಲರ್ಜಿ ನಿವಾರಕ, ಮತ್ತುಬರಿಸುವ ಔಷಧಗಳ ಮಿಶ್ರ ಸಂಯುಕ್ತ.

(Fixed dose combinations of antihistamic and Tranquillizers.)

ಮತ್ತು ಬರಿಸುವ ಔಷಧ Tranquilliser ಗಳು ತುಂಬ ಶಕ್ತಿಶಾಲಿ ಔಷಧಗಳು. ಅಲರ್ಜಿ ನಿವಾರಕದೊಂದಿಗೆ ಇವನ್ನು ಬೆರೆಸಿದರೆ ರೋಗಿ ವೃಥಾ ಜಾಸ್ತಿ, ನಿದ್ದೆ ಮಾಡುತ್ತಾನಲ್ಲದೇ, ಆತನ ದೈನಂದಿನ ಕೆಲಸಗಳಲ್ಲಿ ಮಂಕುತನ ಕವಿದು ಅಡೆತಡೆಯುಂಟಾಗುವದು. ಆತನ ಚಟುವಟಿಕಗಳು ಕುಂಠಿತವಾಗುತ್ತವೆ. ಇದರಿಂದ ಈ ಮಿಶ್ರಣ ಅನವಶ್ಯಕ

4. ಅಲರ್ಜಿ ನಿವಾರಕ, ನೋವು ನಿವಾರಕ ಮತ್ತು ಮತ್ತುಬರಿಸುವ ಔಷಧಗಳ ಮಿಶ್ರಣ (Fixed dose combinations of antihistamics, Analgesics & Tranquillzers).

ಮೇಲೆ ಹೇಳಿದಂತೆ ಅಲರ್ಜಿ ನಿವಾರಕ ಮತ್ತು ಮತ್ತುಬರಿಸುವ ಔಷಧಗಳ ಮಿಶ್ರಣ ಅನವಶ್ಯಕ. ಇದರ ಜೊತೆ ನೋವುನಿವಾರಕ Analgesic ಸೇರಿದರಂತೂ ಅದು ಅಪಾಯಕಾರಿ ಮಿಶ್ರಣವಾಗುತ್ತದೆ. ಈ ಮೂರೂ ಔಷಧಗಳ ಆವಶ್ಯಕತೆ ಒಟ್ಟಿಗೇ ಬೀಳುವ ಸಾಧ್ಯತೆಯೇ ಇಲ್ಲ. ಯಾವ ತೊಂದರೆ ಇದೆಯೋ ಅದಕ್ಕೆ ತಕ್ಕ ಔಷಧ ಮಾತ್ರ ಇರಲಿ ಅದರೊಂದಿಗೆ ಬೇರೆಯದನ್ನು ನೀಡುವುದು ಶುದ್ಧ ತಪ್ಪು.

5. ಪ್ಯಾರಾಸಿಟಮಾಲ್, ಅಲರ್ಜಿನಿವಾರಕ ಮತ್ತು ಮತ್ತುಬರಿಸುವ ಔಷಧಗಳ ಮಿಶ್ರಣ (Fixed dose combnations of Paracetamol, Antihistamic and Tranquillisers.)

ಈ ಮೂರೂ ಔಷಧಗಳ ಆವಶ್ಯಕತೆ ಒಮ್ಮೆಗೇ ಬೀಳದಿರುವುದರಿಂದ ಇವುಗಳನ್ನು ಸೇರಿಸಿ ಮಾರುವುದು ಶುದ್ಧ ಅನವಶ್ಯಕ

6. 1980, 'ಔಷಧ ಸಲಹಾ ಸಮಿತಿಯ ಉಪಸಮಿತಿ' ಮತ್ತು 1982 ರ ಔಷಧ ತಾಂತ್ರಿಕ ಶಿಫಾರಸು ಮಂಡಳಿ ಎರಡೂ ನಿಷೇಧ ಮಾಡಬೇಕೆಂದು ಶಿಫಾರಸು ಮಾಡಿದ್ದ ಆದರೆ ನಿಷೇಧವಾಗದ ಔಷಧವೊಂದಿದೆ. ಆದೆಂದರೆ, ಆಯುರ್ವೇದ, ಯುನಾನಿ ಔಷಧಗಳೊಂದಿಗೆ ಇಂಗ್ಲೀಷ್ ಔಷಧಗಳ ಮಿಶ್ರ ಸಂಯುಕ್ತ.

(Fixed dose combinations of Ayurvedic and unani drugs with Modern drugs.)

ಎರಡು ಬೇರೆ ಬೇರೆ ವೈದ್ಯವಿಧಾನಗಳ ಔಷಧಗಳನ್ನು ಮಿಶ್ರ ಮಾಡುವುದರಿಂದ ಆ ಎರಡು ಔಷಧಗಳ ಮಧ್ಯೆ ಆಗಬಹುದಾದ ಕ್ರಿಯೆ

ಪ್ರತಿಕ್ರಿಯೆಗಳ ಬಗ್ಗೆ ಅಧ್ಯಯನ ನಡೆದಿಲ್ಲ. ಅವುಗಳ ಅಡ್ಡ ಪರಿಣಾಮ ಅಪಾಯಕರ ಗುಣಗಳ ಬಗ್ಗೆ ಗೊತ್ತಿಲ್ಲದೇ ಹೀಗೆ ಔಷಧಗಳನ್ನು ಬೆರೆಸಿ ರೋಗಿಗೆ ಕೊಡುವುದು ತಪ್ಪು.

7. ಸ್ಟ್ರೆಪ್ಟೋಮೈಸಿನ್ ಮತ್ತು ಪೆನಿಸಿಲಿನ್‌ಗಳ ಮಿಶ್ರ ಸಂಯುಕ್ತ

(Fixed dose combinations of streptomycin and Penicillin.)

ಈ ಔಷಧಕ್ಕೆ ನಿಶ್ಚಿತ ಉಪಯುಕ್ತತೆ ಇಲ್ಲ. ಆದರೂ ಯಾವುದೇ ರೀತಿಯ ಬ್ಯಾಕ್ಟೀರಿಯಾ ಸೋಂಕಿಗೆ ಇದನ್ನು ವೈದ್ಯರು ಬರೆದು ಕೊಡುತ್ತಾರೆ. ಇದು ನಿಶ್ಚಿತವಾಗಿಯೂ ಅನವಶ್ಯಕ ಅಪಾಯಕಾರಿ ಔಷಧ.

ಸ್ಟ್ರೆಪ್ಟೋಮೈಸಿನ್‌ನ್ನು ಕ್ಷಯರೋಗ ಮತ್ತು ನ್ಯುಮೋನಿಯಾಕ್ಕೆ ಉಪಯೋಗಿಸುತ್ತಾರೆ. ಪೆನಿಸಿಲಿನ್ ಕ್ಷಯರೋಗಕ್ಕೆ ಉಪಯೋಗವಿಲ್ಲದ ಔಷಧ. ಆದ್ದರಿಂದ ಇದು ಅನವಶ್ಯಕ ಪೆನಿಸಿಲಿನ್ ಕೊಡುವ ಕಡೆ ಈ ಮಿಶ್ರ ಔಷಧವನ್ನು ಕೊಡುತ್ತ ಹೋದರೆ ಬ್ಯಾಕ್ಟರಿಯಾಗಳು ಇದಕ್ಕೆ ಪ್ರತಿರೋಧ ಬೆಳೆಸಿಕೊಂಡು ಬಿಡುತ್ತವೆ. ಮುಂದೆ ಎಂದಾದರೂ ಕ್ಷಯ ಅಥವಾ ನ್ಯುಮೋನಿಯಾಕ್ಕೆ ಇದನ್ನೇ ಅಥವಾ ಕೇವಲ ಸ್ಟ್ರೆಪ್ಟೋಮೈಸಿನ್‌ನ್ನು ಕೊಟ್ಟರೂ ಪ್ರತಿರೋಧದಿಂದಾಗಿ ಔಷಧ ಕೆಲಸಮಾಡದೇ ಹೋಗುತ್ತದ. ಹೀಗೆ ಈ ಮಿಶ್ರ ಸಂಯುಕ್ತದಿಂದ ನಿಶ್ಚಿತವಾಗಿ ಅಪಾಯವಿದೆ.

ಇದನ್ನು ನಿಷೇಧ ಮಾಡಬೇಕೆಂದು 1980 ರ ಸಮಿತಿ ಶಿಫಾರಸು ಮಾಡಿತು. ಆದರೆ 1982 ರ ಸಮಿತಿ ಶಿಫಾರಸನ್ನು ತಳ್ಳಿಹಾಕಿತು.

# 8. ಅಪಾಯಕಾರಿ ಔಷಧಗಳು

ಇನ್ನೂ ಕೆಲವು ಔಷಧಗಳಿವೆ. ಇವುಗಳ ಅಪಾಯಕಾರಿ ಗುಣಗಳ ಬಗ್ಗೆ ಎರಡು ಮಾತಿಲ್ಲ. ಹಾಗಿದ್ದೂ ಇವು ಮಾರುಕಟ್ಟೆಯಲ್ಲಿ ಇಂದು ಧಾರಾಳವಾಗಿ ಸಿಗುತ್ತಿವೆ. ನಿಷೇಧಾಜ್ಞೆಯಿಂದ ಇವು ತಪ್ಪಿಸಿಕೊಳ್ಳುತ್ತಲೇ ಇವೆ. ಇವುಗಳನ್ನು ನಿಷೇಧಿಸುವ ಒಂದೆರಡು ಪ್ರಯತ್ನಗಳು ನಡೆದಿದ್ದೂ ಯಾವುದೂ ಏನೇನೂ ಪ್ರಯೋಜನವಾಗಿಲ್ಲ.

ಈ ಔಷಧಗಳಲ್ಲಿ ಮುಖ್ಯವಾದವುಗಳು

1. ಅನಾಲ್ಜಿನ್ –Analgin
2. ಫಿನೈಲ್ ಬ್ಯುಟಸೋನ್–Phenylbutazone
3. ಹೈಡ್ರಾಕ್ಸೀಕ್ವಿನಲೀನ್–Hydroxey quinaline
4. ಅನಾಬೊಲಿಕ್ ಸ್ಟಿರಾಯಿಡ್ –Anabolic Steroids

1. ಅನಾಲ್ಜಿನ್—Analgin

ಈ ಗುಂಪಿನ ಔಷಧವನ್ನು ಉರಿ, ನೋವು ಮತ್ತು ಜ್ವರಗಳಿಗೆ ಬಳಸುತ್ತಾರೆ. ಆದರೆ ಅನಾಲ್ಜಿನ್ ಅತೀ ಅಪಾಯಕಾರಿ ಔಷಧ. ಇದನ್ನು ಬಳಸಿದರೆ ಎಗ್ರಾನ್ಯುಲೋ ಸೈಟೋಸಿಸ್ Agranulocytosis ಎಂಬ ಒಂದು ಅಪಾಯಕಾರಿ ಸ್ಥಿತಿ ಉಂಟಾಗಬಹುದು. ಎಗ್ರಾನ್ಯುಲೋ ಸೈಟೋಸಿಸ್ ಎಂದರೆ ದೇಹದಲ್ಲಿನ ಬಿಳಿರಕ್ತಕಣಗಳ ಉತ್ಪಾದನೆಯೇ ನಿಂತುಹೋಗುವುದು. ಬಿಳಿರಕ್ತಕಣಗಳು ಇಲ್ಲವೆಂದರೆ ದೇಹ ಸೈನಿಕರೇ ಇಲ್ಲದ ದೇಶದಂತಾಗುತ್ತದೆ. ಯಾವ ರೋಗದಾಳಿ ಮಾಡಿದರೂ ತಡೆದುಕೊಳ್ಳುವ ಶಕ್ತಿಯೇ ಇರುವುದಿಲ್ಲ. ಫಲವಾಗಿ ತೀರ ಸಾಮಾನ್ಯವಾದ ಸೋಂಕುರೋಗ ತಗುಲಿದರೂ ರೋಗಿ ಸಾವೀಗೀಡಾಗ-ಬಹುದು.



ಅನಾಲ್ಜಿನ್ ಮಿಶ್ರಮಾಡಿದ ಸಂಯುಕ್ತಗಳನ್ನು ಬಳಸಬಾರದು ಎಂದು 1980 ರ ಔಷಧ ಸಲಹಾಸಮಿತಿ ಶಿಫಾರಸು ಮಾಡಿದ್ದನ್ನು ಸರಕಾರ ಅಲಕ್ಷಿಸಿ ಬಿಟ್ಟಿತು. ಆದರೆ ಈ ಔಷಧವನ್ನು ಅತೀ ಅವಶ್ಯವಿದ್ದಾಗ ಮಾತ್ರ ಬಳಸಬೇಕು. ಅತಿಯಾದ ಬಳಕೆ ಸಲ್ಲದು ಎಂದು ಸರಕಾರ ಆಜ್ಞೆ ಮಾಡಿದೆ. ಅಂದರೆ ಇದು ನಿಯಂತ್ರಣಕ್ಕೊಳಪಟ್ಟ ಗುಂಪಿನಲ್ಲಿರುವ (H ಗುಂಪಿನ) ಔಷಧ.

ಅನಾಲ್ಜಿನ್‌ನ್ನು ಭಾರತದ ಹಳ್ಳಿಗಳಲ್ಲಿ ಎಷ್ಟು ಉಪಯೋಗಿಸುತ್ತಾರೆ ಎಂಬ ಬಗ್ಗೆ ಬ್ರಿಟನ್ನಿನ ವೈದ್ಯರೊಬ್ಬರು 4 ತಿಂಗಳ ಕಾಲ ಅಭ್ಯಾಸ ಮಾಡಿ ಬ್ರಿಟನ್ನಿನ ಪ್ರಸಿದ್ಧ ವೈದ್ಯಕೀಯ ಪತ್ರಿಕೆಯಾದ 'ದಿ ಲ್ಯಾನ್ಸೆಟ್' ನಲ್ಲಿ ಒಂದು ಲೇಖನ ಬರೆದರು. ಈ ಲೇಖನದ ಪ್ರಕಾರ ಭಾರತದ ಹಳ್ಳಿಗಳಲ್ಲಿ ಅನಾಲ್ಜಿನ್ ಗುಂಪಿನ ಔಷಧಗಳ ಉಪಯೋಗ ಅತಿ ಹೆಚ್ಚು, ವೈದ್ಯರ ಚೀಟಿ ಇಲ್ಲದೆಯೂ, ಪಾನ್‌ಬೀಡಾ ಅಂಗಡಿಗಳಲ್ಲಿ ಕೂಡ ದೊರೆಯುತ್ತದೆ.ಇದೇ 'ದಿ ಲ್ಯಾನ್ಸೆಟ್' ಪತ್ರಿಕೆಯಲ್ಲಿ ಅನಾಲ್ಜಿನ್ ಎಷ್ಟು ಅಪಾಯಕಾರಿ ಔಷಧ ಅದರ ಬಳಕೆ ಅದೆಷ್ಟು ಸೀಮಿತವಾಗಿರಬೇಕು ಎಂದು ಇನ್ನೊಂದು ಲೇಖನ ಮತ್ತೊಮ್ಮೆ ಪ್ರಕಟವಾಯಿತು.

ಅನಾಲ್ಜಿನ್ ಸಂಯುಕ್ತಗಳನ್ನು ಅತಿಹೆಚ್ಚು ತಯಾರಿಸುತ್ತಿರುವ ಪಶ್ಚಿಮ ಜರ್ಮನಿಯ ಹೆಕ್ಸ್ ಎಂಬ ಕಂಪನಿ ಈ ಸಂಯುಕ್ತಗಳಿಂದಾಗುವ ಅಪಾಯದ ಬಗ್ಗೆ ಒಂದು ಸ್ವತಂತ್ರ ಅಧ್ಯಯನ ಮಾಡಿದರು. ಆ ಅಧ್ಯಯನದ ಪ್ರಕಾರ ಒಂದು ಲಕ್ಷಮಂದಿ ಅನಾಲ್ಜಿನ್ ನುಂಗಿದರೆ ಒಬ್ಬರಿಗೆ ಅಪಾಯ ಆಗಬಹುದು. ಆದರೆ ಒಂದು ಲಕ್ಷಕ್ಕೆ ಒಬ್ಬರಿಗೆ ಮಾತ್ರವೇ ಅಪಾಯ ಆಗುತ್ತದೆ. ಎಂದಿಟ್ಟುಕೊಂಡರೂ ಅನಾಲ್ಜಿನ್‌ನ ತಯಾರಿಕೆ ಮತ್ತು ಉಪಯೋಗದ ಗಾತ್ರವನ್ನು ನೋಡಿದರೆ ರೋಗಿಗಳ ಸಂಖ್ಯೆ ಸಾಕಷ್ಟಾಗುತ್ತದೆ. 'ಹೆಕ್ಸ್' ಕಂಪನಿ ಮಾತ್ರವೇ ಅನಾಲ್ಜಿನ್ ಸಯುಕ್ತಗಳನ್ನು ಒಂದು ವರ್ಷಕ್ಕೆ ಒಂದು ಕೋಟಿ ಕಿಲೋಗ್ರಾಂನಷ್ಟು ಉತ್ಪಾದಿಸುತ್ತದೆ. ಇದಲ್ಲದೇ ನಮ್ಮ ದೇಶದಲ್ಲೇ ಇನ್ನೂ ಸುಮಾರು ಒಂದು ನೂರು ಕಂಪನಿಗಳು ಅನಾಲ್ಜಿನ್ ಮಾತ್ರೆಗಳನ್ನು ತಯಾರು ಮಾಡುತ್ತವೆ.

'ಬೋಸ್ಟನ್‌ಸ್ಟಡಿ' ಎಂದು ಪ್ರಸಿದ್ಧಿ ಪಡೆದ ಹೆಕ್ಸ್ ಕಂಪನಿಯ ಅಧ್ಯಯನ ಇನ್ನೂ ಪ್ರಕಟಗೊಳ್ಳುವ ಮೊದಲೇ ಆ ಕಂಪನಿ ಅಧ್ಯಯನದ ಕೆಲವು ಹೇಳಿಕೆಗಳನ್ನು ತನಗೆ ಬೇಕಾದಂತೆ ಬದಲಿಸಿಕೊಂಡು 'ಅನಾಲ್ಜಿನ್ ನಿರಪಾಯಕಾರಿ' ಎಂದು ಪ್ರಚಾರ ಮಾಡಲು ಶುರುಮಾಡಿಬಿಟ್ಟಿತು. ಈ ಔಷಧಕ್ಕಿಂತ ಪ್ಯಾರಾಸಿಟಮಲ್ (Paracetamol) ಆಸ್ಪಿರಿನ್ (Aspirin) ಗಳೇ ಹೆಚ್ಚು ಅಪಾಯಕಾರಿ ಎಂದು ಸಾರತೊಡಗಿತು.

ಪ್ಯಾರಾಸಿಟಮಾಲ್, ಆಸ್ಪಿರಿನ್‌ಗಳಿಂದಲೂ ಅಪಾಯವಿದೆ ನಿಜ. ಆದರೆ ಅವನ್ನು ಅತಿಯಾಗಿ ಉಪಯೋಗಿಸಿದಾಗ ಮಾತ್ರ. ಅನಾಲ್ಜಿನ್‌ದ್ದು ಹಾಗಲ್ಲ. ಅದನ್ನು ಎಷ್ಟೇ ಕಡಿಮೆ ತೆಗೆದುಕೊಂಡರೂ ಅಪಾಯ ಇದ್ದೇ ಇದೆ. ಮೊದಲನೇ ಡೋಸ್‌ನಲ್ಲಿ ಏನೂ ಆಗದಿರಬಹುದು. ಆದರೆ ನಾಲ್ಕನೇ ಡೋಸ್ ತೆಗೆದು-

ಕೊಳ್ಳುತ್ತಲೇ ಎಗ್ರಾನ್ಯುಲೋಸೈಟೋಸಿಸ್ ಆಗಬಹುದು. ಅನಾಲ್ಜಿನ್‌ನಿಂದಾಗುವ ಅಪಾಯ ಇದೊಂದೇ ಅಲ್ಲ. ಧಿಡೀರನೇ ರಕ್ತ ಪ್ರವಾಹದ ಚಲನೆ ನಿಂತು ರೋಗಿ ಸಾಯಬಹುದು. ಈ ಬಗ್ಗೆ ಬೂಸ್ಸನ್ ಸ್ಲಿಡಿ ಏನೂ ಹೇಳುವುದೇ ಇಲ್ಲ.

ಅನಾಲ್ಜಿನ್ ಗುಂಪಿನ ಔಷಧಗಳನ್ನು ಆದಷ್ಟು ಕಡಿಮೆ ಉಪಯೋಗಿಸಿದರೆ ಕ್ಷೇಮ ಎಂದು ನಮ್ಮ ದೇಶದ ವೈದ್ಯವಿಜ್ಞಾನಿಗಳು ಹೇಳುತ್ತಾರೆ. ಈ ಔಷಧ ಪ್ಯಾರಾಸಿಟಮಾಲ್, ಆಸ್ಪಿರಿನ್‌ಗಳಿಗಿಂತ ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲದಿರುವಾಗ, ಆ ನೋವು ನಿವಾರಕಗಳೂ ಕೆಲಸ ಮಾಡದ ಸಂದರ್ಭಗಳಲ್ಲಿ ಮಾತ್ರ ಇದನ್ನು ಉಪಯೋಗಿಸಬೇಕು ಎನ್ನುತ್ತಾರಿವರು.

ಈ ಉಪದೇಶವನ್ನು ನಮ್ಮ ವೈದ್ಯರೇ ಒಪ್ಪುವುದಿಲ್ಲ. ನಾನು ದಿನಕ್ಕೆ 30 ಬಾರಿಯಾದರೂ ಈ ಔಷಧ ಬರೆದು ಕೊಡುತ್ತೇನೆಂದರೆ ಇದು ಖಂಡಿತಾ ಕ್ಷೇಮಕರ ಔಷಧವೇ ಆಗಿರಬೇಕು ಎನುತ್ತಾರೆ ಒಬ್ಬ ವೈದ್ಯ ಮಹಾಶಯ.

ಆತ ಹೇಳುವುದರಲ್ಲೂ ತಪ್ಪಿಲ್ಲ. ಮಾತ್ರ, ನುಂಗಿದ ಯಾರಲ್ಲೂ 'ಎಗ್ರಾನ್ಯುಲೋಸೈಟೋಸಿಸ್' ಎಂಬ ರೋಗ ಬರುವುದಿಲ್ಲ. ಹೆಚ್ಚೆಂದರೆ ರೋಗಿ ನ್ಯುಮೋನಿಯಾ ಆಗಿ ಚೇತರಿಸಿಕೊಳ್ಳಲಾರದೆ ಸಾಯಬಹುದು. ಆತನ ಸಾವು ನ್ಯುಮೋನಿಯಾದಿಂದ ಎಂದಷ್ಟೇ ಅನ್ನಿಸಿಕೊಳ್ಳುತ್ತದೆ. ನ್ಯುಮೋನಿಯಾದ ರೋಗಿ ಬಂದರೆ ಆತನಿಗೆ ಬಿಳಿಯ ರಕ್ತಕಣಗಳ ಕೊರತೆ ಆಗಿದೆ ಎಂದು ಯಾರು ಊಹಿಸುತ್ತಾರೆ ? ಆತ ಅನಾಲ್ಜಿನ್ ನುಂಗಿದ್ದರ ಪರಿಣಾಮ ಇದು ಎಂಬ ಕಲ್ಪನೆ ವೈದ್ಯರಿಗೆ ಬರಬಹುದೇ ?

ನಮ್ಮ ಹಳ್ಳಿಗಳಲ್ಲಿ – ಅಥವಾ ಪಟ್ಟಣಗಳಲ್ಲೇ ಆಗಲಿ ಒಂದು ರೋಗ ಬಂದರೆ ಅದು ಯಾವುದೇ ಔಷಧದ ದುಷ್ಪರಿಣಾಮದಿಂದ ಎಂದು ಯಾರಿಗೂ ಕಲ್ಪನೆ ಬರುವುದಿಲ್ಲ. ಈಗ ಮುಂದುವರೆದ ದೇಶಗಳಲ್ಲಾದರೆ ರೋಗಿ ನುಂಗಿರುವ ಪ್ರತಿ ಔಷಧವೂ ಆತನ ರೆಕಾರ್ಡಿನಲ್ಲಿ ನಮೂದಿತವಾಗಿರುತ್ತದೆ. ಅಂಥಲ್ಲಿ ಎಗ್ರಾನ್ಯುಲೋಸೈಟೋಸಿಸ್ ಆದರೂ ಕೂಡ ಕೂಡಲೇ ತಕ್ಕ ಚಿಕಿತ್ಸೆ ಸಿಕ್ಕು ಆತ ಬದುಕುಳಿಯುವ ಸಾಧ್ಯತೆ ಇದೆ. ಆದರೆ ಬಡರಾಷ್ಟ್ರಗಳಲ್ಲಿ, ಎಲ್ಲೋ ಮೂಲೆ ಕೊಂಪೆಗಳಲ್ಲಿ ವಾಸಿಸುತ್ತಿರುವವರಿಗೆ ಅಷ್ಟು ಬೇಗ ಚಿಕಿತ್ಸೆ ಎಲ್ಲಿಂದ ಸಿಗಬೇಕು. ಸಿಕ್ಕರೂ ಆತ ಬದುಕುಳಿಯುವ ಸಾಧ್ಯತೆ ತೀರಾ ಕಡಿಮೆ. ಆದಾಗ್ಯೂ ಅನಾಲ್ಜಿನ್‌ನಂಥ ಅಪಾಯಕಾರಿ ಔಷಧಗಳು ಬಂದು ಬೀಳುತ್ತಿರುವುದು ಇಂಥ ಬಡರಾಷ್ಟ್ರಗಳಿಗೇ. ಹಳ್ಳಿಹಳ್ಳಿಗಳ ಮೂಲೆ ಕೊಂಪೆಗಳಲ್ಲೂ, ಅಲ್ಲಿನ ಚಾದಂಗಡಿಗಳಲ್ಲೂ ಅನಾಲ್ಜಿನ್ ವೈದ್ಯರ ಚೀಟಿ ಇಲ್ಲದೆಯೂ ಬೇಕಾದಷ್ಟು ಸಿಗುತ್ತವೆ.

2. ಫಿನೈಲ್ ಬ್ಯುಟಜೋನ್ (Phenylbutazone)

ಈ ಗುಂಪಿನ ಔಷಧವನ್ನೂ ಉರಿ, ನೋವು, ಜ್ವರಗಳಿಗಾಗಿ ಬಳಸುತ್ತಾರೆ. ಈ ಔಷಧ ಸಹ ಎಗ್ರಾನ್ಯುಲೋಸೈಟಿಸಿಸ್ ಸ್ಥಿತಿಯನ್ನುಂಟು ಮಾಡುತ್ತದೆ.

ಮಾತ್ರವಲ್ಲ ಹೊಟ್ಟೆಯಲ್ಲಿ ಹುಣ್ಣು ಆಗುತ್ತದೆ, ಒತ್ತಕೋಶ ಮೂತ್ರಕೋಶಗಳಲ್ಲಿ ರಕ್ತಸ್ರಾವವನ್ನುಂಟು ಮಾಡುತ್ತವೆ. ಇದೇ ಗುಂಪಿನ ಆಕ್ಸಿಫಿನ್‌ಬ್ಯುಟಿರೆಝೋನ್ (Oxyphenbutazone) ವಿಶ್ವದಾದ್ಯಂತ ಸಾವಿರಾರು ಸಾವಿಗೆ ಕಾರಣವಾಗಿ ಅಂತರರಾಷ್ಟ್ರೀಯ ಕುಖ್ಯಾತಿ ಗಳಿಸಿತ್ತು. ಅದನ್ನು ಮೊಟ್ಟಮೊದಲಿಗೆ ಉತ್ಪಾದಿಸಿದ 'ಸೀಬಾಗೀಗಿ' ಕಂಪನಿ ಜಗತ್ತಿನ ಮಾರುಕಟ್ಟೆಯಿಂದಲೇ ಔಷಧವನ್ನು ಹಿಂತೆಗೆದುಕೊಂಡಿದೆ. ಫಿನೈಲ್‌ಬ್ಯುಟಾಝೋನ್‌ನ್ನು ಒಂದು ಜಾತಿಯ ಬೆನ್ನುನೋವು ಮತ್ತು ಸಂದು ನೋವುಗಳಿಗೆ ಮಾತ್ರ, ಅದೂ ಬೇರೆ ಔಷಧ ಕೆಲಸ ಮಾಡದಿದ್ದಾಗ ಮಾತ್ರ ಬಳಸಬೇಕೆಂದು ನಮ್ಮ ದೇಶದ ಔಷಧ ನಿಯಂತ್ರ-ಣಾಧಿಕಾರ ಶಿಫಾರಸು ಮಾಡಿದೆ.

ಆದಾಗ್ಯೂ ಈ ಗುಂಪಿನ ಔಷಧಗಳು ಇಂದು ಪೇಟೆಯಲ್ಲಿ ಬೇಕಾದಷ್ಟು ಬ್ರ್ಯಾಂಡ್‌ಗಳಲ್ಲಿ ದೊರೆಯುತ್ತಿವೆ.

3. ಹೈಡ್ರಾಕ್ಸೀಕ್ವಿನಲೀನ್ / ಕ್ಲಿಯೋಕ್ವಿನಾಲ್ (Hydroxy quinoline/Clioquinol)

ಈ ಗುಂಪಿನ ಔಷಧಗಳನ್ನು ಬೇಧಿ ಮತ್ತು ಅಮೀಬಾ ಸೂಕ್ಷ್ಮಜೀವಿಗಳಿಂದ ಆಗುವ ಬೇಧಿಗಾಗಿ ಉಪಯೋಗಿಸುತ್ತಾರೆ. 'ಖಾಕಿ ಮಾತ್ರೆ' ಎಂದೇ ಹೆಸರಾಗಿರುವ ಈ ಔಷಧ ನಮ್ಮ ದೇಶದಲ್ಲಿ ಅಪಾರವಾಗಿ ಉಪಯೋಗವಾಗುತ್ತಿದೆ. ಆದರೆ ಇದರಿಂದ ಆಗುವ ಅಪಾಯ ಬಹಳ.



ಜಪಾನಿನಲ್ಲಿ ಈ ಔಷಧದಿಂದ 11,000 ಮಂದಿ ಅಂಗವಿಕಲರಾಗಿದ್ದನ್ನು ಡಾ॥ ಓಲಿ ಹ್ಯಾನ್‌ಸನ್ ಎಂಬ ವೈದ್ಯರು ಬೆಳಕಿಗೆ ತಂದರು. ಕ್ಲಿಯೋಕ್ವಿನಾಲ್‌ನ್ನು ಸೇವಿಸುವುದರಿಂದ ನರಮಂಡಲವೇ ಹಾಳಾಗುವ ಸಾಧ್ಯತೆ ಇದೆ. ಪರಿಣಾಮವಾಗಿ ಪಾರ್ಶ್ವವಾಯು, ಕುರುಡುತನ, ಮೂತ್ರಕೋಶದ ಮೇಲೆ ಹಿಡಿತ ತಪ್ಪುವುದು, ಅಂಗವಿಕಲತೆಗಳು ಉಂಟಾಗುತ್ತವೆ. ಡಾ॥ ಓಲಿ ಹ್ಯಾನ್‌ಸನ್ ಅವರು ಜಪಾನಿನ ಈ

11,000 ಅಂಗವಿಕಲರ ಪರವಾಗಿ ಜಪಾನಿನ ಸುಪ್ರೀಂ ಕೋರ್ಟಿನಲ್ಲಿ ಆ ಔಷಧ ತಯಾರಿಸಿ ಮಾರಿದ ಸೀಬಾಗೀಗಿ ಕಂಪನಿಯ ವಿರುದ್ಧ ಖಟ್ಲೆ ಹಾಕಿದರು. ಸೀಬಾಗೀಗಿ ಕಂಪನಿ ಸಾರ್ವಜನಿಕರ ಕ್ಷಮೆ ಕೇಳಿತು. ಅಂಗವಿಕಲರಾದವರಿಗೆಲ್ಲ ಪರಿಹಾರ ನೀಡಿತು. ಜಗತ್ತಿನ ಮಾರುಕಟ್ಟೆಯಿಂದಲೇ ಆ ಔಷಧವನ್ನು ಹಿಂತೆಗೆದುಕೊಂಡಿತು.

ಕ್ಲಿಯೋಕ್ವಿನಾಲ್‌ನಿಂದ ಅಂಗವಿಕಲತೆ ಉಂಟಾಗಿದ್ದು ಇನ್ನೂ ಬೇರೆ ಬೇರೆ ದೇಶಗಳಿಂದ ವರದಿಯಾಗಿತ್ತು. ಆ ದೇಶಗಳಲ್ಲೆಲ್ಲ ಕ್ಲಿಯೋಕ್ವಿನಾಲ್‌ನ್ನು ನಿಷೇಧ ಮಾಡಿದರು. ನಮ್ಮ ದೇಶದಲ್ಲೂ ನಿಷೇಧ 1982ರಲ್ಲಿ ಮಾಡಲಾಯಿತಾದರೂ ಮರುವರ್ಷವೇ ನಿಷೇಧಾಜ್ಞೆಯನ್ನು ಹಿಂತೆಗೆದುಕೊಳ್ಳಲಾಯಿತು. ಹೀಗಾಗಿ ಇಂದಿಗೂ ಬೇಧಿಗಾಗಿ ಔಷಧ ತೆಗೆದುಕೊಳ್ಳುವವರು ಅಂಗವಿಕಲತೆಯ ಭಯದ ನೆರಳಿನಲ್ಲೇ ಔಷಧ ಸೇವಿಸಬೇಕು.

ಬರಿಯ ಬೇಧಿಗೆ ಉಪ್ಪು ಸಕ್ಕರೆ ಪಾನಕವು ಅತ್ಯುತ್ತಮ ಔಷಧ. ಅಮೀಬಾದಿಂದ ಬೇಧಿಯಾಗುತ್ತಿದ್ದರೆ ಈ ಪಾನಕದೊಂದಿಗೆ ಮೆಟ್ರನಿಡಝೋಲ್ (Metranidazole) ಪರಿಣಾಮಕಾರಿ ಔಷಧ.

4. ಅನಾಬೋಲಿಕ್ ಸ್ಟಿರಾಯಿಡ್‌ಗಳು (Anabolic Steroids)
(ಅಥವಾ ಸಂಸ್ಕರಿಸಿದ ಗಂಡು ಹಾರ್ಮೋನುಗಳು)

ಈ ಗುಂಪಿನ ಔಷಧಗಳ ಉಪಯೋಗ ಅತೀ ಕಡಿಮೆ. ಆದರೆ ಅಪಾಯ ಮಾತ್ರ ಬಹಳ ಹೆಚ್ಚು. ಎಪ್ಲಾಸ್ಟಿಕ್ ಅನೀಮಿಯಾ (Aplastic anaemia) ದಂಥ ಅಪರೂಪದ ಕಾಯಿಲೆಯಲ್ಲಿ ಕೊಡುವ ಔಷಧದೊಂದಿಗೆ ಇದನ್ನೂ ಕೊಡುತ್ತಾರೆ. ಆದರೆ ಈ ಔಷಧ ಟಾನಿಕ್ ಎಂಬ ಹೆಸರಿನಲ್ಲಿ ಅತಿಯಾಗಿ ದುರುಪಯೋಗವಾಗುತ್ತಿದೆ. ಪೌಷ್ಟಿಕಾಂಶದ ಕೊರತೆಯಿಂದ ಬಳಲುವ ಮಕ್ಕಳಿಗೆ ಬೆಳವಣಿಗೆಯ ಟಾನಿಕ್ ಎಂದು ಟಾನಿಕ್‌ದಂತೆ ಉಪಯೋಗಿಸಿದರೆ ಹಾನಿಯುಂಟು ಮಾಡಬಲ್ಲದು. ಮಕ್ಕಳಲ್ಲಿ ಬೆಳೆಯುವ ಎಲುಬುಗಳ ತುದಿಯ ಬೆಳವಣಿಗೆಯನ್ನೇ ನಿಲ್ಲಿಸಿ ಅವರ ಬೆಳವಣಿಗೆಯನ್ನೂ ಕುಂಠಿತಗೊಳಿಸುತ್ತದೆ. ಅಷ್ಟೇ ಅಲ್ಲ ಅವರ ಲೈಂಗಿಕ ಅಂಗಗಳ ಬೆಳವಣಿಗೆಗೂ ಹಾನಿಯುಂಟು ಮಾಡಬಹುದು. ಹೆಣ್ಣು ಮಕ್ಕಳಿಗೆ ಮೀಸೆ, ದಾಡಿ ಬಂದು, ಧ್ವನಿ ಗಡುಸಾಗಿಬಿಡುತ್ತದೆ. ಇದನ್ನು ಸರಿಪಡಿಸುವುದು ಅಸಾಧ್ಯ. ಹೀಗೆ ಚನ್ನಾಗಿ ಬೆಳೆಯಲಿ ಎಂದು ಕೊಟ್ಟ ಟಾನಿಕ್ ಲಿಂಗದ ಬದಲಾವಣೆಯನ್ನೇ ಉಂಟುಮಾಡಬಹುದು.

ಈ ನಾಲ್ಕೂ ಔಷಧಗಳ ಅಪಾಯಕಾರೀ ಗುಣಗಳನ್ನು ಸರಕಾರವೇ ಒಪ್ಪುತ್ತದೆ. ಆದರೆ ಇವನ್ನು ನಿಷೇಧ ಮಾಡಲು ಸರಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅಥವಾ ಆಸಕ್ತಿಯೂ ಇಲ್ಲದಿರಬಹುದು. ಕಾರಣ ನಮಗಿರುವ ದಾರಿಯೊಂದೇ, ಅದೆಂದರೆ ನಾವೇ ಈ ಔಷಧಗಳನ್ನು ನಿಷೇಧಿಸುವುದು.

# 8. ಅನುಪಯುಕ್ತ ಔಷಧಗಳು

ನಮ್ಮ ಔಷಧ ಮಾರುಕಟ್ಟೆಯಲ್ಲಿ ನಿಷೇಧಿಸಬೇಕಾಗಿರುವ ಅಪಾಯಕಾರೀ ಔಷಧಗಳು ತುಂಬಿರುವಂತೆಯೇ, ನಿಷೇಧಿಸಬೇಕಾಗಿರುವ ಅನುಪಯುಕ್ತ ಔಷಧಗಳೂ ತುಂಬಿವೆ. ಇವುಗಳ ಸಂಖ್ಯೆ ಹೇರಳ. ಇವುಗಳಿಂದ ಯಾವ ರೋಗವೂ ವಾಸಿಯಾಗುದಿಲ್ಲ. ಯಾವ ತೊಂದರೆಯೂ ನಿವಾರಣೆಯಾಗುವುದಿಲ್ಲ. ಇವುಗಳ ಅವಶ್ಯಕತೆಯೇ ಯಾರಿಗೂ ಇಲ್ಲ. ಆದರೂ ಇವು ಮಾರುಕಟ್ಟೆಯಲ್ಲಿವೆ. ಅವಶ್ಯಕತೆ ನಮಗಿದೆ ಎಂದು ನಂಬಿಸುವಂತೆ ಜಾಹೀರಾತು ಮಾಡಲಾಗುತ್ತಿದೆ ವೈದ್ಯರು ಯಾವುದೇ ರೋಗಕ್ಕೆ ಔಷಧದ ಜೊತೆಗೆ ಇವೂ ಒಂದೆರಡನ್ನು ಪಟ್ಟಿ-ಯಲ್ಲಿ ಸೇರಿಸಿ ಕೊಡುತ್ತಾರೆ. ಜನರು ಹೋಗಿ ಖರೀದಿಸುತ್ತಾರೆ.

ಇದಕ್ಕೆ ಅತ್ಯುತ್ತಮವಾದ ಒಂದು ಉದಾಹರಣೆಗಳಲ್ಲಿ ಒಂದೆಂದರೆ 'ಗ್ರೈಪ್‌ವಾಟರ್'. ಚಿಕ್ಕ ಮಕ್ಕಳಿಗೆ ಹಲ್ಲು ಮೂಡುವಾಗ ಜ್ವರ ಬರುವುದುಂಟು ಹಲ್ಲಿನ ಒಸಡಿನಲ್ಲಿ 'ಗವಗವ' ಎನ್ನುತ್ತಿದ್ದು, ಮಗು ಕೈಗೆ ಸಿಕ್ಕಿದ್ದನ್ನು ಬಾಯಿಗೆ ಹಾಕಿ ಜಗಿಯುತ್ತದೆ. ಕಸ, ಕಡ್ಡಿ ಚಪ್ಪಲಿಗಳನ್ನೆಲ್ಲ ಬಿಡದೆ ಜಗಿದಾಗ ಅವುಗಳಲ್ಲಿರುವ ಸೂಕ್ಷ್ಮ ಕ್ರಿಮಿಗಳಿಂದಾಗಿ ವಾಂತಿ ಬೇಧಿ ಆಗುವುದುಂಟು. ಒಟ್ಟಾರೆ ಮಕ್ಕಳು ಈ ಸಮಯದಲ್ಲಿ ಸಪ್ಪಗಿರುತ್ತವೆ, ಅಳುತ್ತಿರುತ್ತವೆ. ಕಿರಿಕಿರಿ ಮಾಡುತ್ತಿರುತ್ತವೆ.

ಇವೆಲ್ಲ ಅತಿ ಯಾವುದೇ ಮಗುವಿಗೆ ಹಲ್ಲು ಬರುವಾಗ ಕಾಣುವ ಅತಿ ಸಾಮಾನ್ಯ ಲಕ್ಷಣಗಳು. ಆದರೆ ಔಷಧ ಕಂಪನಿಗಳು ಇದೇ ದೊಡ್ಡ ರೋಗವೇನೋ ಎಂದು ಜಾಹೀರಾತು ಮಾಡುತ್ತವೆ. 'ತಾಯಂದಿರೇ ಈ ಸಮಯದಲ್ಲಿ ಮಗುವಿಗೆ ಗ್ರೈಪ್ ವಾಟರ್ ಕೊಡಿ ' ಎಂದು ರೇಡಿಯೋದಲ್ಲಿ, ಟಿವಿಯಲ್ಲಿ, ಎಲ್ಲಾ ಪತ್ರಿಕೆಗಳಲ್ಲಿ ಸಾರುತ್ತಾರೆ.

ಈ ಗ್ರೈಪ್‌ವಾಟರ್‌ಗೆ ಮಹಿಳೆಯರು ಸಾಕಷ್ಟು ಮಂದಿ ಮಾರುಹೋಗಿದ್ದಾರೆ. ಹಲ್ಲು ಬರುತ್ತಿರುವ ಮಗುವಿನ ತೊಂದರೆಯನ್ನು ನಾಲ್ಕು ಮಂದಿಯಲ್ಲಿ ಹೇಳಿದರೆ ಇಬ್ಬರಾದರೂ 'ಗ್ರೈಪ್‌ವಾಟರ್ ಹಾಕಿ ನೋಡಿ' ಎಂದು ಉಪದೇಶಿಸುತ್ತಾರೆ. ಹಾಗಾದರೆ ಇದರಲ್ಲಿ ಅಂಥ ಮಹತ್ವವಾದುದು ಏನಿದೆ?

ಒಂದಿಷ್ಟು ಸಕ್ಕರೆ (ಗ್ಲುಕೋಸ್) ನೀರು, ಜೊತೆಗೆ ಪೇಪರ್‌ಮೆಂಟ ಇಷ್ಟೇ. ಯಾವ ರೀತಿಯಲ್ಲೂ ಅವಶ್ಯವಿರದ ಇಂಥ ಒಂದು ಪಾನಕವನ್ನು ಔಷಧ ಕಂಪನಿಗಳು ತಯಾರಿಸಿ ಮಾರುತ್ತವೆ. ಜನರು ಕೊಳ್ಳುತ್ತಾರೆ. ಮಗುವಿಗೆ ತಂದು ಕುಡಿಸುತ್ತಾರೆ. ನಂಬುತ್ತಾರೆ, ಬೇರೆಯವರನ್ನೂ ನಂಬಿಸುತ್ತಾರೆ.

ಅನುಪಯುಕ್ತ ಸಂಯುಕ್ತಗಳಿಗೆ ಇನ್ನೊಂದು ಉದಾಹರಣೆ ಟಾನಿಕ್‌ಗಳು. ಟಾನಿಕ್ ಎಂಬ ಯಾವ ಔಷಧವನ್ನೂ ವೈದ್ಯಕೀಯ ಪುಸ್ತಕಗಳು ಬರೆದಿಲ್ಲ. ವೈದ್ಯಕೀಯ ವಿದ್ಯಾರ್ಥಿಗಳು ಇವನ್ನು ಕಲಿಯುವುದೂ ಇಲ್ಲ. ಆದರೆ ಇಂದು ಟಾನಿಕ್ ಬರೆಯದ ವೈದ್ಯರಿದ್ದಾರೆಯ ? ರೋಗದಿಂದ ಅದೆ ವೈದ್ಯರಿಗೆ ಒಂದು

ಟಾನಿಕ್, ಗರ್ಭಿಣಿಗೆ ಒಂದು ಟಾನಿಕ್, ಬಾಣಂತಿಗೆ ಇನ್ನೊಂದು ಟಾನಿಕ್.

ಟಾನಿಕ್‌ಗಳ ಬೆಲೆಗಳೂ ವಿಪರೀತ. ಕಡಿಮೆಯೆಂದರೂ 20-25 ರೂ.ಗಳನ್ನು ಒಂದು ಬಾಟ್ಲಿಗೆ ಕೊಡಬೇಕು. ಆ ಬಾಟಲಿಯ ಅಂದ ಚೆಂದ, ಅದರೊಳಗಿನ ರಸದ ರುಚಿಗೆ ಜನ ಮರಳಾಗುತ್ತಾರೆ. ಮತ್ತೆ ಮತ್ತೆ ಖರೀದಿಸುತ್ತಾರೆ. ಆದರೆ ಈ ಟಾನಿಕ್‌ನಲ್ಲಿ ಇರುವುದು ಕೇವಲ ಕೆಲವು ವಿಟಮಿನ್‌ಗಳು, ಸ್ವಲ್ಪ - ಅದೂ ಬೇಕಾದ ಪ್ರಮಾಣದಲ್ಲಿ ಅಲ್ಲ - ಕಬ್ಬಿಣಾಂಶ, ಯಾವುದೇ ಔಷಧೀಯ ಗುಣವಿರದ ಟಾನಿಕ್ ಇಂದು ಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಶ್ರೀಮಂತ ಕಂಪನಿಗಳಿಗೆ ಮತ್ತೂ ಮತ್ತೂ ಹಣ ಮಾಡುವ ದಂಧೆಯಾಗಿ ಬಿಟ್ಟಿದೆ.

ಇನ್ನೊಂದು ರೀತಿಯ ಜಾಹೀರಾತನ್ನು ನೀವು ನೋಡಿರಬಹುದು. 'ಶಕ್ತಿದಾಯಕ ವಿಟಮಿನ್‌ಗಳನ್ನು ಸೇರಿಸಿದೆ' ಎಂದು. ವಿಟಮಿನ್‌ಗಳಲ್ಲಿ ಯಾವುದೂ ಶಕ್ತಿ ಕೊಡುವುದಿಲ್ಲ. ಇಂಥ ಪ್ರಾಥಮಿಕ ಜ್ಞಾನವನ್ನೇ ತಲೆಕೆಳಗು ಮಾಡಿ ಹೊಸದನ್ನು ತಲೆತುಂಬುತ್ತವೆ ಈ ಜಾಹೀರಾತುಗಳು. ವಿಟಮಿನ್‌ಗಳು ನಮಗೆ ಅತ್ಯವಶ್ಯಕವಾದರೂ ಅತಿ ಸ್ವಲ್ಪ ಸಾಕು. ನಿತ್ಯದ ಆಹಾರದಲ್ಲಿ ಅವು ನಮಗೆ ದೊರೆ-ಯುತ್ತವೆ. ಆಕಸ್ಮಾತ್ ಯಾವುದಾದರೂ ವಿಟಮಿನ್‌ದ ಕೊರತೆ ಆಯಿತೆಂದರೆ ಅದನ್ನು ಮಾತ್ರ ಸೇವಿಸಬೇಕು. ಉದಾಹರಣೆಗೆ ವಿಟಮಿನ್ ಎ ಯ ಕೊರತೆ ಯಾದರೆ ಕಣ್ಣಿಗೆ ಅಪಾಯ. ಆಗ ವಿಟಮಿನ್ ಎ ಮಾತ್ರೆಯನ್ನು ನುಂಗಬೇಕು. ಬದಲಿಗೆ ವಿಟಮಿನ್ $B_6$-$B_{12}$ ಗಳ ಮಿಶ್ರಣ ನುಂಗಿದರೆ ವಾಸಿಯಾದೀತೆ ? ಕೆಲವು ವಿಟಮಿನ್‌ಗಳಂತೂ ಬೇಕಾದ್ದಕ್ಕಿಂತ ಹೆಚ್ಚು ಸೇವಿಸಿದರೆ ಅಪಾಯಕಾರಿ ಕೂಡ. ಆದರೆ ಇವನ್ನೆಲ್ಲ ಔಷಧಗಳಲ್ಲಿ ಹಾಕಿ ತುರುಕಿ ನಮ್ಮ ಗಂಟಲಿಗಿಳಿಸುತ್ತಾರೆ.

ನಾವೂ ವೈದ್ಯರನ್ನು ಕೇಳಿ ವಿಟಮಿನ್ ಮಾತ್ರೆ-ಇಂಜೆಕ್ಷನ್‌ಗಳನ್ನು ಪಡೆ-ಯುವುದುಂಟು ಅಲ್ಲವೇ ?

ಈ ಎಲ್ಲ ಅನವಶ್ಯಕ ಸಂಯುಕ್ತಗಳಿಗೆ ಬದಲೀ ಸುರಕ್ಷಿತ ದಾರಿಯೆಂದರೆ ಉತ್ತಮ ಆಹಾರ ಸೇವನೆ, ಹಾಲು-ಸೊಪ್ಪು, ತರಕಾರಿ ಮೊಟ್ಟೆ ಹಣ್ಣುಗಳಿರುವ ಆಹಾರ ಸೇವಿಸುತ್ತಿದ್ದರೆ ನಮಗೆ ಯಾವ ವಿಟಮಿನ್‌ಗಳೂ ಬೇಕಿಲ್ಲ.

ಕೇವಲ ಹಣ ಮಾಡುವ ಉದ್ದೇಶದಿಂದ ಪೇಟೆಗೆ ಬರುತ್ತಿರುವ ಈ ಎಲ್ಲ ಅನುಪಯುಕ್ತ ಸಂಯುಕ್ತಗಳೂ ಮಾರುಕಟ್ಟೆಯಿಂದ ನಿಷೇಧವಾಗಲೇ ಬೇಕು.

ಹಾನಿಕಾರಕ ಮತ್ತು ಅನುಪಯುಕ್ತ ಔಷಧಗಳನ್ನು ಬಹಿಷ್ಕರಿಸಲು ಬಾಂಗ್ಲಾದೇಶವು ಒಂದು ಮಾರ್ಗಸೂಚಿಯನ್ನು ಹಾಕಿಕೊಂಡಿತು. ಈ ಮಾರ್ಗ-ಸೂಚಿಯನ್ನು ಅನುಸರಿಸಿ 1982 ರಲ್ಲಿ ಅತ್ಯವಶ್ಯಕ ಔಷಧಗಳನ್ನುಳಿಸಿ ಉಳಿದೆಲ್ಲ-ವನ್ನೂ ನಿಷೇದ ಮಾಡಿ ತೃತೀಯ ಜಗತ್ತಿನಲ್ಲೇ ಒಂದು ಉತ್ತಮ ಇತಿಹಾಸವನ್ನು ನಿರ್ಮಿಸಿತು. ಈಗ ಬಾಂಗ್ಲಾ ದೇಶದಲ್ಲಿ ಯಾವುದೇ ಅಪಾಯಕಾರೀ ಔಷಧವಿಲ್ಲ. ಟಾನಿಕ್‌ಗಳಲ್ಲಿ ಮಿಶ್ರ ಸಂಯುಕ್ತಗಳಿಲ್ಲ. (Combination drug)

ಬಾಂಗ್ಲಾ ಸರಕಾರ ಹಾಕಿಕೊಂಡ ಈ ಮಾರ್ಗಸೂಚಿ ನಮ್ಮ ದೇಶಕ್ಕೂ ದಾರಿದೀಪವಾಗಬಹುದಾಗಿದೆ. ಈ ಮಾರ್ಗಸೂಚಿಯ ಕೆಲವು ಮುಖ್ಯಾಂಶಗಳು ಇಲ್ಲಿವೆ.

1. ಯಾವುದೇ ಜೀವಿನಿರೋಧಕವನ್ನು ಇನ್ನೊಂದು ಜೀವಿನಿರೋಧಕದ ಜೊತೆಗಾಗಲೀ ಅಥವಾ ಕಾರ್ಟಿಕೋಸ್ಟಿರಾಯಿಡ್ ಜೊತೆಗಾಗಲೀ, ಮಿಶ್ರ ಮಾಡಕೂಡದು. ಮಕ್ಕಳಿಗೆ ಹಾನಿಕಾರಕ ಆಗಬಲ್ಲ ಜೀವಿನಿರೋಧಕಗಳನ್ನು ದ್ರವ ರೂಪದಲ್ಲಿ ತಯಾರಿಸಕೂಡದು.

2. ನೋವು ನಿವಾರಕಗಳನ್ನು ಇನ್ನಾವ ವಸ್ತುಗಳೊಂದಿಗೂ ಉದಾ : ಕಬ್ಬಿಣಾಂಶ, ವಿಟಮಿನ್ ಅಥವಾ ಆಲ್ಕೋಹಾಲ್‌ಗಳೊಂದಿಗೆ ಸೇರಿಸಬಾರದು. ಇಂಥ ಮಿಶ್ರಣದಿಂದ ಅಪಾಯ ಇದೆಯೇ ಹೊರತು ಉಪಯೋಗ ಹೆಚ್ಚುವುದಿಲ್ಲ.

3. ಅತ್ಯವಶ್ಯವಿದ್ದಾಗ ಮಾತ್ರ ಮಿಶ್ರ ಸಂಯುಕ್ತ ಬಳಸಬಹುದು. ಆ ಮಿಶ್ರ ಸಂಯುಕ್ತದ ಹೊರತಾಗಿ ಇನ್ನಾವುದೇ ಔಷಧ ಕೆಲಸ ಮಾಡುವುದಿಲ್ಲವೆಂದಾದಾಗ ಮತ್ತು ಆ ಮಿಶ್ರ ಸಂಯುಕ್ತಕ್ಕೂ ಬೇರೆ ಔಷಧಕ್ಕೂ ಬೆಲೆಯಲ್ಲಿ ವ್ಯತ್ಯಾಸ ಇಲ್ಲದಿದ್ದಾಗ ಮಾತ್ರ, ಅದನ್ನು ಬಳಸಬೇಕೇ ಹೊರತು ಇನ್ನಾವುದೇ ಸಂಧರ್ಭದಲ್ಲಿ ಮಿಶ್ರ ಸಂಯುಕ್ತದ ಬಳಕೆ ಕೂಡದು.

4. ಕೋಡೀನ್ ಚಟವನ್ನುಂಟುಮಾಡಬಹುದಾದ್ದರಿಂದ ಅದನ್ನು ಇನ್ನಾವುದೇ ಔಷಧದೊಂದಿಗೆ ಮಿಶ್ರ ಮಾಡುವುದು ಸಲ್ಲದು.

5. ವಿಟಮಿನ್‌ಗಳು ಬಿ ಗುಂಪಿನವುಗಳ ಹೊರತಾಗಿ ಯಾವಾಗಲೂ ಪರಸ್ಪರ ಅಥವಾ ಇನ್ನಾವುದೇ ಔಷಧದೊಂದಿಗೆಮಿಶ್ರಣ ಆಗಿರಕೂಡದು. ವಿಟಮಿನ್‌ಗಳು ಕೇವಲ ಮಾತ್ರೆ, ಇಂಜೆಕ್ಷನ್ ಕ್ಯಾಪ್ಸೂಲ್‌ಗಳಲ್ಲಿ ಮಾತ್ರ ಇರಬಹುದು. ದ್ರವರೂಪದಲ್ಲಿದ್ದರೆ ಬೆಲೆ ಜಾಸ್ತಿಯಾಗುವುದಲ್ಲದೇ ಅದರ ದುರುಪಯೋಗವೂ ಆಗುತ್ತದೆ. ಆದರೆ ಚಿಕ್ಕ ಮಕ್ಕಳಿಗಾಗಿ ಮಾತ್ರ ಮಲ್ಟಿ ವಿಟಮಿನ್‌ಗಳನ್ನು ದ್ರವರೂಪದಲ್ಲಿ 15 ಮಿಲಿ ನಷ್ಟು ಮಾತ್ರ, ಡ್ರಾಪರ್ ಜೊತೆಗೆ ತಯಾರಿಸಿ ಕೊಡಬಹುದು.

6. ಕೆಮ್ಮಿನ ರಸ ಅಥವಾ ಗ್ರೈಪ್‌ವಾಟರ್‌ನಂಥ ಯಾವುದೇ ಔಷಧೀಯ ಗುಣವಿರದ ಸಂಯುಕ್ತಗಳ ಉತ್ಪಾದನೆ ಮತ್ತು ಆಮದು ಸಲ್ಲದು.

7. ಟಾನಿಕ್, ಎಂಜೈಮ್‌ಗಳ (ಪ್ಯಾಂಕ್ರಿಯಾಟಿನ್ ಮತ್ತು ಲ್ಯಾಕ್ಟೇಸ್ ಹೊರತಾಗಿ) ತಯಾರಿಕೆ ಕೂಡದು.

8. ಒಂದಕ್ಕೊಂದು ಅತಿ ಸ್ವಲ್ಪ ವ್ಯತ್ಯಾಸವಿರುವ ಒಂದೇ ಗುಂಪಿನ ಎರಡು ಸಂಯುಕ್ತಗಳು – ಅವುಗಳ ಕೆಲಸ ಒಂದೇ ರೀತಿಯದ್ದಾಗಿದ್ದರೆ ಅವು ವೈದ್ಯರನ್ನೂ ರೋಗಿಯನ್ನೂ ಗೊಂದಲಕ್ಕೀಡು ಮಾಡುವುದರಿಂದ ಅಂಥವುಗಳ ತಯಾರಿಕೆ

ಆಗಬಾರದು.

9. ಸರಿಯಾದ ಉಪಯೋಗ ಗೊತ್ತಿಲ್ಲದ ಅಥವಾ ಗೌಣ ಪ್ರಭಾವವುಳ್ಳ ಕೆಲವೊಮ್ಮೆ ಹಾನಿಕಾರಕ ಆಗಬಹುದಾದ ಔಷಧಗಳ ಉತ್ಪಾದನೆ ಆಗ ಕೂಡದು.

10. ತೀರಾ ಇತ್ತೀಚಿನ ಬ್ರಿಟಿಷ್ ವೈದ್ಯಕೀಯ ಪುಸ್ತಕದಲ್ಲೂ ಪ್ರಸ್ತಾಪವಾಗಿರದ ಯಾವುದೇ ಸಂಯುಕ್ತವೂ ನಿಷೇಧಾರ್ಹ.

11. ಕೆಲವು ಔಷಧಗಳು ಹಾನಿಕಾರಕವಾಗಿದ್ದರೂ ಕೆಲವೊಂದು ರೋಗಗಳಿಗೆ ಅತ್ಯುಪಯುಕ್ತ. ಅಂಥ ಔಷಧಗಳ ಉತ್ಪಾದನೆ ಕಡಿಮೆ. ಇದ್ದು ವಿಶೇಷ ತಜ್ಞರಿಂದ ಶಿಫಾರಸು ಆದಾಗ ಮಾತ್ರ ಉಪಯೋಗ ಆಗುತ್ತಿರಬೇಕು.

12. ಒಂದು ಜಾತಿಯ ಔಷಧ ದೇಶದಲ್ಲಿ ತಯಾರಾಗುತ್ತಿದ್ದರೆ, ಅದನ್ನು ವಿದೇಶದಿಂದ ಆಮದು ಮಾಡಿಕೊಳ್ಳುವಂತಿಲ್ಲ. ಇನ್ನು ದೇಶದಲ್ಲಿ ತಯಾರಾಗುತ್ತಿರುವುದು ಅವಶ್ಯಕತೆಗಿಂತ ತೀರಾ ಕಡಿಮೆ ಎಂದಾದಾಗ ಮಾತ್ರ ವಿದೇಶದಿಂದ ತರಿಸಬಹುದು.

13. ಇದೇ ರೀತಿ ಔಷಧಕ್ಕೆ ಬೇಕಾದ ಮೂಲ ವಸ್ತುಗಳು, ಕಚ್ಚಾ ವಸ್ತುಗಳು ದೇಶದಲ್ಲಿಯೇ ಸಿಗುತ್ತಿದ್ದರೆ ಅವುಗಳ ಆಮದೂ ಸಲ್ಲದು. ದೇಶದಲ್ಲಿರುವ ವಿದೇಶೀ-ಕಂಪನಿಗಳು ಕ್ಲಿಷ್ಟ ತಾಂತ್ರಿಕ ಸಹಾಯದಿಂದ ಮಾತ್ರ ಸಾಧ್ಯವಿರುವ ಸಂಯುಕ್ತಗಳಿಗಷ್ಟೇ ತಮ್ಮ ಉತ್ಪಾದನೆಯನ್ನು ಮೀಸಲಿಡಬೇಕು. ಎಂಜೈಮ್, ಎಂಟಾಸಿಡ್‌ಗಳಂಥ ಸುಲಭ ಸಂಯುಕ್ತಗಳನ್ನು ತಯಾರಿಸಕೂಡದು.

14. ದೇಶದಲ್ಲಿ ತಯಾರಾಗುತ್ತಿರುವ ಯಾವುದೇ ಔಷಧಕ್ಕೆಸಮಾನವಾದ ವಿದೇಶೀ ಬ್ರ್ಯಾಂಡ್ ಪೇಟೆಯಲ್ಲಿರಕೂಡದು.

15. ದೇಶದಲ್ಲಿ ತಮ್ಮದೇ ಫ್ಯಾಕ್ಟರಿ ಇಲ್ಲದ ಯಾವುದೇ ವಿದೇಶೀ ಕಂಪನಿ ತಮ್ಮ ದೇಶದಿಂದ ಔಷಧವನ್ನು ತಯಾರಿಸಿ ತಂದು ಇಲ್ಲಿ ಮಾರುವಂತಿಲ್ಲ. ಅಥವಾ ಇಲ್ಲಿಯೇ ಬೇರೆ ಕಂಪನಿಗಳಿಂದ ಕೊಂಡು ತಮ್ಮ ಬ್ರ್ಯಾಂಡ್ ಹಾಕಿ ಮಾರುವಂತಿಲ್ಲ.

ಇಂಥ ಒಂದು ಮಾರ್ಗಸೂಚಿಯನ್ನು ಅನುಸರಿಸಿ ಔಷಧಗಳನ್ನು ನಿಷೇಧ ಮಾಡಿದಾಗ ಮಾತ್ರ ನಮ್ಮ ದೇಶದಲ್ಲೂ ಜನರನ್ನು 'ಔಷಧಗಳಿಂದ ರಕ್ಷಿಸುವುದು' ಸಾಧ್ಯ.

# 9. ನಿಷೇಧಾಜ್ಞೆಯ ನಂತರ

ನಮ್ಮ ದೇಶದಲ್ಲಿ ಮೊಟ್ಟಮೊದಲ ಔಷಧ ನಿಷೇಧಾಜ್ಞೆ ಬಂದಿದ್ದು 1983 ರಲ್ಲಿ. ಆದರೆ ಇಂದಿಗೂ ಅಂದು ನಿಷೇಧವಾದ ಔಷಧಗಳು ಪೇಟೆಯಲ್ಲಿ ಸಿಗುತ್ತವೆ. ಅಷ್ಟೇ ಏಕೆ ವೈದ್ಯಕೀಯ ಗೈಡುಗಳಾದ CIMS, MIMS ಪುಸ್ತಕಗಳಲ್ಲೂ ಅವು ರಾಜಾರೋಷವಾಗಿ ಪ್ರಕಟವಾಗುತ್ತಿವೆ ಎಂದರೆ ಆಶ್ಚರ್ಯವಾಗುತ್ತದೆ.

ಮೈಕ್ರೊಪೈರಿನ್ (Micropyrin C) ಟೆರಾಮೈಸಿನ್ ಎಸ್ಎಫ್ (Terramycin -SF) ಮೈಗ್ರಿಲ್ (Migril) ಗಳು MIMS ನಲ್ಲಿ ಪ್ರತಿ ಬಾರಿ ಪ್ರಕಟವಾಗುವುದಷ್ಟೇ ಅಲ್ಲ, ಪೇಟೆಯಲ್ಲೂ ಧಾರಾಳವಾಗಿ ದೊರೆಯುತ್ತವೆಯೆಂದರೆ ನಿಷೇಧಾಜ್ಞೆಗೆ ಬೆಲೆಯೇ ಇಲ್ಲವೇ ? ಈ ಔಷಧಗಳ ಉತ್ಪಾದನಾ ತಾರೀಖು ಕೂಡ 1983 ರ ನಂತರದ್ದೇ ಆಗಿದೆಯೆಂದರೆ ಔಷಧ ಕಂಪನಿಗಳ ದಿಟ್ಟತನದ ಬಗ್ಗೆ ಆಶ್ಚರ್ಯವಾಗುತ್ತದೆ.

ಇದನ್ನೆಲ್ಲ ನೋಡಿದಾಗ ಔಷಧ ನಿಷೇಧವೆಂದರೆ ಸುಲಭದ ಮಾತಲ್ಲ ಎಂಬುದೂ ನಮಗೆ ಗೊತ್ತಾಗುವುದು. ಸರಕಾರದ ನಿಷೇಧಾಜ್ಞೆಯನ್ನೂ ಧಿಕ್ಕರಿಸುವಷ್ಟು ಬಲಾಢ್ಯ ಕಂಪನಿಗಳಿವು. ಜನರ ಆರೋಗ್ಯವಂತೂ ಎಂದೂ ಇವುಗಳ ಲಕ್ಷ್ಯದಲ್ಲಿ ಇಲ್ಲವೇ ಇಲ್ಲ.

ನಿಷೇಧಾಜ್ಞೆಯ ಮಸೂದೆ ತಯಾರಾಗುತ್ತಿದ್ದಂತೆಯೇ ಕಂಪನಿಗಳ ಜನರು ಸಂಬಂಧಿಸಿದ ಮಂತ್ರಿಗಳ, ಅಧಿಕಾರಿಗಳ ಹಿಂದೆ ಮುಂದೆ ಎಡತಾಕಲಾರಂಭಿಸುತ್ತವೆ. ಆಶೆ, ಆಮಿಷ, ಪ್ರಭಾವಗಳನ್ನೊಡ್ಡಿ ಮಸೂದೆಯನ್ನು ಆದಷ್ಟು ತಮಗೆ ಅನುಕೂಲವಾಗುವಂತೆ ಸೃಷ್ಟಿಸಿಕೊಳ್ಳುತ್ತವೆ.

ಇಷ್ಟಾಗಿಯೂ ನಿಷೇಧಾಜ್ಞೆ ಹೊರಟೇ ಬಿಟ್ಟಿತೆಂದರೆ, ಮುಂದೇನು ?

ಸರಕಾರ ಚಾಪೆಯ ಕೆಳಗೆ ನುಸುಳಿದರೆ ಔಷಧ ಕಂಪನಿಗಳು ರಂಗೋಲಿಯ ಕೆಳಗೆ ಓಡಾಡಬಲ್ಲವು. ಮೊದಲಿಗೆ ಇವು ನಿಷೇಧಾಜ್ಞೆ : ಜಾರಿಯಲ್ಲಿ ಬಾರದಂತೆ ಶತಾಯಗತಾಯ ಪ್ರಯತ್ನಿಸುತ್ತವೆ. ಫಲವಾಗಿ :

★ ಸರಕಾರವೇ ನಿಷೇಧಾಜ್ಞೆಯನ್ನು ಹಿಂತೆಗೆದುಕೊಳ್ಳಬಹುದು. ಉದಾಹರಣೆಗೆ ಕ್ಲಿಯೋಕ್ವಿನಾಲ್‌ನ್ನು ಸರಕಾರ ನಿಷೇಧಿಸಿತು. ನಂತರ ಸರಕಾರ ತನ್ನ ಆಜ್ಞೆಯನ್ನು ಹಿಂತೆಗೆದುಕೊಂಡಿತು. 'ನಮ್ಮ ದೇಶದಲ್ಲಿ ವಾಂತಿ ಬೇಧಿಗಳಿಂದ ಸಾಯುವದು ಅಪಾರ ಮಂದಿ. ಆದ್ದರಿಂದ ಕ್ಲಿಯೋಕ್ವಿನಾಲ್‌ನಂಥ ಔಷಧಿಗಳು ಇಲ್ಲಿ ಉಪಯುಕ್ತವೇ' ಎಂದು ಸಾರಿ ಬಿಟ್ಟಿತು.

★ ಔಷಧದ ಯಾವುದಾದರೂ ಒಂದು ರೂಪವನ್ನು ಮಾತ್ರ ನಿಷೇಧಿಸಬಹುದು. ಉದಾ : ಇ. ಓ. (ಇಸ್ಟ್ರೋಜನ್ ಪ್ರೊಜೆಸ್ಟರಾನ್) ಸಂಯುಕ್ತಗಳ ಮಾತ್ರೆಗಳನ್ನು ಮಾತ್ರ, 1988 ರಲ್ಲಿ ಸರಕಾರ ನಿಷೇಧಿಸಿತ್ತು. ಇಲ್ಲಿ

ಅತಿಹೆಚ್ಚು ದುರುಪಯೋಗ ಆಗುತ್ತಿರುವುದು. ಇ. ಓ. ಇಂಜೆಕ್ಷನ್‌ಗಳು ಆ ನಂತರ ಮುಂಬಯಿಯ ಒಂದು ಸಂಸ್ಥೆ ಕೋರ್ಟಿನ ಮೊರೆ ಹೊಕ್ಕ ನಂತರವೇ ಎಲ್ಲ ರೂಪದ ಇ. ಓ. ಸಂಯುಕ್ತಗಳು ನಿಷೇಧ ಆದವು.ಈ ಮಧ್ಯದ ಅವಧಿಯಲ್ಲಿ ಸಾಕಷ್ಟು ಇಂಜೆಕ್ಷನ್‌ಗಳು ಮಾರಾಟ ಆಗಿರುತ್ತವೆ.

★ ಕೆಲವೊಮ್ಮೆ ನಿಷೇಧಾಜ್ಞೆಯ ಬರಹವೇ ದ್ವಂದ್ವಾರ್ಥದಲ್ಲಿರುತ್ತದೆ. ಉದಾಹರಣೆಗೆ ಸ್ಟಿರಾಯಿಡ್‌ಗಳನ್ನು ನಿಷೇಧಿಸುವಾಗ 'ಅಸ್ತಮಾಕ್ಕೆ ಉಪ-ಯೋಗಿಸುವ ಸ್ಟಿರಾಯಿಡ್ ಮಿಶ್ರ ಸಂಯುಕ್ತದ ಹೊರತಾಗಿ' ಎಂದು ಆಜ್ಞೆ-ಯಲ್ಲಿತ್ತು. ಆ ಕೂಡಲೇ ಔಷಧ ಕಂಪನಿಗಳು ತಮ್ಮ ಎಲ್ಲ ಸ್ಟಿರಾಯಿಡ್ ಮಿಶ್ರ ಸಂಯುಕ್ತಗಳನ್ನೂ ಅಸ್ತಮಾದ ಔಷಧ ಎಂದು ಹೆಸರು ಬದಲಿಸಿಬಿಟ್ಟವು. ಆ ಔಷಧಗಳ ಉಪಯೋಗ ಹಿಂದಿದ್ದಂತೆಯೇ ಮುಂದುವರೆಯಿತು.

★ ಇಂಥ ನಿಷೇಧಾಜ್ಞೆಯಲ್ಲಿನ ಕಳ್ಳಗಿಂಡಿಯನ್ನೇ ಔಷಧ ಕಂಪನಿಗಳು ಹುಡುಕುತ್ತಿರುತ್ತವೆ. ಟೆಟ್ರಾಸೈಕ್ಲಿನ್ ನ್ನು ಚಿಕ್ಕಮಕ್ಕಳು ಸೇವಿಸಿದರೆ ಹಲ್ಲುಗಳ ಬಣ್ಣ ಕಪ್ಪಾಗುತ್ತವೆ. ಎಲುಬುಗಳ ಬೆಳವಣಿಗೆಯೂ ಕುಂಠಿತ ಆಗುತ್ತದೆಂದು ಸರಕಾರ ಅದರ ದ್ರವರೂಪ ಔಷಧವನ್ನು ನಿಷೇಧಿಸಿತು. ಕೂಡಲೇ ಕಂಪನಿಗಳು ಆಕ್ಸಿಟೆಟ್ರಾಸೈಕ್ಲಿನ್ ಮತ್ತು ಡಿಮಾಕ್ಸಿಸೈಕ್ಲಿನ್ ದ್ರವವನ್ನು ತಯಾರು ಮಾಡತೊಡಗಿದವು. ಇವನ್ನು ನಿಷೇಧ ಮಾಡಿದಾಗ ಟೆಟ್ರಾಸೈಕ್ಲಿನ್ ಮಕ್ಕಳ ಮಾತ್ರೆಗಳು ಪೇಟೆಗೆ ಬರತೊಡಗಿದವು. ಕಂಪನಿಗಳ ಈ ಪ್ರಯತ್ನಗಳು ನಿಷೇಧಾಜ್ಞೆಯ ಮೂಲ ಉದ್ದೇಶವನ್ನೇ ಹಾಳು ಮಾಡುತ್ತವೆ. ಔಷಧ ಬೇರೆ ರೂಪದಲ್ಲಿ ಬಂದಾಕ್ಷಣ ಅದರ ದುಷ್ಪರಿಣಾಮ ಆಗುವುದು ನಿಂತೀತೆ ?

★ ಎಷ್ಟೋ ಬಾರಿ ನಿಷೇಧಾಜ್ಞೆ ಹೊರಟಿರುತ್ತದೆ. ಆದರೆ ಅದು ಜಾರಿಯಲ್ಲಿ ಬರುವುದೇ ಇಲ್ಲ. 1983 ರಲ್ಲಿ ನಿಷೇಧವಾಗಿರುವ ಔಷಧಗಳು ಈಗಲೂ ಪೇಟೆ-ಯಲ್ಲಿ ಸಿಗುತ್ತಿರುವುದೇ ಇದಕ್ಕೆ ಸಾಕ್ಷಿ. ಔಷಧ ನಿಯಂತ್ರಣಾಧಿಕಾರಿಗಳಿಗೆ ಆಜ್ಞೆ ಬಂದಿದ್ದೇ ಗೊತ್ತಿರುವುದಿಲ್ಲ. ಗೊತ್ತಿದ್ದರೂ ಅದನ್ನು ಜಾರಿಯಲ್ಲಿ ತರುವಲ್ಲಿ ಅವರು ಆಸಕ್ತಿ ತೋರಿಸುವುದಿಲ್ಲ. ಇನ್ನು ಲಂಚ, ರುಷುವತ್ತುಗಳ ಆಟವಂತೂ ಇದ್ದೇ ಇದೆ..

★ ಇವೆಲ್ಲ ದಾರಿಗಳ ಹೊರತಾಗಿ ಇನ್ನೂ ಒಂದು ದಾರಿ ಔಷಧ ಕಂಪನಿಗಳಿಗೆ ಇದೆ. ಅದೆಂದರೆ ಕೋರ್ಟಿನಿಂದ ನಿಷೇಧಾಜ್ಞೆಗೆ ತಡೆಯಾಜ್ಞೆಯನ್ನು ತರುವುದು. ಇ. ಓ. ಔಷಧಗಳು 1982 ರಲ್ಲೇ ನಿಷೇಧ ಆಗಿದ್ದವು. ಕೂಡಲೇ ಔಷಧ ಕಂಪನಿಗಳು ಅದಕ್ಕೆ ತಡೆಯಾಜ್ಞೆ ತಂದಿಬಿಟ್ಟವು. ಮಾರುಕಟ್ಟೆಯಲ್ಲಿ ಯಾವುದೇ ಏರುಪೇರಾಗಲೇ ಇಲ್ಲ.

ಹೀಗಿರುವಾಗ ಎಷ್ಟೋ ಬಾರಿ ಆಯಾ ಔಷಧಕ್ಕೆ ಈಗ ನಿಷೇಧಾಜ್ಞೆ ಜಾರಿ-ಯಲ್ಲಿದೆಯೋ ಅಥವಾ ತಡೆಯಾಜ್ಞೆ ಜಾರಿಯಲ್ಲಿದೆಯೋ ಗೊತ್ತಾಗದೇ ಗೊಂದಲಮಯ ಪರಿಸ್ಥಿತಿ ಉಂಟಾಗಿ ಬಿಡುತ್ತವೆ. ಎಷ್ಟೋ ನಿಷೇಧಿತ ಔಷಧಿಗಳ

ಕತೆ ಇದೇ ಆಗಿದೆ. ಔಷಧ ಕಂಪನಿಗಳು ಇಂಥ ಗೊಂದಲಮಯ ಸ್ಥಿತಿಯನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತವೆ. ತಮ್ಮ ಔಷಧವನ್ನು ಇನ್ನೂ ಹೆಚ್ಚು ಪ್ರಚಾರ ಮಾಡಿ ಹಳ್ಳಿಹಳ್ಳಿಗಳಲ್ಲಿ, ಪಾನ್‌ಬೀಡಾ ಅಂಗಡಿಗಳಲ್ಲಿ, ಹಳ್ಳಿಯ ಇಂಜೆಕ್ಷನ್ ವೈದ್ಯರಲ್ಲಿ ಅದು ತಲುಪಿ ತುಂಬಿಕೊಳ್ಳುವಂತೆ ವ್ಯವಸ್ಥೆ ಮಾಡುತ್ತವೆ. ಫಲವಾಗಿ ವೈದ್ಯರ ಬರಹ ಇಲ್ಲದೆಯೇ ಎಲ್ಲಿ ಬೇಕಾದಲ್ಲಿ ರಸೀದಿ ರಹಿತವಾಗಿ ನಿಷೇಧಿತ ಔಷಧಗಳು ಸಿಗತೊಡಗುತ್ತವೆ.

ಈಗ ರೋಗಿಗಳ ಗತಿಯೇನು ?.

ಗ್ರಾಹಕನಿಗಿರುವ ದಾರಿಯಾವುದು ?

# 10. ಗ್ರಾಹಕ ಜಾಗೃತಿ

ಇದೆ. ಒಂದು ದಾರಿ ಇದೆ. ಅದೇ ಗ್ರಾಹಕರ ಜಾಗೃತಿ. ಬಳಕೆದಾರ ಎಚ್ಚೆತ್ತುಕೊಳ್ಳುವದು. ತನ್ನ ಆರೋಗ್ಯ ಕಾಪಾಡಿಕೊಳ್ಳಲು ತಾನೇ ಹೋರಾಡುವದು. ನಿಷೇಧ ಆಗಿರುವ ಆಗಬೇಕಾದ ಔಷಧಗಳ ಬಗ್ಗೆ ಗ್ರಾಹಕ ಸ್ವತಃ ತಿಳಿದುಕೊಳ್ಳುವುದು.

★ ಅಂಥ ಔಷಧಗಳನ್ನು ಎಂದಿಗೂ ಉಪಯೋಗಿಸಬಾರದು.

★ ಅನವಶ್ಯಕ ಔಷಧಗಳನ್ನು ಬಹಿಷ್ಕರಿಸುವುದು.

★ ಮನೆ ಮಂದಿಗೆ, ನೆಂಟರಿಗೆ, ಮಿತ್ರರಿಗೆ ಈ ಬಗ್ಗೆ ಮಾಹಿತಿ ಕೊಡುವದು.

★ ಈ ಬಗ್ಗೆ ಪರಿಚಿತ ವೈದ್ಯರಿಗೆ, ಆರೋಗ್ಯಕಾರ್ಯಕರ್ತರಿಗೆ, ಔಷಧ ಅಂಗಡಿಯವರಿಗೆ ಹೇಳುವದು.

★ ನಿಷೇಧಿತ ಔಷಧಗಳನ್ನು ಖರೀದಿಸಿ ರಸೀದಿ ಪಡೆದು ಔಷಧ ನಿಯಂತ್ರಣಾಧಿಕಾರಿಗೆ ಬರೆದು ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯ ಪಡಿಸುವದು. (ವಿಳಾಸ :- ಔಷಧ ನಿಯಂತ್ರಣಾಧಿಕಾರಿಗಳು, ಅರಮನೆ ರಸ್ತೆ, ಬೆಂಗಳೂರು-560 001) ರಸೀದಿ ಇಲ್ಲದೇ ನಿಷೇಧಿತ ಔಷಧ ಸಿಗುತ್ತಿದ್ದರೆ ಅಂಥ ಅಂಗಡಿಗಳ ವಿರುದ್ಧ ದೂರು ನೀಡುವದು.

★ ಆದಷ್ಟು ಮಿಶ್ರ ಸಂಯುಕ್ತಗಳನ್ನು ಸೇವಿಸುವದನ್ನು ತಪ್ಪಿಸಬೇಕು.

★ ಔಷಧದ ಕೊನೆಯ ತಾರೀಖು (expiry date) ಮುಗಿದಿದ್ದರೆ ಅಂಥ ಔಷಧ ಖರೀದಿಸಬಾರದು.

★ ವೈದ್ಯರು ಔಷಧ ಬರೆದುಕೊಟ್ಟಾಗ ಆ ಔಷಧದ ಬಗ್ಗೆ ಮಾಹಿತಿ ಸಂಗ್ರಹಿಸುವುದು. ಅದನ್ನು ಎಷ್ಟು ದಿನ ಸೇವಿಸಬೇಕು. ಅದರ ಉಪಯುಕ್ತತೆ ಎಷ್ಟು, ಅಡ್ಡ ಪರಿಣಾಮ ವೇನಾದರೂ ಇದೆಯೆ. ಅದರದೇ ಕಡಿಮೆ ಬೆಲೆಯ ಬ್ರ್ಯಾಂಡ್ ಇದೆಯ . . . . ಇತ್ಯಾದಿ

★ ನಿಮ್ಮಲ್ಲೇ ಒಂದು ಔಷಧ ಗ್ರಾಹಕರ ಸಂಘಟನೆಯನ್ನು ಮಾಡಿಕೊಂಡು ಔಷಧ ಚಿಂತನೆಯನ್ನು ಬೆಂಬಲಿಸುವುದು.

# 11. ಗ್ಲೊಸರಿ

ಸಾಮಾನ್ಯವಾಗಿ ಔಷಧ ನಿಷೇಧ ಮಾಡುವಾಗ ಜನೆರಿಕ್ ಹೆಸರುಗಳನ್ನು ಕೊಡುತ್ತಾರೆ. ಆದರೆ ಜನರಿಗೆ ಪರಿಚಯ ಇರುವುದು ಬ್ರಾಂಡ್ ಹೆಸರುಗಳು. ಕಾರಣ ಈ ಅಧ್ಯಾಯದಲ್ಲಿ ನಿಷೇಧ ಆಗಿಯೂ ಪೇಟೆಯಲ್ಲಿ ಸಿಗುತ್ತಿರುವ ಔಷಧಗಳ ಮತ್ತು ನಿಷೇಧ ಆಗಬೇಕಾದ ಔಷಧಗಳ ಬ್ರಾಂಡ್ ಹೆಸರುಗಳನ್ನು ಕೊಟ್ಟಿದೆ. ಆದರೆ ಒಂದೊಂದು ಔಷಧವನ್ನೂ ನೂರಾರು ಕಂಪನಿಗಳು ತಯಾರಿಸಿ ಮಾರುತ್ತಿರುತ್ತವೆ. ಅಷ್ಟೆಲ್ಲ ಔಷಧಗಳ ಹೆಸರುಗಳನ್ನು ಕೊಡುವುದು ನಮ್ಮ ಪ್ರಯತ್ನಕ್ಕೆ ಮೀರಿದ್ದು ಜನರು ತಮ್ಮ ಕೈಗೆ ಯಾವುದೇ ಔಷಧ ಸಿಕ್ಕಾಗ ಅದರ ಮೂಲ ಹೆಸರು ಏನಿದೆ ಎಂದು ನೋಡುವುದನ್ನು ರೂಢಿಮಾಡಿಕೊಳ್ಳಬೇಕು. ಹಿಂದಿನ ಅಧ್ಯಾಯಗಳಲ್ಲಿ ನಮೂದಿತವಾದ ಕೆಲವು ಔಷಧಗಳ ಜನಪ್ರಿಯ ಬ್ರಾಂಡ್ ಹೆಸರುಗಳನ್ನು ಇಲ್ಲಿ ಕೊಟ್ಟಿದೆ

1) ಅಮಿಡೋಪೈರಿನ್ (Amidopyrine)

2) ಅಟ್ರೋಪೀನ್ ಮಿಶ್ರಣ Fixed dose combinations of Atropine
   Asmotone
   Migranil
   Spasmizol
   Spasmilysin
   Synalgisic

3) ಸ್ಟ್ರಿಕ್ನೀನ್ ಮತ್ತು ಕೇಫೀನ್ ಸೇರಿಸಿದ ಟಾನಿಕ್‌ಗಳು
   Strycnine and Caffine in tonics
   Vinolecithin

4) ಸೋಡಿಯಂ ಬ್ರೋಮೈಡ್, ಕ್ಲೋರಲ್ ಹೈಡ್ರೆಟ್‌ಗಳು ಬೇರೆ ಔಷಧಗಳಲ್ಲಿ Fixed dose combinations of Sodium bromide / Chloral hydrate with other drugs

5) ಫಿನಾಸಿಟಿನ್

6) ಅಲರ್ಜಿ ನಿವಾರಕ ಮತ್ತು ಬೇಧಿ ನಿವಾರಕಗಳ ಮಿಶ್ರ ಸಂಯುಕ್ತ

Fixed dose combinations of anti-histamics and anti diarrhoeals

7) ಪೆನಿಸಿಲಿನ್ ಮತ್ತು ಸಲ್ಫಾಮೈಡ್‌ಗಳ ಮಿಶ್ರಣ
   Fixed dose combination of Pencillin and Sulphamide

8) ವಿಟಮಿನ್ ಮತ್ತು ನೋವು ನಿವಾರಕಗಳ ಮಿಶ್ರಣ
   Fixed dose combination of Vitamins with Analgesics
   Micropyrin -C

9) ಟೆಟ್ರಾಸೈಕ್ಲಿನ್ ಜೊತೆ ವಿಟಮಿನ್ ಸಿ ಮಿಶ್ರಣ

Fixed dose combination of Tetracycline with Vit -C
Achromycin Inj.
Ceedox
Cycbdox
Terryamycin SF
Tetravit 250
Triycycline-C

10) ಸ್ಟಿರಾಯಿಡ್‌ಗಳನ್ನು ಬೇರೆ ಔಷಧಗಳೊಂದಿಗೆ ಸೇರಿಸುವದು

Fixed dose combinations of steroids with other drugs
Cortophen
Betaklor
Centimal
Docabolin

11) ಕ್ಲೋರಾಂಫೆನಿಕಾಲ್‌ನ್ನು ಬೇರೆ ಔಷಧದೊಂದಿಗೆ ಸೇರಿಸುವುದು

Fixed dose combinations of Chloramphenicol

12) ಎರ್ಗಾಟ್‌ನ್ ಮಿಶ್ರ ಸಂಯುಕ್ತಗಳು

Fixed dose combinations of Ergot
Bellergal —IN
Cafergot
Ergophen
Migranil
Migril
Migritab
Plesonal -I
Styptomet
Syntometrine
Vasograin

13) ಕ್ಷಯರೋಗದ ಔಷಧಗಳೊಂದಿಗೆ ವಿಟಮಿನ್ ಮಿಶ್ರಣ

Vitamins + Anti-TB

14) ಟೆಟ್ರಾಸೈಕ್ಲಿನ್ / ಆಕ್ಸಿಟೆಟ್ರಾಸೈಕ್ಲಿನ್/ಡಿಮೋಕ್ಸಿಸೈಕ್ಲಿನ್‌ಗಳ ದ್ರವರೂಪ ಮಿಶ್ರ ಸಂಯುಕ್ತಗಳು

Tetracycline / Oxytetracycline / Demoxycycline Oral liquid preparations

15) ಮೆಥಾಕ್ವಲೋನ್ Methaqualone

16) ಅನಾಬೋಲಿಕ್ ಸ್ಟಿರಾಯಿಡ್‌ಗಳನ್ನು ಬೇರೆ ಔಷಧಗಳೊಂದಿಗೆ ಸೇರಿಸುವದು.

Anabolic Steroids with other drugs
ಮತ್ತು ಅನಾಬೋಲಿಕ್ ಸ್ಟಿರಾಯಿಡ್ ಟಾನಿಕ್‌ಗಳು

Anabolic steroids for children
Anabolex - $B_{12}$
Aquaviron - $B_{12}$
Decabolin
Evabolin
Neurabolti
Proviril - $B_{12}$
Trinergic Inj.
Adroyd
Biodebol
Bionabolin
Deca-Durabolin
Deca-Durbolin - 100
Durabolin
Metabol
Orabolin
Orbolin drops
Stromba
Testoboin
Trinergic
Unabol
Winstrol

17) ಟಾನಿಕ್‌ಗಳಲ್ಲಿ ಕೆಫೀನ್

Caffine in Tonics
Aminovin - II
Aminevin - Tonic
Ciltone
Santevini
VITAHEXT

18) ಸ್ಟ್ರಿಕ್ನಿನ್ ಇರುವ ಔಷಧಗಳು

Drugs containing Strychnine
Netarine - Tonic
Quinohaemogen
Strembin
Vigotab
Vitmol

19) ಯೊಹಿಂಬೀನ್ ಇರುವ ಔಷಧಗಳು
Drugs containing Yohimbine
Nectarine pearls
Vigotab
Yohimbine
Testophos

20) ಆರ್ಸೆನಿಕ್ ಇರುವ ಔಷಧಗಳು
Drugs containing Arsenic
Nectarine Pearls
Quinohaemogen

21) ಉರಿ ನಿವಾರಕ ಔಷಧಗಳೊಂದಿಗೆ ವಿಟಮಿನ್ ಮಿಶ್ರಣ
Anti-inflamatory drugs with vitamins Ranodine

22) ನಿದ್ರ ಔಷಧಗಳೊಂದಿಗೆ ವಿಟಮಿನ್
Tranquillizers with Vitamins
Placedos - 2
Placidos - 5
Placidox - 16

23) ಇಸ್ಟ್ರೋಜೆನ್ ಪ್ರೊಜೆಸ್ಟರಾನ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆರೆಸಿ
Fixed dose combinations of High dose estrogen and progesteron
E. P. Forte
Disecron Forte
Lut-Estron Forte
Menstrogen
Menstrogen Forte
Orasecron Forte
Orgalutin
Osterone

24) ಅನಾಲ್ಜಿನ್ Analgin
Aarelgin
Adgesic
Adol
Algesin -O
Algeril
Alpox
Anadex
Anacet

Analag
Analgin
Analpar
Anamol
Anoxy
Avalgin
Avafortan
Baralgan
Belgin
Benalgis
Biogin
Bilalgin
Buscopan Comp.
Butacortindon
Butacortindon
Butagin
Butapen Plus
Butuster
Canapar
Capagin
Cartagin
Velgal
Cemizole
Celolgin
Cetalgin -D
Cetogin
Codolsic
Dethalgin
Dexabulalgin
Dexalgin Plus
Diapar
Dicigesic -N
Dicolgin
Dipralgin
Dizalin
Delagin
Dolo-Neurobin
Doloril -A
Delotame
Dolotril

Deloxun
Doloxene
D—Pyrone
Dublactin
Duogesic
Dypalgin
Ebijlam
Epagin
Esglpyrin
Eucrasil
Pargesic
Fevozone
Flunil
Gavalgin
Geecoprin
Ginol
Histarin
Iccalgin
Indalgin
Indo-Analgin
Inflagin
Inflar
Jemjesic
Kanamol
Kanopar
Kapaxgin
Kaptragin
Kelgin
Kepoxgin
Kpl-Pane
La-pyrin
Largesic
Medalgin
Maxigesic
Metabuladic
Metabuladox
Metamizole
Metamizole
Metoxyl
Micron-Plus

Molgin
Monalgin
Myalgin
Mylogin
Narcogin
Narogene
Neorin
Nivelgin
novalgin
Novapam
Nurolgit
Nycin
Oad
Orphalgin
Oxal
Oxalgin
Oxan-V
Oxigin
Oxydigin
Oxydril -DS
Oxymol
Oxynal
Oxypose
Oxypyron
Oxyzol
Palgin
Pamagin
Pamolgin
paralgenol
Paragesic
paralgicin
paralgin
Paranalgin
Par-Analgin
Parzoll
Paraladim
Penalfine
Penalgin
Petragin
PFI
PRC
Predniphenol
Primdril
Promalgin
Pyragesic
Quickalgin
Referin
Repalgin
Resin
Ricofast
Rumalgin
Rumasol
Rupalgin
Sedyn-A-Forte
Selectagesic
Aonalgin
Shormetal -D
Spalcin
Spanil
Spasaron
Spasmatac
Spasmate
Spasmuzol
Spasmlan
Spasmo
Spasme-Amidozone
spasmelysin
Spasmogin
Starcygin
Sterpose A N.
Sunalgin
Supralgin
Synalgesic
Trigerzin
Trigin
Tromalgin
Trypin
Tunogyn
Ultragin
Uniprox

Vespanil
Virgonalgin
Wespalgin
Zimalgin -A
Zinalgin

25) ಆಕ್ಸಿಫೆನ್‌ಬ್ಯುಟಾಜೋನ್(Oxyphenbutazone)
ಫಿನೈಲಬ್ಯುಟಾಜೋನ್ (Phenylbutazone)

Acetazone
Acligesic
Acitamol
Alcapyrin
Algesin
Algeril
Algesin -C
Alophen
Amidozone
Anox
Anoxy
Amphipyrin
Aquapyrin
Arcon
Arcure
Arden
Argoyrin
Aristopyrin
Arodil
Arthozolin
Baripyrin
Beesopyride
Bestophen
Belaflam
Broxyl
Butacortindon
Butadex
Butacorl
Butatnol
Butanil
Butaphen
Butapyringa
Butastex
Cartagin
Celgal -P
Cetazone -D
Cepyrin
Coxin
Cypadril
Dexabutazone
Dexaphenalgin
Desapyrin -D
Decapyrine
Dafenoxyn
Deloxene
Delta Flama
Dexabutarin
Dexabutalgin
Dexastarcogin -N
Dexopam
Diazeril
Dicipyrin
Dicipyrin -N
Disiflam
Doloflam
Doloxan
Doloxy -T
Ebeflam
Esgipyrin
Gavazone
Febrogisic
Flamar
Flamar Cream
Glycozide

G. Oxyl
Inapyrin
Intasolene
Inflandril
Infla-Proxycap
Inflar
Infladol
Inflamak
Inflamet
Inflarid
INFLAVAN
Inflazone
Intaryl
Jagril
Jamril
Kapflam
Kapoxgin
Kebutacine
Mentigesic
Largesic
Maxigesic
Medopyrin
Meparin
Metazone
Metrozole
Metrozole -F
Menoril
Nandril
Neoril
NERMYCIN
Neurodin
Neurogesic
Neuroxy
Neuroven
Nibidril
Niprine
Onalpam
OPD
Ophen
Olgin
Orthodex
Oxal
Oxalpam
Oxamol
Oxan-V
Oxymide
Oxybutal
Oxypam
Oxin
Oxyryl -Plus
Oxyphen.
Oxyphenbutazone
Paramin
Parazine
Paroxy -O
Purvon Forte
Pentoxy
Phemol -D
Phenamide
Phenylbultazone
Phenzyn -A
Placidin
Ploxy
Prenovil
Pairheuma
Prolyn
Prestigisic
Prestigen
Premoxyphen
Pyrine
Reducin
Refering
Remaril
Reparil
Ribopyrine
Rilifon
Roxygin
Roxyfam
Rumatin
Rumalgin

Sanipyrine
Sanoxymol
Sidril
Siroril
Somagesic
S-Pyrine
Starpyrine
Suganril
Tanderil
Tendazone
Thiodril
Thiopyrin
Trigxyl
Triactin -D
Trigerzin
Tromin
Tromin
Tromagesic
Udyapyrine
Vencogesic
Victopin
Vence Oxypamol
Zolandon
Zolandin Alka
Virsalin

26) ಕ್ಲಿಯೋಕ್ವಿನಾಲ್ / ಹೈಡ್ರಾಕ್ಸಿಕ್ವಿನಲಿನ್ (Clioquinol / Hydroxy quinaline

Aldiamycin
Aliquin
Aliquin Forte
Ambarid
Ambilan
Ambiquinol
Ambizymeforte
Amebide TC
Amebiotic
Amecure
Amicline
Amicline Plus
Amidochlor
Amidys
Amitrig
Amocidol
Amoebin
Amoebindon
Amoechin
Amygil Plus
Andocin
Aremzyme
Bioquin
Bioquin Forte
Bionyl
Bradex Vioform
Chlorambin
Chloropectidin Forte
Clogil
Colon
Combiasis
Cosmzem
Curogyl
Davoquin
Diacheck
Diarzole
Diazole
Dinoquin
Diogyl
Diprogorm
Digichlor
Di-iodohydr-
oxyquinoline
Dysental
Dysfur Plus
Enapec
Entacon
Entero Bael
Entromin
Enteropectin

Enteroquinol
Enteroquin
Enterotore
Entrozyvit
Eroquin
Eroquin -F
Faruid
Floraquin
Forquin
Forquinol
Furogil
Fungrin -P
Furaquin
Gestro Quinol
Glucoline
G quin
Histoquin
Iodofur
Idomet
Intestren
Intestren -Forte
Intestopan -In
Indochloroquin
Indochlohyoxyquinoline
Indocortindon
Jemeobic
Kentizole
Lumigyl
Metaquin
Metroquin
Metrospet
Mexogyl
Nid
Meobagyl
Nirembin
Noronidagyl
Nudy's Comp.
Pectocin
Ompectol
protoquit
protozide
Qugyl
Quinagyl
Quinomycin
Quinomycin Forte
Quinidochlor
Quinizole
Quinoform
Quinogel
Quinomet
Quinozol
Quincycline
Quinsentry
Rayquinol
Resostren Comp.
Saril
Saicodys
Siodoentherin
Stadmed Entrozyme
Stamaquin
Stambiquin
Sulphachin
Sulpha Kaolin Forte
Sulpha Quino Bael
Sulphazyme
Suprabiosis
Thiozyme
Tricodys
Trimeba Comp.
Tryquin
Unidys Comp
Uni Enzyme
Vagiquin
Viniquin
Vencosarin SN
Viodochlor
Sesce Dys
Zoloquin

27) ಕ್ಲೋರಾಂಫೆನಿಕಲ್ ಮತ್ತು ಸ್ಟ್ರೆಪ್ಟೋಮೈಸಿನ್ ಮಿಶ್ರಸಂಯುಕ್ತ
Chlorampenicol and Streptomycin combination

28) ಸ್ಟ್ರೆಪ್ಟೋಮೈಸಿನ್ ಮತ್ತು ಪೆನಿಸಿಲಿನ್ ಮಿಶ್ರ ಸಂಯುಕ್ತ
Fixed dose combinations of Streptomycin and Penicillin
Bistrephen
Discrysticin - S Fortis
Discrystici - S Paed
Omnamycin
Penstrep